

# ಶತ

# ೧೦೦

# 100

ಗ್ರಂಥಕರ್ತ : ತ್ರಿಮತ ಏಕೈಕ ಗುರುವು


ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, ಶತಾಧಿಕ ಗ್ರಂಥಕರ್ತ

ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**




ಗ್ರಂಥ ಮುದ್ರಣ

**ಇಂದೂ ಜ್ಞಾನವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 41 ಪ್ರಥಮ ಮುದ್ರಣ : ಜೂನ್–2019

ಪ್ರತಿಗಳು : 1000 **ಬೆಲೆ. /–**

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು-ಉತ್ತರಗಳು.
03. ಧರ್ಮ-ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ-ಅಸತ್ಯವಾ?)
06. ದೆವ್ವಗಳಹಾಗೂ-ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ-ಮಹಿಮೆ (ಸತ್ಯವಾ-ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ-ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ-ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ-ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು-963.
38. ಮತ-ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು-ಆಸ್ತಿಕರು.
44. ಹೇತುವಾದ-ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ಶೀರ್ಮ.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು-ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ-ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ - ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ, 78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು, 80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ.
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು-ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು-ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ-ರಾವಣಬ್ರಹ್ಮ-ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ, 94. ಪ್ರಾಥಮಿಕ ಜ್ಞಾನ
95. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
96. ಧ್ಯಾನ - ಪ್ರಾರ್ಥನೆ - ನಮಾಜ್
97. ಹಿಂದೂ ಧರ್ಮಕ್ಕೆ ರಕ್ಷಣೆ ಅಗತ್ಯವಾ?
98. ವೇದಗಳು ಮನುಷ್ಯನಿಗೆ ಅಗತ್ಯವಾ?
99. ಸಿದ್ಧಿ ಬೋಧನೆ.
100. ಸತ್ಯಾರ್ಥ ಪ್ರಕಾಶಣೆಯಲ್ಲಿ ಸತ್ಯವೆಷ್ಟು.
101. ಸೊನ್ನೆ, 102. ೧೦೦-ಶತಂ-100.

**ಸೂಚನೆ** : ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಲಾಗದ ಪದಗಳು ಹಾಗೆಯೇ ಮುದ್ರಿಸಲಾಗಿದೆ.

# 04 ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು, 02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ, 20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ, 25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು, 28. ಪ್ರಕೃತಿ–ವಿಕೃತಿ.
29. ಮಾಟ–ಮಂದು, 30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ–
    ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ–
    ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–
    ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ–ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ, 52. ಪುಟ್ಟುಟ–ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ, 57. ಗುರುಪೌರ್ಣಮಿ.
58. ಯೋಗೀಶ್ವರುಲ
    ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.
62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ –
    ದೇಹಂ ಮೋಹಂ.
65. ಜೀರ್ಣ+ಆಶಯಮು.
66. ಮೇಘಂ ಒಕಭೂತಂ–
    ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ
    ಮರಣಂ.
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು–
    ರೆಂಡು ಜಾಗಾಲು.

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು 05

**DVD's**

75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು–
ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು, 82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು–
ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ
ಮಹೇಂದ್ರಜಾಲ,
ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ.
(ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು–
ಆರು–ತೊಮ್ಮಿದಿ.
89. 6–3=6.
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು, 99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು, 103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕವಾಡು.
109. ಗ್ರಂಥಮು – ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಮಾಯ ಮರ್ಮಮು–ಆತ್ಮ ಧರ್ಮಮು.
115. ಶ್ರೀಕೃಷ್ಣುಡು
ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ
ಪ್ರಥಮವಾಕ್ಯಮುಲು.
117. ಅದುರು–ಬೆದುರು
118. ಶವಮು – ಶಿವಮು.
119. ಧರ್ಮಚಕ್ರಮು, 120. ಗ್ರಾಹಿತ ಶಕ್ತಿ
121. ಭೌತಿಕಮು – ಅಭೌತಿಕಮು.
122. ದೇವುನಿ ಆಜ್ಞ ಮರಣಂ.
123. ಮತ ಸಾಮರಸ್ಯಂ.
124. ಮೋಕ್ಷಮು – ಮೋಸಮು.
125. ಅಕ್ಷರ ಜ್ಞಾನಮು, 126. ಲಲಾಜಲಮು.
127. ದೈವ ಧರ್ಮಗಳು–
ಮತಸಾಂಪ್ರದಾಯಗಳು.
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ–ಮಂದು, 130. ಕಾಲಚಕ್ರಂ.
131. ಬ್ರಹ್ಮವಿದ್ಯ, 132. ಶಕ್ತಿ.
133. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.
134. ಪೌರ್ಣಮಿ–ಅಮಾವಾಸ್ಯ.
135. ಈಶ್ವರ–ಪರಮೇಶ್ವರ.
136. ಪುರುಷೋತ್ತಮ–ಶ್ರೀರಾಮ.
137. ದೇವುನಿಕಿ ಒಕ್ಕಡೇ ಕುಮಾರುಡು–
ದೇವುನಿಕಿ ಅನೇಕಮಂದಿ ಕುಮಾರುಲು.
138. ಜಲಂ, 139. ಅಧಿಪತಿ.
140. ಗ್ರಹಾಂತರವಾಸುಲು.
141. ದೇವುಡು ದ್ವಿತೀಯುಡಾ?
ಅದ್ವಿತೀಯುಡಾ?
142. ಮನಿಷಿ ಚೇತಿಲೋ ಭಗವಂತುಡು–
ದೇವುನಿ ಚೇತಿಲೋ ಮನಿಷಿ.
143. ಶರೀರಮುಲೋ ರಕ್ತಮು–
ಗ್ರಂಥಮುಲೋ ಜ್ಞಾನಮು.
144. ಗ್ರಂಥಮುಲೋ ಜ್ಞಾನಮು–
ಮನಿಷಿಲೋ ರಕ್ತಮು.
145. ತ್ರೈತ ಸಿದ್ಧಾಂತ ಚರಿತ್ರ.
146. ಕುಶಾಲ್ ಕುಶಾಲ್ ಲಂಜಮ್ಮ
ನಾ ನೆತ್ತಿ ಮೀದ ರೆಂಡು ತನ್ನಮ್ಮ.
147. ರಾಜಾಧಿ ರಾಜಾ–ದೇವಾಧಿ ದೇವಾ.

# ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

**ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)**

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P

Cell : **ಲಕ್ಷ್ಮಿನಾರಾಯಣಾಚಾರಿ**–09440556968. **ವೆಂಕಟೇಶ್**–08096816963.

## ಇಂದೂ ಜ್ಞಾನ ವೇದಿಕೆ ಸದಸ್ಯರು

**ಶ್ರೀದೇವಿ**
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
ಸೆಲ್:9611133635,8050309963.

**ಜಿ. ರಾಧಾಕೃಷ್ಣಾ ರೆಡ್ಡಿ**
ಮರಲೂರು, ತುಮಕೂರು (ಜಿ),
ಕರ್ನಾಟಕ, ಸೆಲ್:9448177812.

**ಶಿವರಾಜ**
ಕುಕನೂರು, ರಾಯಚೂರು (ಜಿ),
ಕರ್ನಾಟಕ, ಸೆಲ್:9844369516.

**G. ಮನೋಹರ್**
ಮಲ್ಲಸಂದ್ರ, ಬೆಂಗಳೂರು, ಕರ್ನಾಟಕ.
ಸೆಲ್:7411459912,9448452963.

**B. ವಾತ್ಸಲ್ಯ**
ದಾವಣಗೆರೆ, ಕರ್ನಾಟಕ.
ಸೆಲ್:9901534677,8880666529.

**B. ಯೋಗೇಶ್**
ವೈಟ್‌ಫೀಲ್ಡ್, ಬೆಂಗಳೂರು, ಕರ್ನಾಟಕ.
ಸೆಲ್:9620193341,9739228639.

**R. ಚಂದ್ರಶೇಖರ್**
ಕೀಲುಕೋಟೆ, ಕೋಲಾರ, ಕರ್ನಾಟಕ.
ಸೆಲ್:9741827901,9590652406.

**ಕೆ. ಭರತ್ ಕುಮಾರ್**
ಮೇಲಾಗಣಿ, ಕೋಲಾರ, ಕರ್ನಾಟಕ.
ಸೆಲ್ : 8095009014.

**ಬಸವರಾಜ ಅಂಗಡಿ**
ಪೋತ್ನಾಳ, ರಾಯಚೂರು (ಜಿ).
ಕರ್ನಾಟಕ, ಸೆಲ್:9632418716.

**ಸೂರ್ಯ ಪ್ರಕಾಶ**
ಶಕ್ತಿನಗರ (ತಾ), ರಾಯಚೂರು (ಜಿ).
ಸೆಲ್:9611183107, 9164886981.

**ಲೀಲಾವತಿ**
ಜನತಾನಗರ, ಮೈಸೂರ್, ಕರ್ನಾಟಕ.
ಸೆಲ್:9141109799, 9986369118.

**T.V. ರಮಣ**
ರೂಪೇನಾ ಅಗ್ರಹಾರ, ಬೆಂಗಳೂರು
ಸೆಲ್:8970772028,7406039453.

**M. ನಾರಾಯಣರೆಡ್ಡಿ**
ರಾಮಗುಂಡನಲ್ಲಿ ಪೋಸ್ಟ್,
ಬೆಂಗಳೂರು, ಕರ್ನಾಟಕ.
ಸೆಲ್ : 9482516023.

**ಪ್ರಕಾಶ್ ರೆಡ್ಡಿ**
ತೊಬರಹಳ್ಳಿ, ಬೆಂಗಳೂರು (ಉತ್ತರ)
ಸೆಲ್:9845656774,9482516023.

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ),
ತುಮಕೂರು (ಜಿಲ್ಲೆ), ಕರ್ನಾಟಕ.
ಸೆಲ್:8762523963,9740744424.

**R.S. ವೀರಾಚಾರಿ** (ಸೆಲ್:9036892829)
ಕತ್ತರಗುಪ್ಪೆ, ಬೆಂಗಳೂರು, ಕರ್ನಾಟಕ.

## ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲೀಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ! ಓದಿಸಿರಿ!!

ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ೧೦೦, ಶತಂ, 100



ಈ ಗ್ರಂಥದ ಹೆಸರನ್ನು ಮೂರು ಸಂಖ್ಯೆಗಳಾಗಿ ಬರೆದಿದ್ದೇವೆ. ಗಣಿತ ಶಾಸ್ತ್ರ ಸಂಬಂಧವಾಗಿ ಒಂದು, ಎರಡು ಸೊನ್ನೆಗಳನ್ನು ತೋರಿಸುವುದು ನಡೆದಿದೆ. ಗಣಿತದಲ್ಲಿ ಮೂರು ಸಂಖ್ಯೆಗಳಾಗಿರುವ ಹೆಸರನ್ನು ತೆಲುಗು ಅಕ್ಷರಗಳಲ್ಲಿ ವಂದ, ನೂರು, ಶತಮು ಎಂದು ಮೂರು ವಿಧಗಳಾಗಿ ಹೇಳಬಹುದು. ಗಣಿತದಲ್ಲಿ ಮೂರು ಸಂಖ್ಯೆಗಳು ಇರುವುದರಿಂದ ಅದೇ ಪದವನ್ನು ತೆಲುಗಿನಲ್ಲಿ ಮೂರು ಅಕ್ಷರಗಳ ಶತಮು ಎಂಬ ಪದವನ್ನು ತೆಗೆದುಕೊಳ್ಳೋಣ. ತೆಲುಗು ಭಾಷೆಯಲ್ಲಿ ಶತಮು ಎಂದರೇ, ಗಣಿತ ಸಂಖ್ಯೆಯಲ್ಲಿ ಮೂರು ಸಂಖ್ಯೆಗಳಾಗಿ ಇದೆ. ಈಗ ನಾವು ಹೇಳಿಕೊಳ್ಳಬೇಕಾಗಿರುವುದು ಆಧ್ಯಾತ್ಮಿಕ. ಆದ್ದರಿಂದ ತೆಲುಗಿನಲ್ಲಿ ಶತವಾಗಲಿ, ಸಂಖ್ಯೆಗಳಲ್ಲಿ 100 ಆಗಲಿ ಈ ಗ್ರಂಥದ ಹೆಸರು. **ಶತ ಎಂಬ ಪದ ಶಾತ ಎಂಬ ಪದದಿಂದ ಹುಟ್ಟಿದೆ.** ಶಾತ ಎಂದರೇ ನೂರು ಭಾಗಗಳಾಗಿ ವಿಭಜಿಸಲ್ಪಟ್ಟಿರುವು ದೆಂದು ಅರ್ಥ. ತೆಲುಗು ಎಲ್ಲಾ ಭಾಷೆಗಳಿಗಿಂತ ಮೊದಲು ಹುಟ್ಟಿದ ಭಾಷೆಯೆಂದು ಮೊದಲಿನಿಂದ ಹೇಳುತ್ತಿದ್ದೇನೆ. ಪ್ರಪಂಚದಲ್ಲಿ ಒಬ್ಬರ ಭಾವವನ್ನು ಮತ್ತೊಬ್ಬರು ತಿಳಿಯುವುದಕ್ಕೆ ಭಾಷೆ ಏರ್ಪಟ್ಟಿದೆ. ಭಾವವನ್ನು ಅನುಸರಿಸಿ ಹುಟ್ಟಿರುವುದನ್ನು ಭಾಷೆ ಎನ್ನುತ್ತಿದ್ದೇವೆ. ಭಾವಗಳನ್ನು ಮನುಷ್ಯ ಎಷ್ಟು ಭಾಷೆಗಳಲ್ಲಾದರೂ ಹೇಳಬಹುದು. ಭಾವದಿಂದ ಕೂಡಿಕೊಂಡಿರುವುದು ಭಾಷೆ ಹೊರತು ಭಾವವಿಲ್ಲದಿರುವುದು ಭಾಷೆ ಅಲ್ಲ.

ಪೂರ್ವದಲ್ಲಿ ಒಬ್ಬ ಮನುಷ್ಯ ತನ್ನ ಉದ್ದೇಶವನ್ನು ತಿಳಿಸುವುದಕ್ಕೆ ಕೈಸನ್ನೆಗಳ ಮೂಲಕ ತಿಳಿಸುತ್ತಿದ್ದನು. ಹಾಗೆಯೇ ನಟನೆಗಳ ಮೂಲಕ ತಿಳಿಸುತ್ತಿದ್ದನು. ಹೇಗೆ ತಿಳಿಸಿದರೂ ಒಬ್ಬ ಮನುಷ್ಯನವೊಂದು ಭಾವ ಇನ್ನೊಬ್ಬ ಮನುಷ್ಯನಿಗೆ ಸೇರುವುದಕ್ಕೆ ಸ್ವಲ್ಪ ಕಷ್ಟವಾಗಿರುತ್ತಿತ್ತು. ಒಬ್ಬ ಮನುಷ್ಯ ತನ್ನ ಭಾವವನ್ನು ನೂರಕ್ಕೆ ನೂರು ಶಾತ ಸನ್ನೆಗಳ ಮೂಲಕ ತಿಳಿಸಿದರೇ ಅದು ಇನ್ನೊಬ್ಬ ಮನುಷ್ಯನಿಗೆ 20 ರಿಂದ 30 ಶಾತ ಅರ್ಥವಾಗುತ್ತಿತ್ತು. ಇನ್ನೂ ಕೆಲವರಿಗೆ 20 ರಿಂದ 40 ಶಾತ ಅರ್ಥವಾಗುತ್ತಿತ್ತು. ಸ್ವಲ್ಪ ತಿಳುವಳಿಕೆಯುಳ್ಳವರಿಗೆ 20 ರಿಂದ 50, 60, 70, 80 ಶಾತದವರೆಗು ಅರ್ಥವಾಗುತ್ತಿತ್ತು. ಕೊನೆಗೆ ಉಳಿದ 20

ಶಾತ ಅರ್ಥವಾಗುತ್ತಿರಲಿಲ್ಲ. ಅಂತಹ ಪರಿಸ್ಥಿತಿಗಳಲ್ಲಿ ಪ್ರಾಣಿಗಳನ್ನು ನೋಡಿ ಅವುಗಳ ಹಾಗೆ ತಾವು ಕೂಡಾ ಶಬ್ದದಿಂದ ಭಾವವನ್ನು ಪ್ರಕಟಿಸಬೇಕೆಂದು ಅಂದುಕೊಂಡಿದ್ದಾರೆ. ಒಂದು ದಿನ ಕೋತಿಗಳು ಮರದ ಕೆಳಗೆ ಬಿದ್ದಿರುವ ಎಲೆಗಳನ್ನು, ಕಾಳುಗಳನ್ನು ತೆಗೆದುಕೊಳ್ಳುತ್ತಾ ಅಪ್ರಮತ್ತವಾಗಿ ಇರುವಾಗ ಆ ಗುಂಪಿನಲ್ಲಿನ ಕೋತಿ ಒಂದು ನಾಯಕನಾಗಿದ್ದು ಹೊರಗಡೆ ಪ್ರಮಾದಗಳನ್ನು ಗಮನಿಸುತ್ತಾಯಿದ್ದು, ಏನಾದರೂ ಪ್ರಮಾದವೆಂದು ತಿಳಿದಾಗ ಬಾಯಿಂದ ಗುರ್‌ಯೆಂದು ಶಬ್ದ ಮಾಡಿದರೆ, ಉಳಿದ ಕೋತಿಗಳೆಲ್ಲಾ ಆ ಭಾವವನ್ನು ಗ್ರಹಿಸಿ ಕೂಡಲೇ ಅಲ್ಲಿಂದ ಓಡಿ ಹೋಗಿ ಮರ ಹತ್ತಿ ಪ್ರಮಾದದಿಂದ ತಪ್ಪಿಸಿಕೊಳ್ಳುವುದು ಭಾಷೆಯಿಲ್ಲದ ಕಾಲದಲ್ಲಿಯೇ ಮನುಷ್ಯ ನೋಡಿದ್ದಾನೆ.

ಅಷ್ಟೇ ಅಲ್ಲದೆ ಕೋಳಿ ತನ್ನ ಮರಿಗಳಿಗೆ ಆಹಾರವಿದೆ ಇಲ್ಲಿಗೆ ಬನ್ನಿ ಎಂದು ಹೇಳುವುದಕ್ಕೆ ಒಂದು ವಿಧವಾಗಿ ಶಬ್ದ ಮಾಡಿದರೇ, ಆ ಶಬ್ದದಲ್ಲಿನ ಭಾವವನ್ನು ಗ್ರಹಿಸಿದ ಕೋಳಿ ಮರಿಗಳು ಕೂಡಲೇ ತಾಯಿ ಹತ್ತಿರಕ್ಕೆ ಓಡಿಹೋಗುವುದು ನಡೆಯುತ್ತಿರುತ್ತದೆ. ಹಾಗೇ ಕೋಳಿ ತನ್ನ ಮರಿಗಳಿಗೆ ಪ್ರಮಾದವನ್ನು ಕುರಿತು ತಿಳಿಸುವುದಕ್ಕೆ ಮೇಲೆ ಹದ್ದುಗಳು (ಗರುಡಪಕ್ಷಿ) ಕಾಣಿಸುತ್ತಲೇ ಪ್ರಮಾದ ಎನ್ನುವಂತೆ ಮತ್ತೊಂದು ವಿಧವಾದ ಶಬ್ದವನ್ನು ಮಾಡುತ್ತದೆ. ಆಗ ಆ ಶಬ್ದ ಭಾವವನ್ನು ಗ್ರಹಿಸಿದ ಕೋಳಿ ಮರಿಗಳು ಕೂಡಲೇ ತಮಗೆ ಹತ್ತಿರದಲ್ಲಿರುವ ರಕ್ಷಣಾ ಸ್ಥಳಕ್ಕೆ ಓಡಿಹೋಗುತ್ತವೆ. ಆಗ ಮರಿಗಳು ತಾಯಿ ಹತ್ತಿರಕ್ಕೆ ಬರಲಾರವು. ಅವುಗಳಿಗೆ ಹತ್ತಿರವಾಗಿರುವ ಸುರಕ್ಷಿತ ಸ್ಥಳಕ್ಕೆ ಓಡಿ ಹೋಗಿ ಹದ್ದಿಗೆ ಕಾಣಿಸದ ಹಾಗೆ ಇರುತ್ತವೆ. ಇದನ್ನನುಸರಿಸಿ ನೋಡಿದರೆ ಮನಷ್ಯನಿಗಿಂತಲೂ ತಿಳುವಳಿಕೆ ಇಲ್ಲದಿರುವವು ಅಂದುಕೊಂಡ ಪ್ರಾಣಿಗಳು, ಪಕ್ಷಿಗಳು ಮನುಷ್ಯನಿಗಿಂತಲೂ ಮೊದಲೇ ಭಾಷೆಯನ್ನು ಹೊಂದಿವೆಯೆಂದು, ಭಾಷೆಯನ್ನು ಕಲಿತಿವೆಯೆಂದು ತಿಳಿಯುತ್ತಿದೆ. ಪ್ರಾಣಿಗಳಿಗಿಂತಲೂ, ಪಕ್ಷಿಗಳಿ ಗಿಂತಲೂ ತಿಳುವಳಿಕೆಯುಳ್ಳ ಮನುಷ್ಯನಿಗೆ ಭಾಷೆಯಿಲ್ಲ, ಭಾಷೆ ಬರುವುದಿಲ್ಲ ಎನ್ನುವುದು ನಾಚಿಕೆಗೇಡಾಗಿ ಕಾಣಿಸಿ, ಆಗ ಪಶುಗಳು, ಪಕ್ಷಿಗಳಂತೆ ಭಾಷೆಯನ್ನು

ಹೊಂದಿರಬೇಕೆಂಬ ನಿರ್ಣಯಕ್ಕೆ ಮನುಷ್ಯರು ಬಂದಿದ್ದಾರೆ. ತಮಗೆ ಭಾಷೆ ಎಂದರೆ ಏನೋ ತಿಳಿಯದ ಪರಿಸ್ಥಿತಿಗಳಲ್ಲಿ ಆಧ್ಯಾತ್ಮಿಕ ಧ್ಯಾನದಲ್ಲಿರುವ ಗುರು ಹತ್ತಿರಕ್ಕೆ ಹೋಗಿ ಪಶುಗಳನ್ನು, ಪಕ್ಷಿಗಳನ್ನು ತೋರಿಸಿ ಅವುಗಳ ಹಾಗೆ ತಮಗೂ ಭಾಷೆ ಬೇಕೆಂದು ಸನ್ನೆಗಳ ಮೂಲಕ ತಿಳಿಸಿಕೊಂಡಿದ್ದಾರೆ.

ಆಗ ಆತ್ಮಜ್ಞಾನಿಗಳಾದವರು ಕೆಲವು ಶಬ್ದಗಳನ್ನು ಹೇಳಿ, ಈ ಶಬ್ದಕ್ಕೆ ಈ ಅರ್ಥವೆಂದು ಅರ್ಥವಾಗುವಂತೆ ಮಾಡಿದ್ದಾರೆ. ಹಾಗೆ ಮೊದಲು ಕಲಿಸಿದ ಅಥವಾ ಮೊದಲು ಹೇಳಿದ ಶಬ್ದ **"ಓಂ"** ಮೊದಲು ಎಲ್ಲರೂ ಕಲಿತಿರುವ ಅಕ್ಷರ ಓಂ. ಓಂ ಎಂದರೇ ದೇವರು ಎಂದು ಮೊದಲು ಅರ್ಥವಾಗುವಂತೆ ಮಾಡಿದ್ದಾರೆ. ನಂತರ ಆಕಾಶವನ್ನು ತೋರಿಸಿ **"ನ"** ಎಂದು ಗುರುತು ತೋರಿಸಿದ್ದಾರೆ. ಹಾಗೆಯೇ **"ಮ"** ಶಬ್ದವನ್ನು ಹೇಳಿ ಗಾಳಿಯನ್ನು ತೋರಿಸಿದ್ದಾರೆ. ನಂತರ ಅಗ್ನಿ, ನೀರು, ಭೂಮಿ ಕಾಣಿಸುವವಾದ್ದರಿಂದ ಅವುಗಳಿಗೆ **ಶಿ ವಾ ಯ** ಎನ್ನುವ ಮೂರು ಅಕ್ಷರಗಳನ್ನು ತೋರಿಸಿದ್ದಾರೆ. ಪಂಚಭೂತಗಳಾದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎನ್ನುವವುಗಳಿಗೆ ಒಂದೊಂದಕ್ಕು ಒಂದೊಂದು ಶಬ್ದವನ್ನು ಹೇಳಿ, ಆ ಶಬ್ದಕ್ಕೆ ತಕ್ಕಂತೆ ಆಗಲೇ ಲಿಪಿಯನ್ನು ಕೂಡಾ ತಯಾರು ಮಾಡಿ, ಐದು ಭೂತಗಳಿಗೆ ಐದು ಅಕ್ಷರಗಳನ್ನು ತಯಾರು ಮಾಡಿ, ಇವುಗಳಿಗಿಂತ ಮೊಟ್ಟಮೊದಲು ಹೇಳಿದ "ಓಂ" ಅನ್ನು ಕೂಡಾ ಸೇರಿಸಿ ತೋರಿಸುವುದಾಗಿದೆ. ಪ್ರಪಂಚದಲ್ಲಿ ಮಾನವನು ಮೊಟ್ಟಮೊದಲು ಕಲಿತ ಭಾಷೆ ತೆಲುಗು ಭಾಷೆ. ಆ ತೆಲುಗು ಭಾಷೆಯಲ್ಲಿ ದೇವರನ್ನು "ಓಂ" ಆಗಿ ತೋರಿಸಿ, ಅದರ ನಂತರ ಉಳಿದ ಐದು ಅಕ್ಷರಗಳನ್ನು ತೋರಿಸಿ ಅವುಗಳನ್ನು ಪ್ರಕೃತಿಗೆ ಗುರುತಾಗಿ ಹೇಳಿದ್ದಾರೆ.

ಇಲ್ಲಿ ಚೆನ್ನಾಗಿ ಗಮನಿಸಿದರೆ ಪ್ರಕೃತಿಯಾದ ಐದು ಭಾಗಗಳಿಗೆ ದೊಡ್ಡದೆಂದು ತಿಳಿಯುವ ಹಾಗೆ, ದೇವರಿಗೆ ಗುರುತಾಗಿ "ಓಂ" ಅನ್ನು ತೋರಿಸಿದ್ದಾರೆ. ಇದನ್ನು ಪದ್ಧತಿಯಾಗಿ ಬರೆದರೆ "ಓಮ್" ಎಂದು ಇರುತ್ತದೆ. ಉಳಿದ ಪ್ರಕೃತಿಯಾದ ಐದು ಭೂತಗಳಿಗೆ ನ, ಮ, ಶಿ, ವಾ, ಯ ಎಂದು

ಗುರುತುಗಳು ಇವೆ. ಪಂಚಭೂತಗಳಿಗೆ ಒಂದೊಂದಕ್ಕೆ ಒಂದೊಂದು ಅಕ್ಷರವನ್ನು ಇಟ್ಟರೆ ದೇವರ ಗುರುತಿಗೆ ಮಾತ್ರ ಎರಡು ಅಕ್ಷರಗಳಿಂದ ಕೂಡಿದ (ಸಂಯುಕ್ತಾಕ್ಷರ ವಾದ) ಓಮ್ ಅನ್ನು ಇಡಲಾಗಿದೆ. ಹಾಗೆ ಇಡುವುದರಲ್ಲಿ ಪಂಚ ಭೂತಗಳೆಲ್ಲವೂ ದೇವರಿಗೆ ಕಡಿಮೆ ಎನ್ನುವ ಹಾಗೆ ಒಂದು ಅಕ್ಷರದಿಂದ ತೋರಿಸಿದ್ದಾರೆ. ದೇವರು ಇವುಗಳಿಗಿಂತಲೂ ದೊಡ್ಡವನಾದ್ದರಿಂದ ಅವುಗಳಿಗಿಂತಲೂ ಅಧಿಕವಾಗಿ ಎರಡು ಅಕ್ಷರಗಳು ಬೆರೆತ ಅಕ್ಷರವನ್ನು ತೋರಿಸುವುದಾಗಿದೆ. ಈ ವಿಧವಾಗಿ ತೆಲುಗು ಭಾಷಾ ಪ್ರಸ್ತಾವನೆ ದೇವರು, ಪ್ರಕೃತಿಯಿಂದ ಆರಂಭವಾಗಿದೆ. ಆ ದಿನ ಹೇಳಿದವರು ಆತ್ಮಜ್ಞಾನವನ್ನು ತಿಳಿದ ಆಧ್ಯಾತ್ಮಿಕ ತಜ್ಞರಾದ್ದರಿಂದ ಮೊದಲು ದೇವರ ವಿಧಾನದಲ್ಲಿನ ಬೀಜಾಕ್ಷರಗಳನ್ನು ಕಲಿಸಿ, ನಂತರ ಅವುಗಳಿಂದ ತಯಾರಾದ ಉಳಿದ ಭಾಷೆಯನ್ನು ಕಲಿಸುವುದು ನಡೆದಿದೆ. ಆದ್ದರಿಂದ ತೆಲುಗು ಭಾಷೆಯಲ್ಲಿ ಪ್ರತಿ ಪದವು ಭಾವಯುಕ್ತವಾದ ಅರ್ಥವನ್ನು ಹೊಂದಿರುತ್ತದೆ. ನಂತರ ತಯಾರಾದ ಉಳಿದ ಭಾಷೆಗಳಲ್ಲಿನ, ಪದದಲ್ಲಿ ಭಾವ ಮಿಳಿತವಾಗಿರುವುದಿಲ್ಲ. ತೆಲುಗಿನಲ್ಲಿ ಹಾಗಲ್ಲದೆ ಪ್ರತಿ ಶಬ್ಧವು ಆಧ್ಯಾತ್ಮಿಕ ಭಾವಕ್ಕೆ ಹತ್ತಿರವಾಗಿರುತ್ತದೆ.

ಭಾವನೆ ಎಂಬ ಪದದಿಂದ ಹುಟ್ಟಿದ ಹೆಸರೇ ಭಾಷೆ. ಆದ್ದರಿಂದ ಮೊದಲು ಹುಟ್ಟಿದ ತೆಲುಗು ಭಾಷೆ ಭಾವದಿಂದ ಮುಡಿಹಾಕಲ್ಪಟ್ಟಿರುತ್ತದೆ. ತೆಲುಗು ಭಾಷೆಯಲ್ಲಿ ಎಲ್ಲಾ ಪದಗಳು, ಎಲ್ಲಾ ಶಬ್ದಗಳು ಆಧ್ಯಾತ್ಮಿಕಕ್ಕೆ ಹತ್ತಿರ ಸಂಬಂಧ ಹೊಂದಿರುತ್ತವೆ. ಮನುಷ್ಯನಲ್ಲಿ ಆತ್ಮಜ್ಞಾನ ಉಂಟಾದಂತೆಲ್ಲ ತೆಲುಗು ಭಾಷೆಯೊಂದರ ಮಾಧುರ್ಯ ತಿಳಿಯುತ್ತದೆ. ತೆಲುಗು ಭಾಷೆ ದೇವರಿಗೆ ಎಷ್ಟು ಹತ್ತಿರವಾಗಿದೆಯೋ ತಿಳಿಯುತ್ತದೆ. ತೆಲುಗು ಭಾಷೆಯಿಂದಲೇ ಆತ್ಮ ವಿಷಯ (ದೇವರ ವಿಷಯ) ತಿಳಿಯುತ್ತದೆ ಎನ್ನುವ ಹಾಗೆ ಮೊದಲೇ **'ಓಂ ನಮಶಿವಾಯ'** ಎಂಬ ಆರು ಅಕ್ಷರಗಳನ್ನು ಕಲಿಸಿದ್ದಾರೆ. ಅಷ್ಟೇ ಅಲ್ಲದೆ ಪ್ರಕೃತಿಗೆ ಸಂಬಂಧಿಸಿದ ಪಂಚಭೂತಗಳಿಗು ನಾಶ ಆಗದಿರುವವನು ದೇವರು ಎನ್ನುವಂತೆ, ಮೊದಲು ಎರಡು ಶಬ್ದಗಳಿಂದ ಕೂಡಿದ ಸಂಯುಕ್ತಾಕ್ಷರವನ್ನು ಇಟ್ಟಿದ್ದಾರೆ. ಹಾಗೆ ಇಟ್ಟಿರುವ 'ಓಮ್' ಅನ್ನು **'ಪಂಚಾಕ್ಷರಿ'** ಎಂದು ಹೇಳಿದ್ದಾರೆ. ಪಂಚಾಕ್ಷರಿ

ಎಂದರೇ! ಐದಕ್ಕೆ ನಾಶ ಆಗದಿರುವುದೆಂದು ಅರ್ಥ. ಅಂದರೇ ಪಂಚಭೂತಗಳಿಗು ನಾಶವಾಗದಿರುವವನು ದೇವರು ಎಂದು ಅರ್ಥ. ಪಂಚ ಎಂದರೇ ಐದು ಎಂದೂ, ಅಕ್ಷರಿ ಎಂದರೇ ನಾಶ ಆಗದಿರುವುದೆಂದು ಅರ್ಥ. ಹೀಗೆ ಓಮ್ ನಮಃಶಿವಾಯ ಎಂದು ಮೊದಲು ಕಲಿಸಿದವುಗಳಲ್ಲಿ ಅರ್ಥ ಇರುವಾಗ, ಉಳಿದ ಭಾಷೆಗಳಲ್ಲಿ ಕೂಡಾ ಆಳವಾಗಿ ನೋಡಿದರೆ ಅಷ್ಟೋ ಇಷ್ಟೋ ಆಧ್ಯಾತ್ಮಿಕವೇ ಕಾಣಿಸುತ್ತದೆ. ಓಮ್ ಎಂಬ ಶಬ್ದ ಮೊದಲು ಹುಟ್ಟಿರುವುದು ಆದ್ದರಿಂದ ಅದನ್ನು ಪ್ರಥಮ ಅಕ್ಷರವೆನ್ನುತ್ತಿದ್ದರು. **ಪ್ರಥಮ ಅಕ್ಷರ** ಕಾಲಕ್ರಮವಾಗಿ ಸ್ವಲ್ಪ ಬದಲಾವಣೆ ಹೊಂದಿ **ಪ್ರಣವ ಅಕ್ಷರವಾಗಿ** ಬದಲಾಗಿ ಹೋಗಿದೆ. ಎಲ್ಲಿಯಾದರೂ ಪ್ರಣವ ಅಕ್ಷರ ಎಂದರೇ ಅದು ಪ್ರಥಮ ಅಕ್ಷರವಾಗಿ ನೀವು ಲೆಕ್ಕಿಸಿಕೊಳ್ಳಿರಿ.

ಓಂ ಎನ್ನುವುದು ದೇವರಾದರೆ ಉಳಿದ ಐದು ಅಕ್ಷರಗಳು ಜೀವಿಗಳೆಂದು ಅರ್ಥ. ಜೀವಿಗಳನ್ನು ಭೂತಗಳೆಂದು ಹೇಳುತ್ತಿದ್ದರು. ಮೊದಲು ತೆಲುಗು ಭಾಷೆ ಪ್ರಾರಂಭದಲ್ಲಿ ಆತ್ಮಗೆ (ದೇವರಿಗೆ) ಗುರುತಾದ ಓಂ ಅನ್ನು ದೇವರು ಹುಟ್ಟಿಸಿದ್ದಾನೆ. ನಂತರ ಐದು ಮುಖ್ಯವಾದ ಮಹಾ ಜೀವಿಗಳನ್ನು ಹುಟ್ಟಿಸಿದ್ದಾನೆ. ಮಹಾಭೂತಗಳು, ಭೂತಗಳು ಎನ್ನುವವು ಎರಡು ವಿಧಗಳು ಇವೆ. ಮಹಾಭೂತಗಳೆಂದರೇ ಭೂತಗಳಿಗೆ ಆಧಾರವಾದವೆಂದು ಅರ್ಥ. ಆ ಮಹಾಭೂತಗಳೇ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ. ಈ ಐದು ಮನುಷ್ಯರಂತೆ ಇರುವ ಜೀವಿಗಳಲ್ಲ. ಜೀವಿಗಳಿಗೆ ದೊಡ್ಡವನಾದ ಅಂದರೇ ಮನುಷ್ಯರಿಗೂ ಮತ್ತು ಸಮಸ್ತ ಜೀವರಾಶಿಗಳಿಗೂ ದೊಡ್ಡವನಾದ ಆತ್ಮನನ್ನು (ದೇವರನ್ನು) ಹಾಗೆಯೇ ಸಮಸ್ತ ಜೀವಿರಾಶಿಗಳಿಗು ಆಧಾರವಾದ ಮಹಾಭೂತ ಗಳನ್ನು ದೇವರು ಪ್ರಜೆಗಳಿಗೆ ತಿಳಿಯುವ ಹಾಗೆ ಓಮ್, ನ, ಮ, ಶಿ, ವಾ, ಯ ಎನ್ನುವ ಅಕ್ಷರ ರೂಪದಲ್ಲಿ ಹುಟ್ಟಿಸಿದ್ದಾನೆ. **ತೆಲುಗು ಭಾಷೆ ಉಳಿದ ಎಲ್ಲಾ ಭಾಷೆಗಳಂತಾದ್ದಲ್ಲ. ದೈವಜ್ಞಾನವನ್ನು ತನ್ನ ಹಿಂದಿಟ್ಟುಕೊಂಡು ಹುಟ್ಟಿರುವ ಭಾಷೆಯೆಂದು ಹೇಳಬಹುದು.** ನಾನು ಹೇಳುವುದು ಅರ್ಥವಾಗುತ್ತಿದ್ದರೇ ಈಗ

ನಿಮಗೆ ಒಂದು ಪ್ರಶ್ನೆ ಬಂದೇ ಬರುತ್ತದೆ. ಹಾಗೆ ಏನಾದರೂ ಪ್ರಶ್ನೆಯನ್ನು ನೀವು ಕೇಳಿದರೆ ನಿಮಗೆ ನಾನು ಹೇಳುವುದು ನಿಮಗೆ ಅರ್ಥವಾಗುತ್ತಿದ್ದರೇ ಈಗ ನಿಮಗೆ ಒಂದು ಪ್ರಶ್ನೆ ಬರಲೇಬೇಕು. ಹಾಗೆ ಏನಾದರೂ ಪ್ರಶ್ನೆಯನ್ನು ನೀವು ಕೇಳಿದರೆ ನಿಮಗೆ ನಾನು ಹೇಳುವುದು ಅರ್ಥವಾಗುತ್ತಿದೆಯೆಂದು ಅಂದುಕೊಳ್ಳುತ್ತೇನೆ. ನೀವು ಪ್ರಶ್ನೆ ಕೇಳಲಾರದೆ ಹೋದರೆ ಈಗ ನಾನು ಹೇಳಿರುವುದು ಅರ್ಥವಾಗಲಿಲ್ಲ ಎಂದು ಅಂದುಕೊಳ್ಳುತ್ತೇನೆ.

**ಪ್ರಶ್ನೆ :– ಸ್ವಾಮಿ! ನೀವು ಹೇಳುವುದು ಬಾಳೆಹಣ್ಣು ಸುಲಿದು ಕೊಟ್ಟಂತಿದೆ. ಇನ್ನೂ ಅರ್ಥವಾಗಲಿಲ್ಲವೆಂದರೇ ನಮ್ಮಂತಹ ಅಜ್ಞಾನಿಗಳೇ ಇರುವುದಿಲ್ಲ. ನಮಗೆ ಚೆನ್ನಾಗಿ ಅರ್ಥವಾಗಿದೆ. ಈಗ ಕೇಳಬೇಕಾದ ಪ್ರಶ್ನೆ ಕೂಡಾ ಕೂಡಲೇ ನಮಗೆ ಸ್ಮರಣೆಗೆ ಬಂದಿದೆ. ಅದು ಏನೆಂದರೇ! ಓಮ್ ಎನ್ನುವ ದೇವರನ್ನು ನಂತರ ಮುಖ್ಯವಾದ ಜೀವಿಗಳನ್ನು ಹುಟ್ಟಿಸಿದವನು ಯಾರು? ದೇವರು ಎಂದರೇ ಓಮ್ ರೂಪದಲ್ಲಿ ಹುಟ್ಟಿದ್ದಾನೆಂದು, ಆ ದೇವರೇ ಜೀವರಾಶಿಗಳಿಗೆ ದೊಡ್ಡವನೆಂದು ಹೇಳಿದ್ದೀರ ಅಲ್ಲವೇ! ನಂತರ ಇನ್ನೊಂದು ದೇವರು ಇಲ್ಲ ಅಲ್ಲವೇ! ಪ್ರಪಂಚಕ್ಕೆ ಇರುವುದು ಒಂದೇ ದೇವರಾದಾಗ ಆ ದೇವರನ್ನು, ಪಂಚಭೂತಗಳನ್ನು ಯಾರು ಸೃಷ್ಟಿಸಿದ್ದಾರೆ ಎಂದು ಕೇಳುತ್ತಿದ್ದೇನೆ. ಇದು ಪ್ರಪಂಚದಲ್ಲಿ ಯಾರಿಗಾದರೂ ಬರುವ ಪ್ರಶ್ನೆಯೇ ಆಗುವುದರಿಂದ ನೀವು ಹೇಳುವ ಉತ್ತರ ಪ್ರಪಂಚಕ್ಕೆ ಉತ್ತರ ಆಗಬಹುದು.**

**ಉತ್ತರ :–** ಸಂದರ್ಭವನ್ನು ಅನುಸರಿಸಿ ಕೇಳಬೇಕಾದ ಪ್ರಶ್ನೆಯನ್ನೇ ಕೇಳಿದ್ದೀಯಾ. ಈಗ ಹೇಳಬೇಕಾದ ಜ್ಞಾನವನ್ನು ಕೂಡಾ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಸೃಷ್ಠಿ ಆದಿಯಲ್ಲಿ ನಡೆದ ವಿಧಾನ ತೆಲುಗು ಭಾಷೆ ಹುಟ್ಟಿನಿಂದಲೇ ಬಂದಿದೆ. ಸೃಷ್ಠಿ ಆದಿಯಲ್ಲಿ ಮೊದಲು ಪಂಚಭೂತಗಳಾದ ಪ್ರಕೃತಿಯನ್ನು ತಯಾರು ಮಾಡಿದವನು ದೇವರೇ. ಹಾಗೆಯೇ ಪಂಚಭೂತಗಳೊಂದಿಗೆ ದೇವರನ್ನು ಕೂಡಾ ಸೃಷ್ಠಿಸಿದ್ದಾನೆ. ಆ ದೇವರಿಗೆ ಗುರುತಾಗಿ ಓಮ್ ಎಂಬ ಅಕ್ಷರವನ್ನು ಶಬ್ದದಿಂದ ತಯಾರು ಮಾಡಿದ್ದಾನೆ. ಹಾಗೆಯೇ ಪಂಚಭೂತಗಳಾದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿಯನ್ನು ತಯಾರು ಮಾಡಿ, ಅವುಗಳಿಗೆ

ಬೇರೆ ಶಬ್ದಗಳನ್ನು ಸೃಷ್ಠಿಸಿ ಬೇರೆ ಅಕ್ಷರಗಳಾಗಿ ದೇವರೇ ತೋರಿಸಿದ್ದಾನೆ. ಆದರೆ ಪ್ರಪಂಚವಾದ ಪಂಚಭೂತಗಳನ್ನು ಸೃಷ್ಠಿಸಿದವನೇ ಅವುಗಳಿಗೆ ದೊಡ್ಡವನಾದ ದೇವರನ್ನು ಸೃಷ್ಠಿಸಿದ್ದಾನೆ ಎಂದು ಹೇಳಿದ್ದೇವೆ. ಅಂದರೇ ಸೃಷ್ಠಿಸಲ್ಪಟ್ಟವರು ಐದು ಮಹಾಭೂತಗಳು ಮತ್ತು ಅವುಗಳಿಗೆ ದೊಡ್ಡವನಾದ ದೇವರು ಎಂದು ಹೇಳುವುದು ನಡೆದಿದೆ. ಆದರೆ ದೇವರನ್ನು ಮತ್ತು ಪಂಚಮಹಾಭೂತಗಳನ್ನು ತಯಾರು ಮಾಡಿದವನನ್ನು ಏನನ್ನಬೇಕು? ಆತನು ಯಾರು? ಆತನ ಹೆಸರು ಏನು? ಆತನ ಆಕಾರ ಹೇಗಿದೆ? ಆತನ ಕೆಲಸ ಏನು? ಎಂದು ಪ್ರಶ್ನಿಸಿಕೊಂಡು ನೋಡಿದರೆ ಅದಕ್ಕೆ ಉತ್ತರ ಈ ವಿಧವಾಗಿದೆ.

ದೇವರು ಮತ್ತು ಜೀವಿಗಳು ಎನ್ನುವವರು ಸೃಷ್ಠಿಸಲ್ಪಟ್ಟಿದ್ದಾರೆ. ಆದರೆ ಸೃಷ್ಠಿಸಿದ ಸೃಷ್ಠಿಕರ್ತ ಯಾರು? ಅಂದರೇ ಆತನಿಗೆ ಹೆಸರು ಇಲ್ಲ, ಆಕಾರ ಅಷ್ಟಕ್ಕೂ ಇಲ್ಲ. ಯಾವ ಕೆಲಸ ಮಾಡದವನು. ಇದನ್ನನುಸರಿಸಿ ರೂಪ, ನಾಮ, ಕ್ರಿಯೆಗಳು ಇಲ್ಲದವನೆಂದು ಹೇಳಬಹುದು. ಆತನೇ ಐದು ಮುಖ್ಯವಾದ ಜೀವಿಗಳನ್ನು, ಅವರಿಗೆ ದೇವರಾದವನನ್ನು ಸೃಷ್ಠಿಸಿದ್ದಾನೆ. ಆತನಿಗೆ ಹೆಸರಿಲ್ಲ ಆದ್ದರಿಂದ ಆತನನ್ನು ಸೃಷ್ಠಿಕರ್ತ ಎಂದು ಹೇಳುತ್ತೇವೆ. ಆದರೆ ಕೆಲಸ ಮಾಡದವನು ಎಂದು  ಹೇಳಿದ್ದೀರಿ ಅಲ್ಲವೇ! ಸೃಷ್ಠಿ ಎನ್ನುವ ಕೆಲಸವನ್ನು ಹೇಗೆ ಮಾಡಿದ್ದಾನೆ ಎಂದು ಕೆಲವರು ಕೇಳಬಹುದು. ಅದಕ್ಕೆ ಉತ್ತರ ಏನೆಂದರೇ! ಪ್ರಪಂಚ ಇಲ್ಲದಕ್ಕಿಂತ ಮುಂಚೆ ಆತನು ಆ ಕೆಲಸವನ್ನು ಮಾಡಿದ್ದಾನೆ. ನಂತರ ಜೀವರಾಶಿಗಳು, ಪ್ರಪಂಚ, ಅವುಗಳಿಗೆ ದೇವರು ಎಲ್ಲಾ ಬಂದ ನಂತರ ಸೃಷ್ಠಿಕರ್ತನಾದ ಆತನು ಒಂದು ಕೆಲಸವನ್ನು ಕೂಡಾ ಮಾಡಲಿಲ್ಲ. ಆದ್ದರಿಂದ ಆತನನ್ನು ಕೆಲಸ ಇಲ್ಲದವನು ಎಂದು ಹೇಳಬಹುದು. ನಮಗೆ ದೇವರಾದವನನ್ನು ಸೃಷ್ಠಿಸಿದವನನ್ನು ಏನೆಂದು ಕರೆಯಬೇಕು ಅಂದರೇ ಅದಕ್ಕೆ ಒಂದು ಮಾರ್ಗವಿದೆ. **ಯಾರಿಗೆ ತಿಳಿಯಲ್ಪಡದವನನ್ನು, ಹುಡುಕಲ್ಪಡುವವನನ್ನು ಅಂದರೇ ದೇವಲ್ಪಡುವವನನ್ನು ದೇವರು ಎಂದು ಹೇಳಬಹುದು.** ಮೊದಲು ಪಂಚಭೂತಗಳೊಂದಿಗೆ ಹುಟ್ಟಿದವನು ಕೂಡಾ ತಿಳಿಯಲ್ಪಡುವವನು ಅಲ್ಲ. ಆದ್ದರಿಂದ ಆತನನ್ನು ದೇವರು ಎಂದು ಅನ್ನುತ್ತಿದ್ದೇವೆ.

ಈ ಲೆಕ್ಕ ಪ್ರಕಾರ ನಮಗೆ ಇಬ್ಬರು ದೇವರುಗಳು ಆಗುತ್ತಾರೆ. ಒಬ್ಬ ದೇವರು ಸೃಷ್ಠಿಸಿದ್ದಾನೆ, ಇನ್ನೊಬ್ಬ ದೇವರು ಸೃಷ್ಠಿಸಲ್ಪಟ್ಟಿದ್ದಾನೆ ಎಂದು ತಿಳಿಯುತ್ತಿದೆ.

ಸೃಷ್ಠಿಸಲ್ಪಟ್ಟ ದೇವರು, ಸೃಷ್ಠಿಸಿದ ದೇವರು ಇಬ್ಬರಲ್ಲಿ ಸೃಷ್ಠಿಸಿದವನು ದೊಡ್ಡವನೆಂದು, ಸೃಷ್ಠಿಸಲ್ಪಟ್ಟವನು ಚಿಕ್ಕವನೆಂದು ತಿಳಿಯುತ್ತಿದೆ. ಸೃಷ್ಠಿಸಲ್ಪಟ್ಟವನಿಗೆ ಸೃಷ್ಠಿಸಿದವನು ತಂದೆಯಾಗುತ್ತಾನೆ. **ಆದ್ದರಿಂದ ಸೃಷ್ಠಿಸಲ್ಪಟ್ಟವನನ್ನು ಕುಮಾರನೆಂದು, ಸೃಷ್ಠಿಸಿದವನನ್ನು ತಂದೆಯೆಂದು ಇಂಜೀಲ್ (ಬೈಬಲ್) ಗ್ರಂಥದಲ್ಲಿ ಹೇಳಿದ್ದಾರೆ. ಪ್ರಥಮ ದೈವಗ್ರಂಥವಾದ ಭಗವದ್ಗೀತೆ (ತೌರಾತ್) ನಲ್ಲಿ ನೋಡಿದರೆ ಸೃಷ್ಠಿಸಲ್ಪಟ್ಟ ದೇವರನ್ನು ಆತ್ಮಯೆಂದು, ಸೃಷ್ಠಿಸಿದ ದೇವರನ್ನು ಪರಮಾತ್ಮ ಎಂದಿದ್ದಾನೆ.** ಪರಮಾತ್ಮ ಎನ್ನುವುದು ಹೆಸರಲ್ಲ. ಆತ್ಮಗಿಂತ ಬೇರೆಯಾಗಿ, (ಆತ್ಮಗಿಂತ ಅನ್ಯ (ಪರ) ವಾಗಿ) ಇರುವುದು ಪರಮಾತ್ಮ ಎಂದು ತಿಳಿಯುವ ಹಾಗೆ ಹೇಳಿದ್ದಾರೆ. ಆತ್ಮ ಎಂಬ ದೇವರನ್ನು ಸೃಷ್ಠಿಸಿದ ನಂತರ ಪರಮಾತ್ಮ ಎನ್ನುವ ಆತನು ಯಾವ ಕೆಲಸವನ್ನೂ ಮಾಡಲಿಲ್ಲ. ಮಾಡಬೇಕಾದ ಕೆಲಸಗಳೆಲ್ಲವನ್ನು ತನ್ನ ಕುಮಾರನಾದ ಆತ್ಮನಿಗೇ ಒಪ್ಪಿಸಿದ್ದಾನೆ. ಅಂದಿನಿಂದ ಆತ್ಮವೇ ಎಲ್ಲಾ ಕಾರ್ಯಗಳನ್ನು ಮಾಡುತ್ತಿದೆ. ಪರಮಾತ್ಮ ಏನೂ ಮಾಡದೆ ಸಾಕ್ಷಿಯಾಗಿ ನೋಡುತ್ತಿದ್ದಾನೆ.

ಅಂದಿನಿಂದ ಪರಮಾತ್ಮ ತಂದೆ ಒಪ್ಪಿಸಿದ ಕೆಲಸಗಳನ್ನು ಕುಮಾರನಾದ ಆತ್ಮ ಮಾಡುತ್ತಾ ಬರುತ್ತಿದ್ದಾನೆ. ಪ್ರಪಂಚದಲ್ಲಿ ನಿತ್ಯ ಹುಟ್ಟುವ ಜೀವರಾಶಿಗಳನ್ನು ಆತ್ಮವೇ ಹುಟ್ಟಿಸುತ್ತಿದೆ. ಆತ್ಮವೇ ಪೋಷಿಸುತ್ತಿದೆ. ಕೊನೆಗೆ ಆತ್ಮವೇ ಸಾಯಿಸುತ್ತಿದೆ. ಹಾಗೆ ಮರಣಿಸಿದವನ ಪಾಪಪುಣ್ಯಗಳನ್ನು ಲೆಕ್ಕಹಾಕಿ, ಅವನನ್ನು ಅವನ ಕರ್ಮಪ್ರಕಾರ ಆತ್ಮವೇ ಹುಟ್ಟಿಸುತ್ತಿದೆ. ಯಾವ ಜೀವಿ ಯಾವ ಜನ್ಮಕ್ಕೆ ಹೋಗಬೇಕೆಂಬ ನಿರ್ಣಯ (ತೀರ್ಪು) ಮಾಡಿ ಆತ್ಮವೇ ಕಳಿಸುತ್ತಿದೆ. ಈ ವಿಧವಾಗಿ ಪರಮಾತ್ಮ ಮಾಡಬೇಕಾದ ಕೆಲಸಗಳೆಲ್ಲವನ್ನು ಆತ್ಮವೇ ಮಾಡುತ್ತಿದೆ. ಹಾಗೆ ಆತ್ಮ ಸರ್ವಜೀವರಾಶಿಗಳಿಗೂ ದೇವರಾಗಿದೆ. ಜೀವರಾಶಿಗಳಿಗೆ ಸೃಷ್ಠಿಕರ್ತ ನಾದವನು ಆತ್ಮವೇ ಆದ್ದರಿಂದ ಆತ್ಮ ಎಲ್ಲರಿಗೂ ದೇವರಾಗಿ ಇದ್ದಾನೆ. ಆತ್ಮನಾಗಿದ್ದು

ನಿನ್ನನ್ನು ಹುಟ್ಟಿಸುವವನನ್ನು, ಪೋಷಿಸುವವನನ್ನು, ಮರಣಿಸುವಂತೆ ಮಾಡುವ ವನನ್ನು ದೇವರಂತೆ ಎಲ್ಲರೂ ಆರಾಧಿಸಬೇಕು. ಆತನು ಒಬ್ಬನೇ ಮನುಷ್ಯರಿಗೆ **ಆರಾಧ್ಯ ದೈವ**. ಆದ್ದರಿಂದ ಬೇರೆ ದೇವರನ್ನು ಆರಾಧಿಸಬಾರದೆಂದು ಅಂತಿಮ ದೈವಗ್ರಂಥ ಖುರ್‌ಆನ್‌ನಲ್ಲಿ ಕೂಡಾ ಹೇಳಿದ್ದಾರೆ. ಇದೇ ವಿಷಯವನ್ನೇ ದ್ವಿತೀಯ ದೈವಗ್ರಂಥ ಯೋಹಾನ್ ಸುವಾರ್ತೆ ಐದನೇ ಅಧ್ಯಾಯದಲ್ಲಿ 19 ರಿಂದ 27ನೇ ವಾಕ್ಯದವರೆಗು ನೋಡಿರಿ.

**(19) ತಂದೆ ಯಾವುದನ್ನು ಮಾಡುವುದು ಕುಮಾರನು ನೋಡುತ್ತಾನೋ, ಅದೇ ಹೊರತು ತನ್ನಷ್ಟಕ್ಕೆ ತಾನು ಯಾವುದನ್ನೂ ಮಾಡಲಾರನು. ಆತನು ಯಾವುಗಳನ್ನು ಮಾಡುತ್ತಾನೋ ಅವುಗಳನ್ನೇ ಕುಮಾರನು ಹಾಗೆಯೇ ಮಾಡುತ್ತಾನೆ.**

**(20) ತಂದೆ ಕುಮಾರನನ್ನು ಪ್ರೀತಿಸುತ್ತಾ, ತಾನು ಮಾಡುವ ಕಾರ್ಯ ಗಳೆಲ್ಲವನ್ನು ಆತನಿಗೆ ತಿಳಿಸುತ್ತಾನೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ. ಮತ್ತು ನೀವು ಆಶ್ಚರ್ಯಪಡುವಹಾಗೆ ಇವುಗಳಿಗಿಂತಲೂ ಉತ್ತಮ ಕಾರ್ಯಗ ಳನ್ನು ಆತನಿಗೆ ತೋರಿಸುತ್ತಾನೆ.**

**(21) ತಂದೆ ಮೃತರನ್ನು ಹೇಗೆ ಎಬ್ಬಿಸಿ ಬದುಕಿಸುತ್ತಾನೋ ಹಾಗೆಯೇ ಕುಮಾರನೂ ತನಗೆ ಇಷ್ಟಬಂದವರನ್ನು ಬದುಕಿಸುತ್ತಾನೆ.**

**(22) ತಂದೆ ಯಾರಿಗೂ ತೀರ್ಪು ನಿರ್ಣಯಿಸುವುದಿಲ್ಲ ಆದರೇ, ತೀರ್ಪು ನಿರ್ಣಯಿಸುವುದಕ್ಕೆ ಸರ್ವಾಧಿಕಾರವನ್ನು ಕುಮಾರನಿಗೆ ಒಪ್ಪಿಸಿದ್ದಾನೆ.**

**(23) ತಂದೆಯನ್ನು ಘನಪಡಿಸುವಹಾಗೆ ಎಲ್ಲರೂ ಕುಮಾರನನ್ನು**

**ಘನಪಡಿಸಬೇಕೆಂದು, ಕುಮಾರನನ್ನು ಘನಪಡಿಸದವನು ಆತನನ್ನು ಕಳಿಸಿದ ತಂದೆಯನ್ನು ಘನಪಡಿಸುವುದಿಲ್ಲ.**

**(24) ನನ್ನ ಮಾತು ಕೇಳಿ ನನ್ನನ್ನು ಕಳಿಸಿದವನಲ್ಲಿ ವಿಶ್ವಾಸವಿಡುವವನು ನಿತ್ಯ ಜೀವವಿರುವವನು.**

**ಅವನು ತೀರ್ಪಿನೊಳಗೆ ಬಾರದೆ. ಮರಣದೊಳಗಿನಿಂದ ಜೀವದೊಳಗೆ ದಾಟಿದ್ದಾನೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ.**

**(25) ಮೃತರು ದೇವರ ಕುಮಾರನ ಶಬ್ದವನ್ನು ಕೇಳುವ ಸಮಯ ಬರುತ್ತಿದೆ. ಈಗಲೇ ಬಂದಿದೆ, ಅದನ್ನು ಕೇಳುವವರು ಜೀವಿಸುತ್ತಾರೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ.**

**(26) ತಂದೆ ಹೇಗೆ ತನ್ನಷ್ಟಕ್ಕೆ ತಾನೇ ಜೀವ ಇರುವವನಾಗಿ ಇದ್ದಾನೋ, ಹಾಗೆಯೇ ಕುಮಾರನು ತನ್ನಷ್ಟಕ್ಕೆ ತಾನೇ ಜೀವ ಇರುವವನಾಗಿ ಇರುವುದಕ್ಕೆ ಕುಮಾರನಿಗೆ ಅಧಿಕಾರವನ್ನು ಅನುಗ್ರಹಿಸಿದನು.**

**(27) ಮತ್ತು ಆತನು ಮನುಷ್ಯ ಕುಮಾರನಾದ್ದರಿಂದ ತೀರ್ಪು ನಿರ್ಣಯಿಸುವುದಕ್ಕೆ (ತಂದೆ) ಅಧಿಕಾರವನ್ನು ಅನುಗ್ರಹಿಸಿದನು.**

ಆಧ್ಯಾತ್ಮಿಕ ಜ್ಞಾನಕ್ಕೆ ಅನುಸಂಧಾನ ಮಾಡಿ, ಆಧ್ಯಾತ್ಮಿಕ ತಜ್ಞರಿಂದ ತೆಲುಗು ಭಾಷೆ ಹೇಳಲ್ಪಟ್ಟಿದೆ. ಆದ್ದರಿಂದ ಮೊದಲು ಪ್ರಥಮಾಕ್ಷರವನ್ನು ನಂತರ ಪಂಚಭೂತಗಳ ಅಕ್ಷರಗಳನ್ನು ದೇವರು ಸೃಷ್ಟಿಸಿದ್ದಾನೆಂದು ತಿಳಿಯುವ ಹಾಗೆ ತೆಲುಗು ಭಾಷೆಯ ಮೊದಲಲ್ಲಿ **ಓಮ್, ನ, ಮ, ಶಿ, ವಾ, ಯ** ಎಂದು ಬರೆದುಕೊಳ್ಳುತ್ತಿದ್ದೆವು. ಈ ಮಧ್ಯಕಾಲದಲ್ಲಿ ಚರಿತ್ರೆ ತಿಳಿಯದ ಮನುಷ್ಯರು

ಒಂದು, ತೆಲುಗು ಭಾಷೆಯಲ್ಲಿರುವ ಮೊದಲ ಆರು ಅಕ್ಷರಗಳನ್ನು ತೆಗೆದು ಹಾಕಿ ಸ್ವರಗಳು ವ್ಯಂಜನಗಳು ಎನ್ನುವ ಅಕ್ಷರಗಳಿಂದ ಅಂದರೇ ಅ ಆ ಗಳಿಂದ ಹೇಳುತ್ತಿದ್ದಾರೆ. ಆದ್ದರಿಂದ ಈ ದಿನ ಪ್ರಜೆಗಳಲ್ಲಿ ಆಧ್ಯಾತ್ಮಿಕವೇ ಇಲ್ಲದ ಹಾಗೆ ಹೋಗಿದೆ. ಮೊದಲ ಅಕ್ಷರಗಳ ಜ್ಞಾನವೇ ಇಲ್ಲದ ಹಾಗೆ ಹೋಗಿದೆ.

ತೆಲುಗು ಭಾಷೆಯನ್ನು ತಯಾರು ಮಾಡುವುದರಲ್ಲಿ ಆಧ್ಯಾತ್ಮಿಕ ತಜ್ಞರು ಪ್ರಕಟಿಸಿದ ಅಕ್ಷರ ಜ್ಞಾನದ ಪ್ರಕಾರ, ಅಂದರೇ ಓಮ್ ನಮಃಶಿವಾಯ ಎನ್ನುವುದರ ಪ್ರಕಾರ ದೇವರಾದ ಆತ್ಮ, ಮಹಾ ಜೀವಿಗಳಾದ ಪ್ರಕೃತಿ ಭಾಗಗಳು ಐದು ಹುಟ್ಟಿವೆಯೆಂದು ತಿಳಿದಿದೆ. ನಂತರ ಉಳಿದ ಅಕ್ಷರಗಳು ಎಲ್ಲಾ ತಯಾರಾಗಿವೆ. ಪರಮಾತ್ಮಯೆಂಬ ಹೆಸರಿಲ್ಲದ ದೇವರು, ಆತ್ಮ ಎಂಬ ದೇವರನ್ನು ಮತ್ತು ಜೀವರೂಪವಾದ ಪ್ರಕೃತಿ ಭಾಗಗಳನ್ನು ತಯಾರು ಮಾಡಿ, ಆಗಿನಿಂದ ತಾನು ಏನೂ ಕೆಲಸ ಮಾಡದೆ ಕ್ರಿಯಾರಹಿತನಾಗಿ ಇದ್ದು ಹೋಗಿದ್ದಾನೆ. ಇದನ್ನನುಸರಿಸಿ ನೋಡಿದರೆ ಸೃಷ್ಠಿ ಆದಿಯಲ್ಲಿನ ಸ್ವಲ್ಪ ರಹಸ್ಯ ತಿಳಿಯುವುದೇ ಅಲ್ಲದೆ, ಓಮ್ ನಮಶಿವಾಯ ಒಂದು ಭಾಗವಾಗಿದ್ದು ನಂತರ ಸ್ವರಗಳು, ವ್ಯಂಜನಗಳು ಎನ್ನುವವು ತಯಾರಾಗಿವೆ. ಸ್ವರಗಳು ಎಂದರೇ ಅ, ಆ, ಇ, ಈ ಯಿಂದ ಅಂ, ಅಃ ವರೆಗು ಇರುವವು. ನಂತರ ವ್ಯಂಜನಗಳು ಕ, ಖ ನಿಂದ ಆರಂಭವಾಗಿ ಯ,ರ,ಲ,ವ ಯಿಂದ ಳ, ಕ್ಷ. ಜ್ಞ ವರೆಗು ಇರುತ್ತವೆ.

ತೆಲುಗು ಭಾಷೆಯನ್ನು ಮೂರು ವಿಧಗಳಾಗಿ ವಿಭಜಿಸಿ ನಮ್ಮ ತತ್ವಜ್ಞ (ನಿಪುಣ) ರಾದವರು ಹೇಳಿದ್ದಾರೆ. ಮೊದಲು ಹೇಳಿದ ಪ್ರಥಮ ಅಕ್ಷರ ಆತ್ಮನಾದ ದೇವರಾಗಿದ್ದು, ಉಳಿದ ನ, ಮ, ಶಿ, ವಾ, ಯ ಪ್ರಕೃತಿ ಶಕ್ತಿಗಳಾಗಿವೆ. ಆತ್ಮ, ಪ್ರಕೃತಿ ಎರಡೂ ಉನ್ನತ ಸ್ಥಾನದಲ್ಲಿ ಇರುವಂತೆ ಈ ಆರು ಅಕ್ಷರಗಳು ಮೊದಲು ಬರೆದು ನಂತರ ಸ್ವರಗಳು ಎನ್ನುವವುಗಳನ್ನು ಬರೆಯುತ್ತಾರೆ. ಸ್ವರಗಳು ಒಟ್ಟು 18 ಇವೆ. ಈ ಸ್ವರಗಳು 18 ಆಗಿದ್ದು, 1+8 ಸೇರಿಸಿದರೆ 9 ಆಗುತ್ತಿದೆ. 1+8=9 ಇದನ್ನು ಅನುಸರಿಸಿ ಎರಡನೇ ವರಸೆಯಲ್ಲಿ ಇರುವ 18 ಅಕ್ಷರಗಳು ಸಂಪೂರ್ಣ ಜ್ಞಾನಿಗಳಾಗಿರುವ ಜೀವರಾಶಿಗಳಿಗೆ ಗುರುತಾಗಿವೆ. ಅವುಗಳ ಮೊತ್ತವು 9

ಆಗಿರುವುದರಿಂದ ಜ್ಞಾನ ಇರುವ ಜೀವಿಗಳ ಗುಂಪಾಗಿ ಲೆಕ್ಕಿಸುತ್ತಿದ್ದೇವೆ. ನಂತರ ವರಸೆ ಕ್ರಮದಲ್ಲಿ ಕ, ಖ ಯಿಂದ ಪ,ಫ,ಬ,ಭ,ಮ ವರೆಗು ಒಟ್ಟು 27 ಅಕ್ಷರಗಳು ಇವೆ. ಇವುಗಳ ಸಂಖ್ಯೆಯನ್ನು ಕೂಡಾ ಕೂಡಿದರೇ ಒಂಭತ್ತೇ ಬರುತ್ತದೆ. ಆದ್ದರಿಂದ ಈ ಗುಂಪನ್ನು ಭಕ್ತಿ ಮಾರ್ಗದಲ್ಲಿ ಇರುವವರ ಹಾಗೆ ಹೇಳಬಹುದು. ನಂತರ ನಾಲ್ಕನೇ ವರಸೆಯಲ್ಲಿ ಯ,ರ,ಲ,ವ ಯಿಂದ ಳ,ಕ್ಷ,ಜಃ ಅನ್ನುವ ಹನ್ನೊಂದು ಅಕ್ಷರಗಳು ಇವೆ. ಈ ಗುಂಪು ಅಕ್ಷರಗಳನ್ನು ಪೂರ್ತಿ ಅಜ್ಞಾನಿಗಳಾಗಿ, ನಾಸ್ತಿಕರಾಗಿ ಹೇಳಬಹುದು.

ಈ ವಿಧವಾಗಿ ಆಧ್ಯಾತ್ಮಿಕ ತಜ್ಞರಾದವರು ಪೂರ್ವದಲ್ಲಿ ತೆಲುಗು ಅಕ್ಷರಗಳನ್ನು ನಾಲ್ಕು ಗುಂಪುಗಳಾಗಿ ತಯಾರು ಮಾಡಿದ್ದಾರೆ.

**1)ಮೊದಲ ಗುಂಪು 1+5ನ್ನು ಒಂದು ಆತ್ಮಯೆಂದು, ಐದು ಮಹಾ ಜೀವಿಗಳೆಂದು ಹೇಳಿದ್ದಾರೆ.**

**2)ಎರಡನೇ ಗುಂಪು ಸ್ವರಗಳು 18. 1+8=9 ಇವುಗಳನ್ನು ಪೂರ್ತಿ ಜ್ಞಾನಿಗಳಾಗಿ ಹೇಳಿದ್ದಾರೆ.**

**3)ಮೂರನೇ ಗುಂಪು ವ್ಯಂಜನಗಳು 27. 2+7=9 ಇವುಗಳನ್ನು ಭಕ್ತರನ್ನಾಗಿ ಹೇಳಿದ್ದಾರೆ.**

**(ಚ, ಚೇ, ಛ. ಜ, ಜೆ, ಝ,ಞ(ಚೇಜೇ) ಈ ಎರಡು ಸ್ವರಗಳು ಪೂರ್ವದಲ್ಲಿ ಇದ್ದವು. ಈಗ ಕಾಲಗರ್ಭದಲ್ಲಿ ಬೆರೆತುಹೋಗಿವೆ.)**

**4)ನಾಲ್ಕನೇ ಗುಂಪಿನಲ್ಲಿ 11. 1+1=2 ಇವುಗಳನ್ನು ಪೂರ್ತಿ ಅಜ್ಞಾನಿಗಳನ್ನಾಗಿ ಹೇಳಿದ್ದಾರೆ.**

ಭೂಮಿ ಮೇಲೆ ಹುಟ್ಟಿದ ಮನುಷ್ಯರಲ್ಲಿ ಜ್ಞಾನವನ್ನು, ಅಜ್ಞಾನವನ್ನು ಸೂಚಿಸುತ್ತಾ 1) ಆತ್ಮ ಜ್ಞಾನಿಗಳು, 2) ಭಕ್ತರು, 3) ಅಜ್ಞಾನಿಗಳಾಗಿ ಗುರುತು ಇರುವಂತೆ ಮಾಡಿದ್ದಾರೆ. ಅವುಗಳಿಗೆಲ್ಲ ದೊಡ್ಡವರು ದೇವರು, ಪ್ರಕೃತಿಯೆಂದು

ತಿಳಿಸುತ್ತಾ ಪ್ರತ್ಯೇಕ ಭಾಗವಾಗಿ 1+5 ಆರು ಅಕ್ಷರಗಳನ್ನು ತಯಾರು ಮಾಡಿದ್ದಾರೆ. ಅದರಲ್ಲಿ ಒಂದು ದೇವರಾದ ಆತ್ಮ. ಎರಡನೇ ಗುಂಪು ಪ್ರಕೃತಿಯಾದ ಐದು ಮಹಾ ಭೂತಗಳು ಎಂದು ಹೇಳಿದ್ದಾರೆ. ಈ ವಿಧವಾಗಿ ದೇವರು, ಪ್ರಕೃತಿಯನ್ನು, ಮನುಷ್ಯರನ್ನು ತಯಾರು ಮಾಡುವುದೇ ಅಲ್ಲದೇ, ಮನುಷ್ಯರಲ್ಲಿ ಜ್ಞಾನಿಗಳು, ಭಕ್ತರು, ಅಜ್ಞಾನಿಗಳು ಎಂದು ಮೂರು ವಿಧಗಳಾಗಿ ಇದ್ದಾರೆಂದು ತಿಳಿಯುವ ಹಾಗೆ ತೆಲುಗು ಅಕ್ಷರಗಳನ್ನು ತಯಾರು ಮಾಡಿ ತೋರಿಸಿದ್ದಾರೆ. ಈ ವಿಧಾನ ಪ್ರಪಂಚದಲ್ಲಿ ಯಾವ ಭಾಷೆಯಲ್ಲಿಯೂ ಇಲ್ಲ. ಪ್ರಪಂಚದಲ್ಲಿ ಮೊಟ್ಟಮೊದಲು ಹುಟ್ಟಿದ ಭಾಷೆಯಾಗಿ ತೆಲುಗು ಭಾಷೆ ಇರುವುದೇ ಅಲ್ಲದೆ ದೈವ ಜ್ಞಾನದಿಂದ ಕೂಡಿಕೊಂಡ ಏಕೈಕ ಭಾಷೆಯಾಗಿ ತೆಲುಗು ಭಾಷೆ ಇದೆಯೆಂದು ಹೇಳಬಹುದು. ಈ ಮಧ್ಯ ಕಾಲದಲ್ಲಿ ಚರಿತ್ರೆ ತಿಳಿಯದ ಕೆಲವರು ನಾವು ಪಂಡಿತರೆಂಬ ಅಹಮ್‌ನಿಂದ ಎಷ್ಟೋ ಅರ್ಥದಿಂದ ಕೂಡಿಕೊಂಡ ಅಕ್ಷರಗಳಲ್ಲಿ ಕೆಲವನ್ನು ತೊಲಗಿಸಿ ಅರ್ಥರಹಿತ ಮಾಡಿದ್ದಾರೆ.

ಯಾವುದು ಏನಾದರೂ ಪೂರ್ವದಲ್ಲಿ ಅಕ್ಷರಗಳನ್ನು ತೆಲುಗು ಭಾಷೆಯಾಗಿ ತಯಾರು ಮಾಡಿ, ತೆಲುಗು ಭಾಷೆ ಆಧ್ಯಾತ್ಮಿಕ ಭಾವದಿಂದ ಇದೆಯೆಂದು ತಿಳಿಸಿದ್ದಾರೆ. ಇಲ್ಲಿಯವರೆಗು ನಾವು ತಿಳಿದುಕೊಂಡ ಭಾಷೆಯಲ್ಲಿ ಆತ್ಮದೇವರನ್ನು, ಐದು ಪ್ರಕೃತಿ ಭಾಗಗಳನ್ನು, ಸರ್ವಜೀವರಾಶಿಗಳನ್ನು ಪರಮಾತ್ಮ ಎಂಬ ದೇವರು ಸೃಷ್ಟಿಸಿದ್ದಾನೆಂದು ತಿಳಿಯುತ್ತಿದೆ. ಪ್ರಥಮ ದೈವ ಗ್ರಂಥವಾದ ತೌರಾತಿನಲ್ಲಿ ಅಂದರೇ ಭಗವದ್ಗೀತೆಯಲ್ಲಿ ಆತ್ಮ, ಪರಮಾತ್ಮ, ಪ್ರಕೃತಿ ಮೂರು ಇದ್ದಂತೆ ತಿಳಿಯುತ್ತಿದೆ. ಭಗವದ್ಗೀತೆ ಜ್ಞಾನವೇ ಬೈಬಲ್‌ನಲ್ಲಿ ಇದೆ. ಅಲ್ಲಿ ನೋಡಿದ ಪ್ರಕಾರ ಪರಮಾತ್ಮನನ್ನು ಅವರು ಪರಿಶುದ್ಧಾತ್ಮಯೆಂದು ಹೇಳುತ್ತಿದ್ದಾರೆ. ಪರಿಶುದ್ಧಾತ್ಮಗೆ ಆತ್ಮ ಕುಮಾರನಾಗಿ ಇದ್ದಾನೆಂದು, ಕುಮಾರನಾದ ಆತ್ಮ ಸರ್ವಜೀವರಾಶಿಗಳನ್ನು ಸೃಷ್ಟಿಸುತ್ತಾ, ಮರಣಿಸುವಂತೆ ಮಾಡುತ್ತಾ, ತೀರ್ಪುಕೊಟ್ಟು ಮರುಜನ್ಮಕ್ಕೆ ಕಳಿಸುತ್ತಿದೆಯೆಂದು, ಅಂತಹ ಆತ್ಮನನ್ನೇ ಮನುಷ್ಯರು ಆರಾಧಿಸಬೇಕೆಂದು ಪರಮಾತ್ಮನಾದ ದೇವರು ಹೇಳಿದ್ದಾನೆ. ಇದನ್ನು ಅನುಸರಿಸಿ

ನಮಗೆ (ಮನುಷ್ಯರಿಗೆ) ತಂದೆ ಆತ್ಮಯೆಂದು, ಆತ್ಮಗೆ ತಂದೆ ಪರಮಾತ್ಮ (ಪರಿಶುದ್ಧಾತ್ಮ) ಎಂದೂ ತಿಳಿಯುತ್ತಿದೆ. ಈ ವಿಧವಾಗಿ ಲೆಕ್ಕಿಸಿದರೆ ಪರಮಾತ್ಮ ನಮಗೆ ತಾತನಾಗಿ ಇದ್ದಾನೆಂದು, ತಾತನಿಗೂ ನಮಗೂ ಮಧ್ಯದಲ್ಲಿ ತಂದೆಯಾದ ಆತ್ಮ ಇದ್ದಾನೆಂದು, ಪರಿಶುದ್ಧಾತ್ಮನಾದ ಅಂದರೇ ಪರಮಾತ್ಮನಾದ ದೇವರ ಹತ್ತಿರಕ್ಕೆ (ಮೋಕ್ಷಕ್ಕೆ) ಸೇರಬೇಕೆಂದರೇ ತಂದೆಯ ಮುಖಾಂತರವೇ ಹೋಗಬೇಕೆಂದು ತಿಳಿಯುತ್ತಿದೆ. ಆದ್ದರಿಂದ ಪರಮಾತ್ಮನಾದ ದೇವರನ್ನು ತಿಳಿಯಬೇಕೆಂದರೇ ಆತ್ಮನಾದ ದೇವರನ್ನು ತಿಳಿಯಬೇಕಾದ್ದೆ. ಆತ್ಮನನ್ನು ತಿಳಿಯುವುದು ಅಥವಾ **ಆತ್ಮವನ್ನು ಅಧ್ಯಯನ ಮಾಡುವುದನ್ನು ಆಧ್ಯಾತ್ಮಿಕ** ಎನ್ನುತ್ತಿದ್ದೇವೆ. ಆಧ್ಯಾತ್ಮಿಕವನ್ನು ತಿಳಿಯದೇ ಯಾರೇ ಆಗಲೀ ಮೋಕ್ಷವನ್ನು ಸೇರಲಾರನು. ಯಾವ ಜೀವಿ ಯಾದರೂ ಮೊದಲು ಆತ್ಮನನ್ನು ತಿಳಿದಾಗಲೇ ನಂತರ ಪರಮಾತ್ಮನನ್ನು ತಿಳಿಯಬಹುದು. ಆತ್ಮನನ್ನು ತಿಳಿಯುವುದಕ್ಕಿಂತಲೂ ಮೊದಲು ಪ್ರಕೃತಿಯಿಂದ ತಯಾರಾದ ಮಾಯೆಯನ್ನು ತಿಳಿಯಬೇಕಾಗಿರುತ್ತದೆ.

ಪ್ರಕೃತಿ ಜನಿತವಾದ ಮಾಯೆಯನ್ನು ತಿಳಿಯಬೇಕೆಂದರೇ ಮೊದಲು ತಾನು ಯಾರೋ ತಿಳಿಯಬೇಕು. ಏಕೆಂದರೇ! ಜೀವಿಯೇ ಮೋಕ್ಷಕ್ಕೆ ಹೋಗಬೇಕಾಗಿರುವುದು. ಆದ್ದರಿಂದ ಜೀವಿಯಾದ ತನ್ನಿಂದ ಆರಂಭಿಸಿ ಗಮ್ಯವಾದ ಪರಮಾತ್ಮ ಹತ್ತಿರಕ್ಕೆ ಸೇರಬೇಕಾಗಿರುತ್ತದೆ. ಗಮ್ಯ ಪರಮಾತ್ಮ (ಮೋಕ್ಷ) ಆದರೇ ಪ್ರಾರಂಭ ಸ್ಥಳ ಜೀವಾತ್ಮಯೆಂದು ತಿಳಿಯಬೇಕು. ಪ್ರಾರಂಭದಿಂದ ಮೊದಲು ತನ್ನನ್ನು ತಾನು (ಜೀವಾತ್ಮನನ್ನು) ತಿಳಿಯಬೇಕು. ಜೀವಾತ್ಮ ನಂತರ ಮಾಯೆ ಯನ್ನು ತಿಳಿಯಬೇಕು, ನಂತರ ಆತ್ಮನನ್ನು ತಿಳಿಯಬೇಕು. ಆ ನಂತರ ಪರಮಾತ್ಮ ತಿಳಿಯಲ್ಪಡುತ್ತಾನೆ. ಅದನ್ನೇ ಮೋಕ್ಷ ಎಂದೂ, ಅದನ್ನೇ ಪರಲೋಕವೆಂದು, ಅದನ್ನೇ ಮುಕ್ತಿ ಎಂದು ಅನೇಕ ವಿಧಗಳು ಹೇಳುತ್ತಿದ್ದಾರೆ. ಜೀವಿಯು ತನ್ನ ಸ್ಥಳದಿಂದ ಪ್ರಾರಂಭವಾಗಿ ಜ್ಞಾನಮಾರ್ಗದಲ್ಲಿ ಪ್ರಯಾಣಿಸಬೇಕು. ಗಮ್ಯಸ್ಥಾನ ಕೊನೆಯದಾಗಿ ಪರಮಾತ್ಮನಾಗಿದ್ದು, ಮಧ್ಯದಲ್ಲಿ ದಾಟಬೇಕಾದ ಊರುಗಳು ಎರಡು ಇವೆ. ಒಂದು ಮಾಯೆ, ಎರಡು ಆತ್ಮ. ಈ ಎರಡನ್ನು ನೋಡಿಕೊಂಡು

ಈ ಎರಡನ್ನು ದಾಟಿದರೆ ಆಗ ಮುಕ್ತಿಯಾದ ಪರಮಾತ್ಮನನ್ನು ಹೊಂದಬಹುದು. ಹಾಗೆ ಹೊಂದಿದಾಗ ಆ ಜೀವಿಯು ಪುನಃ ಹುಟ್ಟುವುದಿಲ್ಲ. ಆತ್ಮ ಕೈಯಲ್ಲಿ ಇರುವವರೆಗು ಜನ್ಮಗಳು ಎತ್ತುತ್ತಿರಬೇಕು. ಹಾಗೆಯೇ ಮಾಯೆಯನ್ನು ದಾಟುವವರೆಗು ಮನುಷ್ಯನಿಗೆ ಕಷ್ಟ ಸುಖಗಳು ತಪ್ಪುವುದಿಲ್ಲ. ಯಾವಾಗಾದರೆ ಮನುಷ್ಯನ ಶರೀರದಲ್ಲಿರುವ ಜೀವಾತ್ಮ ಮಾಯೆಯನ್ನು ದಾಟಿ ಆತ್ಮನನ್ನು ಅರ್ಥ ಮಾಡಿಕೊಂಡು, ಆತ್ಮನನ್ನು ದಾಟಿ ಮುಂದಕ್ಕೆ ಹೋದರೆ ಮುಕ್ತಿ ದೊರಕುತ್ತದೆ. ಅದೇ ಕೊನೆಯ ಗಮ್ಯವಾಗುತ್ತದೆ.

ಈ ವಿಧಾನವೆಲ್ಲ ತಿಳಿಯುವುದಕ್ಕೆ ತೆಲುಗು ಭಾಷೆಯಲ್ಲಿ ಒಂದು ಗುಂಪಾಗಿರುವ ಆರು (6) ಅಕ್ಷರಗಳನ್ನು, ಹಾಗೆಯೇ ಎರಡನೇ ಗುಂಪಿನಲ್ಲಿರುವ ಹದಿನೆಂಟು (18) ಅಕ್ಷರಗಳನ್ನು, ಮೂರನೇ ಗುಂಪಾಗಿರುವ ಇಪ್ಪತ್ತೇಳು (27) ಅಕ್ಷರಗಳನ್ನು ಕೊನೆಯ ನಾಲ್ಕನೇ ಗುಂಪಾಗಿರುವ ಹನ್ನೊಂದು (11) ಅಕ್ಷರಗಳನ್ನು ತಿಳಿಯಬೇಕಾಗಿರುತ್ತದೆ. ಹಾಗೆ ತಿಳಿದಾಗಲೇ ತೆಲುಗು ಭಾಷೆ ತಿಳಿಯುತ್ತದೆ. ತೆಲುಗು ಭಾಷೆ ಮನುಷ್ಯನಿಗೆ ಜ್ಞಾನ ಸಂದೇಶವಾಗಿ ಇದೆ. ತೆಲುಗು ಭಾಷೆ ಮನುಷ್ಯನನ್ನು ಆಲೋಚಿಸುವಂತೆ ಮಾಡಿ, ಮುಕ್ತಿ ಮಾರ್ಗದಲ್ಲಿ ಮುಂದಕ್ಕೆ ಹೋಗುವುದಕ್ಕೆ ಅವಕಾಶವನ್ನು ಕೊಡುತ್ತಿದೆ. ಆದರೆ ಮನುಷ್ಯ ತೆಲುಗು ಭಾಷೆಯನ್ನು ಕಲಿತಿದ್ದರೂ ಅದರಲ್ಲಿ ಅಡಗಿರುವ ಆಧ್ಯಾತ್ಮಿಕ ಭಾವವನ್ನು ತಿಳಿಯದಂತಿದ್ದಾನೆ. ಆದ್ದರಿಂದ ಭಾಷೆಯಲ್ಲಿ ಅಡಗಿರುವ ಕೆಲವು ಪದಗಳು ನಿಮ್ಮನ್ನು ಜ್ಞಾನ ಮಾರ್ಗದಲ್ಲಿ ನಡೆಸಿ, ಮೂರು ಆತ್ಮಗಳನ್ನು ಕುರಿತು ತಿಳಿಸುತ್ತವೆ. ಮೂರನೇ ಆತ್ಮನಾದ ಪರಮಾತ್ಮ ಅಂತ್ಯಕ್ಕೆಸಿಕ್ಕದಿರುವುದು. ಯಾರಿಗೂ ತಿಳಿಯದಿರುವುದು ಎಂದು ಸೂಚಿಸುವಂತಿರುವ ಪದಗಳನ್ನು ಈಗ ನೋಡೋಣ.

ಮನುಷ್ಯನಿಗೆ ಹತ್ತಿರವಾಗಿ ಕೆಲವರೇ ಇರುತ್ತಾರೆ. ಅವರನ್ನು ಕುಟುಂಬ ಸದಸ್ಯರು ಎನ್ನುತ್ತೇವೆ. ಮನುಷ್ಯನೊಂದಿಗೆ ಹೆಚ್ಚಾಗಿ ಸಂಬಂಧ ಬಾಂಧವ್ಯಗಳನ್ನು ಹೊಂದಿರುವವರು ಕೆಲವರಿರುತ್ತಾರೆ. ಅವರಲ್ಲಿ ಕೆಲವರನ್ನು ಹೇಳಿಕೊಂಡರೆ ಗಂಡಸರಲ್ಲಿ ನಾಲ್ವರನ್ನು, ಹೆಂಗಸರಲ್ಲಿ ನಾಲ್ವರನ್ನು ತೋರಿಸುತ್ತಾ ಅವರನ್ನು

ಹೀಗೆ ಹೇಳಿದ್ದಾರೆ. ಅಮ್ಮ ಎಂಬ ಪದ ಎಲ್ಲರಿಗೂ ತಿಳಿದಿರುವುದೇ. ಅಮ್ಮ ಇಲ್ಲದ ಮನುಷ್ಯ ಭೂಮಿ ಮೇಲೆ ಇರುವುದಿಲ್ಲ. ಚಿಕ್ಕ ವಯಸ್ಸಿನಲ್ಲಿ ಶಿಶುವಾಗಿರುವಾಗ ಮೊದಲು ಹೇಳುವ ಪದ ಅಂದರೇ ಮಗುವಿನ ಬಾಯಿಗೆ ಮೊದಲು ಬರುವ ಭಾಷಾ ಪದ ಅಮ್ಮ, ಇಲ್ಲದಿದ್ದರೆ ಅತ್ತೆ, ಅಮ್ಮ ಎಂದಾಗಲೀ, ಅತ್ತೆ ಎಂದಾಗಲೀ ಚಿಕ್ಕಂದಿನಲ್ಲಿ ಪದಗಳಲ್ಲಿ ಎಷ್ಟೋ ಉನ್ನತ ಜ್ಞಾನ ಅಡಗಿದೆ. ಅದರ ವಿವರ ನೋಡಿದರೆ ಹೀಗೆ ಇದೆ.

ಅಮ್ಮ, ಅತ್ತೆ, ಅಕ್ಕ, ಅವ್ವ ಈ ನಾಲ್ಕು ಪದಗಳು ಮೊದಲು ಮನುಷ್ಯನಿಂದ ಉಚ್ಛರಿಸುವ ಹಾಗೆ ಮಾಡುತ್ತಿದ್ದಾರೆ. ಸ್ವಲ್ಪ ದೊಡ್ಡವರಾದ ನಂತರ ಅಣ್ಣ, ಅಪ್ಪ, ಅಯ್ಯ, ಅಬ್ಬಾ ಎನ್ನುವ ಪದಗಳನ್ನು ಕಲಿತು ಹೇಳುತ್ತಿದ್ದೇವೆ. ಈ ಎಂಟು ಪದಗಳು ಮನುಷ್ಯ ಸುಲಭವಾಗಿ ನುಡಿಯುವ ನುಡಿಗಳಾಗಿ ಇವೆ. ಇದರಲ್ಲಿ ಅಂದರೇ ಈ ಪದಗಳಲ್ಲಿ ಗಮನಿಸಿದರೆ ಮೊದಲು ಎಲ್ಲಾ ಪದಗಳಿಗು **"ಅ"** ಎಂಬ ಅಕ್ಷರ ಸಾಧಾರಣವಾಗಿದೆ. ನಂತರ ಎರಡನೇ ಅಕ್ಷರವನ್ನು ನೋಡಿದರೆ ಅಮ್ಮನಲ್ಲಿ **ಮ** ಎಂಬ ಅಕ್ಷರಕ್ಕೆ **ಮ** ಒತ್ತು ಇರುವುದು ವಿಶೇಷ. ಹಾಗೆಯೇ ಎರಡನೇ ಅಕ್ಷರವಾಗಿರುವ ಅಮ್ಮ, ಅಕ್ಕ, ಅವ್ವ, ಅತ್ತೆಯಲ್ಲಿ ಯಾವುದಕ್ಕದು ಅದರ ಒತ್ತುಗಳೇ ಹೇಳಲ್ಪಟ್ಟಿವೆ. ಸ್ತ್ರೀಯರಿಗೆ ಹೇಳಿದ ಅಮ್ಮ, ಅತ್ತೆ, ಅಕ್ಕ, ಅವ್ವನಲ್ಲಿ ಹಾಗೆಯೇ ಇರುವುದಲ್ಲದೇ, ಪುರುಷರಿಗೆ ಹೇಳಿದ ಅಣ್ಣ, ಅಯ್ಯ, ಅಪ್ಪ, ಅಜ್ಜನಲ್ಲಿ ಕೂಡಾ ಹಾಗೆಯೇ ಇವೆ, ಭಾಷೆಯನ್ನು ತಯಾರು ಮಾಡಿದ ಆಧ್ಯಾತ್ಮಿಕ ತಜ್ಞರು ಹಾಗೆ ಏಕೆ ತಯಾರು ಮಾಡಿದ್ದಾರೆಂದರೇ! ಮನುಷ್ಯರು ಈ ಪದಗಳನ್ನು ಕುರಿತು ಆಲೋಚಿಸಿದರೆ ಅದರ ಮೂಲವಾಗಿ ಸ್ವಲ್ಪ ಆತ್ಮಗಳ ಜ್ಞಾನ ತಿಳಿಯುತ್ತದೆಂದು ಅವರ ಉದ್ದೇಶವಾಗಿದೆ. ಅವರ ಉದ್ದೇಶವನ್ನು ತಿಳಿಯುವುದಕ್ಕೆ ಮೊದಲು ಒಂದು ಪದವನ್ನು ತೆಗೆದುಕೊಂಡು ನೋಡೋಣ.

**ಅಮ್ಮ** ಎಂಬ ಶಬ್ದದಲ್ಲಿರುವ ಮೊದಲ ಅಕ್ಷರವಾದ **ಅ** ಒಂದರ ಅರ್ಥ ಇಲ್ಲ, ಅಲ್ಲ ಎಂದು ಇದೆ. ಬದ್ಧ ಎಂದರೇ ಸಕ್ರಮವಾದುದು, ಸತ್ಯವಾದುದು

ಎಂದು ತಿಳಿಯುತ್ತಿದೆ. ಅಂತಹ ಬದ್ಧ (ಸತ್ಯ,ನಿಜ) ಎಂಬ ಪದಕ್ಕೆ **ಅ** ಅನ್ನು ಸೇರಿಸಿದರೆ ಬದ್ದ ಅಲ್ಲದಿರುವುದು **ಅಬದ್ದ (ಅಸತ್ಯ,ಸುಳ್ಳು)** ಎಂದು ತಿಳಿಯುತ್ತಿದೆ. ಸತ್ಯಕ್ಕೆ **'ಅ'** ಅನ್ನು ಸೇರಿಸಿದರೆ ಅದು ಅಸತ್ಯವಾಗಿ ಬದಲಾಗಿ ಹೋಗುತ್ತಿದೆ. ವಿಶ್ವಾಸ ಎಂದರೇ ನಂಬಿಕೆ ಎಂದು ಎಲ್ಲರಿಗೂ ತಿಳಿದಿದೆ. ಆ ಪದಕ್ಕೆ ಅ ಎಂಬ ಶಬ್ದವನ್ನು ಸೇರಿಸಿದರೆ ಅದು ಸ್ವಲ್ಪ ಅವಿಶ್ವಾಸ ಆಗಿಹೋಗುತ್ತದೆ. ನಂಬಿಕೆ ಇಲ್ಲ ಎನ್ನುವಂತೆ ಆಗುತ್ತದೆ. ವಿವೇಕ ಎಂದರೇ ತಿಳುವಳಿಕೆ ಎಂದು ಅರ್ಥವಿದೆ. ಅದಕ್ಕೆ **ಅ** ಅನ್ನು ಸೇರಿಸಿದರೆ ಅವಿವೇಕ ಆಗುತ್ತದೆ. ಆಗ ತಿಳುವಳಿಕೆ ಇಲ್ಲವೆಂದು ಅರ್ಥ ಬರುತ್ತಿದೆ. ಹೀಗೆ ಎಷ್ಟೋ ಪದಗಳ ಮುಂದೆ **ಅ** ಅನ್ನು ಉಪಯೋಗಿಸಿ, **ಆ** ಪದಕ್ಕೆ ವಿರುದ್ಧ ಭಾವನೆ ಬರುವಂತೆ ಮಾಡುತ್ತಿದ್ದಾರೆ. ಕೆಲವು ಪದಗಳನ್ನು ನೋಡಿದರೆ ಹೀಗೆ ಇವೆ. **ವ್ಯಕ್ತ** ಎಂದರೇ ತಿಳಿಯುವುದು ಅಥವಾ ಕಾಣಿಸುವುದೆಂದು ಅರ್ಥವಿದೆ. ಆದರೆ ಅದಕ್ಕೆ **ಅ ಅ**ನ್ನು ಸೇರಿಸಿದರೆ **ಅವ್ಯಕ್ತ** ಆಗುತ್ತಿದೆ. ಆಗ ತಿಳಿಯದಿರುವುದು, ಕಾಣಿಸದಿರುವುದು ಎಂದು ವಿರುದ್ಧ ಭಾವ ಬರುತ್ತಿದೆ. ಹಾಗೆಯೇ **ಶ್ರದ್ಧೆಗೆ ಅಶ್ರದ್ಧೆ** ಎಂದೂ, **ಜ್ಞಾನಕ್ಕೆ ಅಜ್ಞಾನವೆಂದೂ, ದ್ವೈತಕ್ಕೆ ಅದ್ವೈತ ಎಂದೂ, ಮೃತ** ಎನ್ನುವುದಕ್ಕೆ **ಅಮೃತ ಎಂದೂ, ನಿಶ್ಚಯಕ್ಕೆ ಅನಿಶ್ಚಯ** ಎಂದೂ, **ಸಂಶಯಕ್ಕೆ ಅಸಂಶಯ** ಎಂದೂ **ಕ್ಷರಕ್ಕೆ ಅಕ್ಷರ** ಎಂದೂ, **ಪ್ರತಿಷ್ಟೆಗೆ ಅಪ್ರತಿಷ್ಟೆ** ಎಂದೂ, **ಏಕಕ್ಕೆ ಅನೇಕ** ಎಂದೂ ಹೇಳುವುದರಿಂದ ಅವುಗಳಿಗೆ ಪೂರ್ತಿ ವಿರುದ್ಧ ಭಾವ ಬರುತ್ತಿದೆ.

ಇಂತಹ ಶಕ್ತಿ ಇರುವ ಅಂದರೇ ಅರ್ಥವಿರುವ **"ಅ"** ಎಂಬ ಅಕ್ಷರವನ್ನು ಸೇರಿಸಿ ಪಕ್ಕದಲ್ಲಿ ಅಮ್ಮ ಯೆಂದೂ, ಅತ್ತೆಯೆಂದೂ, ಅವ್ವಯೆಂದೂ ಅಕ್ಕಯೆಂದು ಹೇಳುವುದರಲ್ಲಿನ ಅರ್ಥವನ್ನು ನೋಡಿದರೆ ಹೀಗೆ ಇದೆ. ಇಲ್ಲಿಯವರೆಗು **ಅ** ಎಂಬ ಶಬ್ಧಕ್ಕೆ ಎಷ್ಟು ಭಾವಾರ್ಥವಿದೆಯೋ ತಿಳಿದುಹೋಗಿದೆ. ಈಗ **ಮ** ಎಂಬ ಅಕ್ಷರಕ್ಕೆ **ಮ ಒತ್ತೇ** ಇರುವುದರಿಂದ ಒಂದು ಅಕ್ಷರದಲ್ಲಿ ಎರಡು ಅಕ್ಷರಗಳು ಕೂಡಿರುವಂತೆ ತಿಳಿಯುತ್ತಿದೆ. ಹಾಗೆಯೇ ಕ್ಕ, ವ್ವ, ತ್ತೆ ಎಂಬ ಅಕ್ಷರಗಳು ಕೂಡಾ ಎರಡು ಅಕ್ಷರಗಳು ಕಲೆತಿರುವ ಮುಕ್ತಾಕ್ಷರಗಳಾಗಿ ಇವೆ.

ಇದರಲ್ಲಿ ಯಾವ ಅಕ್ಷರವಿದ್ದರೂ ಅದೇ ಅಕ್ಷರವಾಗಿ ಅದರ ಒತ್ತೇ ಇರುವುದರಲ್ಲಿ ವಿಶೇಷ ಅರ್ಥವಿದೆ. ಅನ್ಯ ಅನ್ನುವುದರಲ್ಲಿ **ನ** ಗೆ ಬೇರೆ **ಯ** ಒತ್ತು ಬೆರೆತಿದೆ. ಇಲ್ಲಿ ಹಾಗಲ್ಲದೆ ವ್ವ ಗೆ ವ ಒತ್ತೇ, ಕ್ಕ ಗೆ ಕ ಒತ್ತೇ, ತ್ತೆ ಗೆ ತ ಒತ್ತೇ ಇರುವುದರಿಂದ ಅಂದಿನ ಆಧ್ಯಾತ್ಮಿಕ ತಜ್ಞರು ಏಕೆ ಹಾಗೆ ಇಟ್ಟಿದ್ದಾರೆಂದು ಆಲೋಚಿಸಿದರೆ ಅದಕ್ಕೆ ಸಮಾಧಾನ ಈ ವಿಧವಾಗಿ ದೊರಕುತ್ತಿದೆ.

ಮನುಷ್ಯನ ಶರೀರದಲ್ಲಿ ದೇವರಾದ ಆತ್ಮ ಇದೆ. ಆತ್ಮವೇ ಶರೀರವೆಲ್ಲವೂ ಆಕ್ರಮಿಸಿಕೊಂಡು ಶರೀರದಲ್ಲಿ ಮೊದಲ ಆತ್ಮವಾಗಿ ಕಾಣಿಸುತ್ತಿದೆ. ಆತ್ಮಯಿಂದ ಹುಟ್ಟಿರುವುದು ಜೀವಾತ್ಮ. ಜೀವಾತ್ಮ ಶರೀರದಲ್ಲಿ ಒಂದು ಕಡೆ ಚಲನ ವಲನ ಇದೆ. ಆತ್ಮ ಮರೆಯಲ್ಲಿರುವ ಜೀವಾತ್ಮವನ್ನು ಚಿಕ್ಕ ಆತ್ಮ ಎಂದೂ, ಆತ್ಮಗೆ ಹುಟ್ಟಿದೆಯೆಂದೂ ಹೇಳುತ್ತಿದ್ದೇವೆ. ಹಾಗೆಯೇ ಈಗ ಎರಡು ಶಬ್ದಗಳು ಕಲೆತಿರುವ **ಮ್ಮ** ಅನ್ನು ತೆಗೆದುಕೊಂಡು ನೋಡಿದರೆ **ಮ** ಮೊದಲ ಆತ್ಮವಾಗಿ ಇರುವಾಗ, ಜೀವಾತ್ಮ ಕೂಡಾ ಶರೀರದಲ್ಲಿ ಎರಡನೇ ಆತ್ಮವಾಗಿ, ಆತ್ಮ ಹಿಂದಿದೆ. ಆದ್ದರಿಂದ ಈಗ ಅಮ್ಮ ಪದದಲ್ಲಿ **ಮ** ಅನ್ನು ಆತ್ಮವಾಗಿ ಹೇಳಿದರೆ, ಜೀವಾತ್ಮವನ್ನು **ಮ ಒತ್ತಾಗಿ** ಹೇಳಬಹುದು. ಮ ಗೆ ಮಕಾರ ಒತ್ತೇ ಇರುವುದರಿಂದ ಮ ಆತ್ಮವಾಗಿದ್ದು. ಮಕಾರ ಒತ್ತು ಜೀವಾತ್ಮವಾಗಿ ಎರಡು ಆತ್ಮಗಳನ್ನು ಸಂಯುಕ್ತಾಕ್ಷರವಾಗಿ ಇರುವ ಮ್ಮ ಆಗಲಿ, ವ್ವ ಆಗಲಿ, ತ್ತೆ ಆಗಲಿ,ಕ್ಕ ಆಗಲಿ ತಿಳಿಸುತ್ತಿವೆ. ಈ ವಿಧವಾಗಿ ಸೂಚನೆ ಮಾಡುವ ಯುಕ್ತಾಕ್ಷರದ ಮುಂದೆ **ಅ** ಇರುವುದರಿಂದ ಆತ್ಮ, ಜೀವಾತ್ಮ ಎರಡೂ ಅಲ್ಲ **ನಾನು ಮುಖ್ಯ** ಎಂದು ಹೇಳಿದಂತೆ ಇದೆ. ವಾಸ್ತವವಾಗಿ ಶರೀರದಲ್ಲಿ ಆತ್ಮ, ಜೀವಾತ್ಮಗಳು ಎರಡೂ ಇದ್ದರೂ, ಸರ್ವಕಾರ್ಯಗಳನ್ನು ಆತ್ಮವೇ ಮಾಡುತ್ತಿದ್ದರೂ, ಅವು ಅಲ್ಲ ನಾನು ಇದ್ದೇನೆ ಅನ್ನುವಂತೆ ತಿಳಿಸುವ ಪರಮಾತ್ಮನಾಗಿ **ಅ** ಎಂಬ ಶಬ್ದವನ್ನು ಹೋಲಿಸಿಕೊಳ್ಳಬೇಕು. ಆಗ ಮನುಷ್ಯನ ಶರೀರದಲ್ಲಿ ಮೂರು ಆತ್ಮಗಳು ಇರುವಂತೆ ತಿಳಿಯುತ್ತಿದೆ. ಮೂರು ಆತ್ಮಗಳನ್ನು ತಿಳಿಯುವುದೇ ತ್ರೈತ ಎನ್ನುತ್ತೇವೆ. ಆದ್ದರಿಂದ ಅಮ್ಮ ಎಂಬ ಪದದಲ್ಲಿ

| | | |
|---|---|---|
| **ಅ – ಪರಮಾತ್ಮ** | **ಅ – ಪರಮಾತ್ಮ** | **ಅ – ಪರಮಾತ್ಮ** |
| **ಮ – ಆತ್ಮ** | **ತೆ – ಆತ್ಮ** | **ವ – ಆತ್ಮ** |
| **್ಮ – ಜೀವಾತ್ಮ** | **್ತ – ಜೀವಾತ್ಮ** | **ವ – ಜೀವಾತ್ಮ** |

ಈ ವಿಧವಾಗಿ ಒಂದು ಪದದಲ್ಲಿ ಮೂರು ಅಕ್ಷರ ಶಬ್ದಗಳಿರುವಂತೆ, ಒಂದು ಶರೀರದಲ್ಲಿ ಮೂರು ಆತ್ಮಗಳಿರುವಂತೆ ಹೇಳಬಹುದು. ಸ್ತ್ರೀಯರಲ್ಲಾಗಲೀ, ಪುರುಷರಲ್ಲಾಗಲೀ ಶರೀರಗಳಲ್ಲಿ ಇದೇ ವಿಧವಾಗಿ ಮೂರು ಆತ್ಮಗಳಿವೆಯೆಂದು ತಿಳಿಯುವ ಹಾಗೆ ಅಮ್ಮ, ಅಕ್ಕ, ಅತ್ತೆ, ಅವ್ವ ಎಂದು ಸ್ತ್ರೀಯರನ್ನು ಹೇಳಿದ್ದಾರೆ. ಹಾಗೆಯೇ ಅಣ್ಣ, ಅಪ್ಪ, ಅಯ್ಯ, ಅಬ್ಬ (ತಾತ) ಎಂದು ಪುರುಷರನ್ನು ಕೂಡಾ ಹೇಳಿದ್ದಾರೆ. ಇದನ್ನು ಅನುಸರಿಸಿ ತೆಲುಗು ಭಾಷಾ ಪದಗಳಲ್ಲಿ ನಾವು ನಿತ್ಯ ಮಾತನಾಡುವ ಪದಗಳಲ್ಲಿ ಇಷ್ಟು ಜ್ಞಾನವನ್ನು ತಿಳಿಯುವ ಹಾಗೆ ನಮ್ಮ ಹಿರಿಯರು ತೆಲುಗು ಭಾಷೆಯನ್ನು ತಯಾರು ಮಾಡಿದ್ದಾರೆ.

ತೆಲುಗು ಭಾಷೆ ನಂತರ ಎಷ್ಟೋ ಭಾಷೆಗಳು ತಯಾರಾಗಿವೆ. ಆದರೂ ಅವುಗಳಲ್ಲಿ ಭಾವವನ್ನು ತಿಳಿಯುವ ಪದಗಳೇ ಇವೆ ಆದರೆ, ಆತ್ಮಜ್ಞಾನವನ್ನು ತಿಳಿಯುವ ಸಾರಾಂಶವಿಲ್ಲ. ಈ ವಿಧವಾಗಿ ತೆಲುಗು ನಾಡಿನಲ್ಲಿ ಹುಟ್ಟಿ ತೆಲುಗು ಕಲಿತವರು ಸ್ವಲ್ಪ ಆಲೋಚಿಸಿದರೆ ಈ ಭಾಷೆಯಲ್ಲಿ ಅಡಗಿರುವ ಜ್ಞಾನವು ತಿಳಿಯಬಲ್ಲದು. ಆದ್ದರಿಂದ ತೆಲುಗು ಭಾಷೆಯನ್ನು ದೈವಭಾಷೆಯಾಗಿ ನಾನು ಮೊದಲೇ ಹೇಳಿದ್ದೇನೆ. ಮೊದಲು ಆಧ್ಯಾತ್ಮಿಕ ತಜ್ಞರಾದವರು ತೆಲುಗು ಭಾಷೆಯನ್ನು ಆತ್ಮಜ್ಞಾನದೊಂದಿಗೆ ಹೊಂದಿಸಿ ಹೇಳಿದ ಘನತೆ ಅವರಿಗೇ ದಕ್ಕಿದೆ. ಈ ದಿನ ತೆಲುಗು ರಾಷ್ಟ್ರಗಳು ಎರಡು ಇರುವಾಗ, ಅದರಲ್ಲಿ ತೆಲುಗು ಕಲಿತವರು ಶೇ. 90% ರಷ್ಟು ಇದ್ದಾರೆ. ಈ 90% ಜನರಲ್ಲಿ ಒಂದು ಶಾತದವರು ಕೂಡಾ ತೆಲುಗು ಭಾಷೆಯ ಹಿರಿಮೆಯನ್ನು ತಿಳಿಯಲಾರದೆ ಹೋಗಿದ್ದಾರೆ. ಈಗ ಇರುವ ಕೆಲವು ಕೋಟಿ ತೆಲುಗಿನವರಲ್ಲಿ ಒಬ್ಬ ಮುಸ್ಲೀಮ್ ತೆಲುಗು ಭಾಷೆಯನ್ನು ಹೆಚ್ಚಾಗಿ ಪ್ರೀತಿಸುತ್ತಾ ಅದನ್ನು ಕುರಿತು ಉತ್ತಮವಾಗಿ

ಮಾತನಾಡುವುದು ನೋಡಿದ್ದೇನೆ. ಲೌಕಿಕವಾಗಿ ತೆಲುಗು ಭಾಷೆಯನ್ನು ಹೊಗಳುತ್ತಿರುವ ವ್ಯಕ್ತಿ ಹಿಂದೂಗಳಲ್ಲಿ ಕಾಣಿಸದಿದ್ದರೂ ಮುಸ್ಲೀಮ್‌ರಲ್ಲಿ ಕಾಣಿಸುವುದು ಆಶ್ಚರ್ಯಕರವಾದ ವಿಷಯ. ಅಂತವರು ಶೀಘ್ರದಲ್ಲೇ ತೆಲುಗು ಭಾಷೆ ದೈವಜ್ಞಾನ ಭಾಷೆಯೆಂದು ತಿಳಿಯಬಲ್ಲರು.

ಸಜೀವವಾದ ಶರೀರದಲ್ಲಿ ಪರಮಾತ್ಮ, ಆತ್ಮ, ಜೀವಾತ್ಮ ಮೂರು ಇವೆಯೆಂಬ ಭಾವವನ್ನು ಅಮ್ಮ ಪದದಲ್ಲಿ ತೋರಿಸಿದ್ದಾರೆ. ಮನುಷ್ಯನಿಗೆ ತಾನು ಜೀವಿಯೆಂದು ಕೂಡಾ ತಿಳಿಯದ ಪರಿಸ್ಥಿತಿಯಲ್ಲಿ ಇದ್ದಾನೆ. ತನ್ನ ಹೆಸರೇ ತನಗೆ ತಿಳಿಯದೆ ಇರುವ ಜೀವಿಗೆ ಆತ್ಮನನ್ನು ಕುರಿತು, ನಂತರ ಪರಮಾತ್ಮನನ್ನು ಕುರಿತು ಸ್ವಲ್ಪವೂ ತಿಳಿದಿಲ್ಲ. ಆದ್ದರಿಂದ ಮೂರು ದೈವ ಗ್ರಂಥಗಳಲ್ಲಿ ಈ ಮೂರು ಆತ್ಮಗಳನ್ನು ಕುರಿತು ಪ್ರತ್ಯೇಕವಾದ ವಿಧಾನದಲ್ಲಿ ಹೇಳಿದ್ದಾರೆ. ಮೊದಲು ಪ್ರಥಮ ದೈವಗ್ರಂಥವಾದ ತೌರಾತ್‌ನಲ್ಲಿ (ಭಗವದ್ಗೀತೆಯಲ್ಲಿ) ನೋಡೋಣ.

**ಪುರುಷೋತ್ತಮ ಪ್ರಾಪ್ತಿಯೋಗದಲ್ಲಿ 16ನೇ ಶ್ಲೋಕ :**

**ದ್ವಾವಿಮೌ ಪುರುಷೌ ಲೋಕೇ**
**ಕ್ಷರ ಶ್ಚಾಕ್ಷರ ಏವಚ।**
**ಕ್ಷರ ಸ್ಸರ್ವಾಣಿ ಭೂತಾನಿ**
**ಕೂಟಸ್ಥೋ ಕ್ಷರ ಉಚ್ಯತೇ ॥**

**ಪುರುಷೋತ್ತಮ ಪ್ರಾಪ್ತಿಯೋಗದಲ್ಲಿ 17ನೇ ಶ್ಲೋಕ:**

**ಉತ್ತಮಃ ಪುರುಷ ಸ್ತ್ವನ್ಯಃ**
**ಪರಮಾತ್ಮೇ ತ್ಯುದಾಹೃತಃ ।**
**ಯೋ ಲೋಕತ್ರಯ ಮಾವಿಶ್ಯ**
**ಬಿಭರ್ತ್ಯವ್ಯಯ ಈಶ್ವರಃ ॥**

ಎಂದು ಎರಡು ಶ್ಲೋಕಗಳಲ್ಲಿ ಮೂರು ಆತ್ಮಗಳ ವಿಧಾನವನ್ನು ಕುರಿತು ವ್ಯಾಸನು ಹೆಸರಿಟ್ಟ **ಭಗವದ್ಗೀತೆಯಲ್ಲಿ,** ಸ್ವತಃವಾಗಿ ಭಗವಂತನಾದ ಕೃಷ್ಣನು ಹೆಸರಿಟ್ಟ **ತೌರಾತ್‌ನಲ್ಲಿ** ಹೇಳುವುದಾಗಿದೆ. ಮೊದಲ ಶ್ಲೋಕದಲ್ಲಿ **ಭೂಮಿಮೇಲೆ ಎರಡು ವಿಧಗಳ ಪುರುಷರು ಇದ್ದಾರೆಂದು, ಅದರಲ್ಲಿ ಒಬ್ಬರ ಹೆಸರು ಕ್ಷರನು ಎಂದು (ನಾಶವಾಗುವವನು ಎಂದು) ಹೇಳುತ್ತಿದ್ದೇವೆ. ಕ್ಷರನು ಸರ್ವ ಜೀವರಾಶಿಗಳಲ್ಲಿ ಇದ್ದಾನೆ. ಅಕ್ಷರನು (ನಾಶ ಆಗದಿರುವವನು) ನಾಶವಾಗುವ ಜೀವಿಯೊಂದಿಗೆ ಸಹಾ ಕೂಡಿ ಇದ್ದಾನೆ.**

ಒಂದು ಶರೀರದಲ್ಲಿ ನಾಶವಾಗುವ ಜೀವಾತ್ಮ ಇರುವಾಗ, ಅದೇ ಶರೀರದಲ್ಲಿಯೇ ನಾಶವಾಗದ ಆತ್ಮ ಕೂಡಾ ಜೀವಾತ್ಮದೊಂದಿಗೆ ಕಲೆತು ನಿವಾಸ ಮಾಡುತ್ತಿದ್ದಾನೆ. ಆದರೆ ಜೀವಾತ್ಮಗು, ಆತ್ಮಗು ಮಿಂಚಿ ಉತ್ತಮನಾದ ಮತ್ತೊಬ್ಬ ಪುರುಷನು ಇದ್ದಾನೆ, ಆತನನ್ನೇ ಪರಮಾತ್ಮಯೆಂದು ಕರೆಯುತ್ತಿದ್ದೇವೆ. ಈ ಮೂರನೆ ಪುರುಷನೇ ಶರೀರದೊಳಗೂ, ಶರೀರದ ಹೊರಗೂ ಪೂರ್ತಿ ಮೂರು ಲೋಕಗಳು ಆವರಿಸಿ, ಅಧಿಪತಿಯೆಂದು ಕರೆಯಲ್ಪಡುತ್ತಿದ್ದಾನೆ. ಈ ಮೂರನೇ ಪುರುಷನನ್ನೇ ಕೆಲವರು **ಪುರುಷರಲ್ಲಿ ಉತ್ತಮವಾದವನು ಆದ್ದರಿಂದ ಪುರುಷೋತ್ತಮ** ಎಂದು ಕರೆದಿದ್ದಾರೆ. ಅಷ್ಟೇಅಲ್ಲದೆ **ಆತ್ಮಗಿಂತ ಪ್ರತ್ಯೇಕವಾಗಿ ಇರುವವನು ಆದ್ದರಿಂದ ಆತನನ್ನು ಪರಮಾತ್ಮ** ಎಂದು ಕರೆದಿದ್ದಾರೆ. ಪರ ಎಂದರೇ ಬೇರೆಯಾಗಿರುವ ಎಂದು ಅರ್ಥ. ಆ ಅರ್ಥದ ಪ್ರಕಾರ ಪರ+ಆತ್ಮ= ಪರಮಾತ್ಮನಾಗಿ ಹೇಳುತ್ತಿದ್ದಾರೆ. ಈ ವಿಧವಾಗಿ ಮೂವರು ಪುರುಷರು ಶರೀರದಲ್ಲಿ ಇದ್ದಾರೆ. ಆದರೆ ಶಾಶ್ವತವಾಗಿ ಜೀವಾತ್ಮ, ಆತ್ಮ ಇಬ್ಬರೂ ಶರೀರದಲ್ಲಿಯೇ ಇರುವಾಗ, ಪರಮಾತ್ಮ ಮಾತ್ರ ಶರೀರದ ಒಳಗೂ, ಶರೀರದ ಹೊರಗೂ ಇದ್ದಾನೆ. ಶರೀರದ ಹೊರಗೆ ಅಣುವಣುವಿನಲ್ಲೂ ವ್ಯಾಪಿಸಿದ್ದಾನೆ, ಆತನು ಇಲ್ಲದ ಸ್ಥಳವಂತೂ ಇಲ್ಲ. ಪರಮಾತ್ಮ ಆ ವಿಧವಾಗಿ ವಿಶ್ವವೆಲ್ಲಾ ವ್ಯಾಪಿಸಿರುವಾಗ, ಆತ್ಮ ಶರೀರದೊಳಗೆ ಶರೀರವೆಲ್ಲಾ ವ್ಯಾಪಿಸಿ ಶರೀರದ ಹೊರಗಿನ ಅಂಚಿನ ವರೆಗು ತುಂಬಿಕೊಂಡಿದೆ. ಆತ್ಮ ಶರೀರವೆಲ್ಲಾ ಇರುವಾಗ, ಜೀವಾತ್ಮ ಶರೀರದಲ್ಲಿ

ತಲೆಯಲ್ಲಿ ತಲೆ ಮಧ್ಯದಲ್ಲಿರುವ ನಾಲ್ಕು ಚಕ್ರಗಳಲ್ಲಿ ಕೆಳಗಿನ ಚಕ್ರದಲ್ಲಿ ಇದ್ದಾನೆ. ಕೆಳಗಿನ ಚಕ್ರ ಮೂರು ಭಾಗಗಳಾಗಿದೆ. ತಾಮಸ, ರಾಜಸ, ಸಾತ್ವಿಕ ಎನ್ನುವ ಮೂರು ಭಾಗಗಳಲ್ಲಿ ಯಾವುದೋ ಒಂದು ಭಾಗದಲ್ಲಿ ಒಂದು ಕಡೆ ರವೆಯಷ್ಟು ಜೀವಾತ್ಮ ಇದ್ದಾನೆ. ಈ ವಿವರ ಭಗವದ್ಗೀತೆಯಲ್ಲಿ ಹೇಳಿರುವಾಗ,

ದ್ವಿತೀಯ ದೈವ ಗ್ರಂಥವಾದ ಇಂಜೀಲು (ಬೈಬಲ್) ನಲ್ಲಿ ಈ ಮೂರು ಆತ್ಮಗಳ ವಿಷಯವನ್ನು ಹೇಳಿದ್ದಾರೆ. ಬೈಬಲ್‌ನಲ್ಲಿ ಮತ್ತಾಯ ಸುವಾರ್ತೆ 28ನೇ ಅಧ್ಯಾಯದಲ್ಲಿ 19ನೇ ವಾಕ್ಯದಲ್ಲಿ ಹೀಗೆ ಇದೆ ನೋಡಿರಿ.

**ಮತ್ತಾಯ 28-19. "ನೀವು ಹೋಗಿ ಸಮಸ್ತ ಜನರನ್ನು ಶಿಷ್ಯರನ್ನಾಗಿ ಮಾಡಿರಿ. ತಂದೆಯೊಂದರ, ಕುಮಾರನೊಂದರ, ಪರಿಶುದ್ಧಾತ್ಮ ಯೊಂದರ ನಾಮದೊಳಗೆ ಅವರಿಗೆ ಬಾಪ್ತಿಸ್ಮ ಕೊಡುತ್ತಾ ಹೋಗು ಎಂದು ಇದೆ."**

ನಂತರ ಅಂತಿಮ ದೈವಗ್ರಂಥವಾದ ಖುರ್‌ಆನ್‌ನಲ್ಲಿ ಸೂರಾ 50ರಲ್ಲಿ ಆಯತ್ 21ರಲ್ಲಿ ಇದೇ ಮೂರು ಆತ್ಮಗಳ ವಿಷಯ ಹೇಳಲ್ಪಟ್ಟಿದೆ. ಆದರೆ ಮುಸ್ಲೀಮ್‌ರು ಅಲ್ಲಿ ಹೇಳಿದ ಜ್ಞಾನವನ್ನು ತಮ್ಮ ಬುದ್ಧಿಯಿಂದ ಗ್ರಹಿಸಿಕೊಳ್ಳದೆ ಹೋಗಿದ್ದಾರೆ. ಖುರ್‌ಆನ್‌ನಲ್ಲಿ ಹೇಳಿದ ವಿಷಯವನ್ನು ನೋಡಿದರೆ 3ನೇ ಸೂರಾ 18ನೇ ಆಯತ್‌ನಲ್ಲಿಯೂ, 16ನೇ ಸೂರಾ 51ನೇ ಆಯತ್‌ನಲ್ಲಿಯೂ ಮೂರು ಆತ್ಮಗಳ ವಿಷಯ ಇದೆ. ಆದರೆ ಅದನ್ನು ಸ್ವಲ್ಪವಾದರೂ ಇಲ್ಲಿಯವರೆಗು ಗುರುತಿಸಿದವರು ಇಲ್ಲ ಎಂದು ಹೇಳಬಹುದು. ಈಗ ಖುರ್‌ಆನ್‌ನಲ್ಲಿ ಹೇಳಿದ ಆಯತ್‌ನನ್ನು ನೋಡೋಣ.

**50ನೇ ಸೂರಾ 21ನೇ ಆಯತ್‌ನಲ್ಲಿ :- "ಪ್ರತಿ ಆತ್ಮ (ಪ್ರಾಣಿ) ಒಬ್ಬ ನಡೆಸುವವನೊಂದಿಗೆ, ಮತ್ತೊಬ್ಬ ಸಾಕ್ಷಿ ಕೊಡುವವನೊಂದಿಗೆ ಸಹ ಬರುತ್ತದೆ".**

ಮತ್ತೊಂದು ಗ್ರಂಥ ಅಂತಿಮ ದೈವಗ್ರಂಥ ಖುರ್‌ಆನ್‌ನಲ್ಲಿ ಹೀಗೆ ಬರೆದಿದ್ದಾರೆ ನೋಡಿರಿ.

**50ನೇ ಸೂರಾ 21ನೇ ಆಯತ್‌ನಲ್ಲಿ :– "ಪ್ರತಿ ವ್ಯಕ್ತಿ ತನ್ನ ಹಿಂದೆ ತನ್ನನ್ನು ಕರೆದುಕೊಂಡು ಬರುವವನೊಬ್ಬನು, ಸಾಕ್ಷಿ ಕೊಡುವವನೊಬ್ಬನು ಇರುವ ಸ್ಥಿತಿಯಲ್ಲಿ ಹಾಜರಾಗುತ್ತಾನೆ".**

ಈ ವಿಧವಾಗಿ ಜೀವಾತ್ಮ, ಆತ್ಮ, ಪರಮಾತ್ಮಗಳನ್ನು ಕುರಿತು ಮೂರು ಗ್ರಂಥಗಳಲ್ಲಿ ಬರೆದಿದ್ದಾರೆ.

**ಪ್ರಶ್ನೆ :– ಭಗವದ್ಗೀತೆ ಹುಟ್ಟಿ 5160 ವರ್ಷಗಳು, ಬೈಬಲ್ ಹುಟ್ಟಿ ಸುಮಾರು 2010 ವರ್ಷಗಳು, ಕೊನೆಯ ಗ್ರಂಥ ಖುರ್‌ಆನ್ ಹುಟ್ಟಿ ಸುಮಾರು 1400 ವರ್ಷಗಳು ಆಗಿದೆ ಅಲ್ಲವೇ! ಈ ಮೂರು ದೈವಗ್ರಂಥಗಳಲ್ಲಿ ಜೀವಾತ್ಮ, ಆತ್ಮ, ಪರಮಾತ್ಮ ಎಂಬ ಮೂರು ಆತ್ಮಗಳನ್ನು ಹೇಳಿದಾಗ ಭಗವದ್ಗೀತೆ ಯನ್ನು ಓದಿದ ಹಿಂದೂಗಳಾಗಲಿ, ಬೈಬಲ್‌ನನ್ನು ಓದಿದ ಕ್ರೈಸ್ಥರಾಗಲಿ, ಖುರ್‌ಆನ್ ಗ್ರಂಥವನ್ನು ಓದಿದ ಮುಸ್ಲೀಮ್‌ರಾ ಗಲಿ ಒಬ್ಬರು ಅಲ್ಲದೇ ಹೋದರೆ ಒಬ್ಬರು ಈ ಮೂರು ಆತ್ಮಗಳ ವಿಷಯವನ್ನು ಗ್ರಂಥಗಳಲ್ಲಿ ಏಕೆ ಗ್ರಹಿಸಲಾರದೆ ಹೋಗಿದ್ದಾರೆ?. ಈಗ ನೀವು ಹೇಳುವವರೆಗು ಈ ವಿಷಯ ಹೊರಗೆ ತಿಳಿಯದೆ ಹೋಗಿರುವುದಕ್ಕೆ ಕಾರಣವೇನು? ಐದು ಸಾವಿರ ವರ್ಷಗಳಿಂದ ತಿಳಿಯದ ಮೂರು ಆತ್ಮಗಳ ವಿಷಯ ಪ್ರತ್ಯೇಕಿಸಿ ನಿಮಗೆ ಏಕೆ ತಿಳಿದಿದೆ?**

**ಉತ್ತರ :–** ಐದು ಸಾವಿರ ವರ್ಷಗಳಿಂದ ಎಲ್ಲಿಯೂ ಬಚ್ಚಿಡದ ಹಾಗೆ ಮೂರು ದೈವಗ್ರಂಥಗಳಲ್ಲಿಯೂ ಮೂರು ಆತ್ಮಗಳನ್ನು ಕುರಿತು ಹೇಳಿದ್ದಾರೆ. ಹಾಗಿದ್ದರೂ ಇತ್ತ ಹಿಂದೂಗಳಾಗಲೀ, ಅತ್ತ ಕ್ರೈಸ್ಥರಾಗಲೀ, ಉಳಿದ ಮುಸ್ಲೀಮ್‌ರಾಗಲೀ ಈ ವಿಷಯವನ್ನು ಗ್ರಹಿಸಲಾರದೆ ಹೋಗಿದ್ದಾರೆ. ಒಂದು ವಿಷಯವನ್ನು ಕೇಳಿದರೂ, ಅಥವಾ ಓದಿದರೂ ಅದು ಕೆಲವರಿಗೆ ಕಡಿಮೆ, ಕೆಲವರಿಗೆ ಹೆಚ್ಚಿನ ದರದಲ್ಲಿ ಅರ್ಥವಾಗುವುದು ನಡೆಯುತ್ತಿದೆ. ಒಬ್ಬೊಬ್ಬರಿಗೆ ಒಂದೊಂದು ದರದಲ್ಲಿ ಅರ್ಥವಾಗುತ್ತಿರುತ್ತದೆ. ಆದರೆ ಮೂರು ಆತ್ಮಗಳ ವಿಷಯ ಮೂರುಮತದವರಲ್ಲಿ ಓದಿದವರಿಗೆ ಯಾರಿಗೂ ಕನಿಷ್ಟ ಶೇ. ಒಂದರಷ್ಟು ಕೂಡಾ ಅರ್ಥವಾಗಲಿಲ್ಲವೆಂದು ಹೇಳಬಹುದು. ಆದ್ದರಿಂದ ಇಲ್ಲಿಯವರೆಗು ಯಾವ ಮತದಲ್ಲಾಗಲೀ ಮೂರು ಆತ್ಮಗಳ ವಿಷಯವೇ ಪ್ರಸ್ತಾವನೆಗೆ ಬರಲಿಲ್ಲ. ಹಾಗೆ ಅರ್ಥವಾಗದಿರುವುದೇ ಅಲ್ಲದೇ ಅದಕ್ಕೆ ವಿರುದ್ಧವಾಗಿ ಅರ್ಥವಾದ ಸಂಧರ್ಭಗಳು ಕೂಡಾ ಇವೆ. ಏಕೆ ಆ ವಿಧವಾಗಿ ನಡೆದಿದೆಯೋ ತಿಳಿಯುತ್ತಿಲ್ಲ. ಇಷ್ಟು ಜನರಿಗೆ ಅರ್ಥವಾಗದ ವಿಷಯ ನನಗೆ ಪ್ರತ್ಯೇಕಿಸಿ ಅರ್ಥವಾಗುವುದು ನನಗೇ ವಿಚಿತ್ರವಾಗಿ ತೋಚುತ್ತಿದೆ. ಆಧ್ಯಾತ್ಮಿಕ ರಂಗದಲ್ಲಿ ಅದ್ವೈತವನ್ನು ಬೋಧಿಸಿದ ವರಿದ್ದಾರೆ. ಹಾಗೇ ದ್ವೈತವನ್ನು, ವಿಶಿಷ್ಟಾದ್ವೈತವನ್ನು ಬೋಧಿಸಿ ದವರಿದ್ದಾರೆ. ಅವರು ಆಯಾ ಸಿದ್ಧಾಂತಕರ್ತರಾಗಿ ಇದ್ದಾರೆ. ಮೊದಲ ಸಿದ್ಧಾಂತಕರ್ತನಾದ ಆದಿ ಶಂಕರಾಚಾರ್ಯರವರು ಹಿಂದೂಗಳೊಳಗಿನವನೇ. ಹಾಗೇ ದ್ವೈತ ಸಿದ್ಧಾಂತಕರ್ತ ಮಧ್ವಾಚಾರ್ಯರವರು ಕೂಡಾ ಹಿಂದೂಗಳೊಳಗಿನವನೆ. ವಿಶಿಷ್ಟಾದ್ವೈತ ಸಿದ್ಧಾಂತಕರ್ತ ಕೂಡಾ ಹಿಂದೂವೇ ಆಗಿರುವುದು ವಿಶೇಷ. ಈ ಮೂವರಿಗೂ ಹಿಂದೂಗಳಿಗೆ ಸಂಬಂಧಿಸಿದ ಭಗವದ್ಗೀತೆಯಲ್ಲಿರುವ ಕ್ಷರ, ಅಕ್ಷರ, ಪುರುಷೋತ್ತಮರ ವಿಷಯ ಏಕೆ ಅರ್ಥವಾಗಲಿಲ್ಲವೊ?

ಗೀತೆ ನಂತರ ಮೂರು ಸಾವಿರ ವರ್ಷಗಳಿಗೆ ಬಂದಿರುವ ಬೈಬಲ್‌ನಲ್ಲಿ ಕೆಲವರು ತ್ರಿತ್ವವೆಂದು ಗುರುತಿಸಿ ಹೇಳಿದ್ದಾರೆ ಆದರೆ, ಅದು ಕೂಡಾ ಪೂರ್ತಿ ಅರ್ಥವಾಗದ ವಿಷಯವಾಗಿ ಹೋಗಿ ಪೂರ್ತಿ ಪ್ರಚಾರವಾಗಲಿಲ್ಲ. ಇನ್ನು

ಮುಸ್ಲೀಮ್‌ರು ತಮ್ಮ ಗ್ರಂಥವನ್ನು ಓದಿದ್ದರೂ, ದೇವರು ಮೂರು ಆತ್ಮಗಳಾಗಿ ವಿಭಜಿಸಲ್ಪಟ್ಟಿದ್ದಾನೆಂಬ ವಿಷಯ ತಿಳಿಯಲಾರದೆ ಹೋಗಿದ್ದಾರೆ. ಅಷ್ಟೇಅಲ್ಲದೆ ದೇವರು ಒಬ್ಬನೇ ಎಂಬ ನಿನಾದವನ್ನು ಅವರು ಮೇಲಕ್ಕೆ ತಂದಿದ್ದಾರೆ. ಕ್ರೈಸ್ಥರು ತ್ರಿತ್ವವೆಂದು ಹೇಳಿದರೂ ಅವರಲ್ಲಿ ಯಾರು ದೇವರು, ಯಾರು ಜೀವಿ ಎಂದು ತಿಳಿಯಲಾರದೆ ಹೋಗಿದ್ದಾರೆ. ಹಿಂದೂಗಳಾದರೆ ಕೆಲವರು ಮಾತ್ರ ಜೀವಿಯು, ದೇವರು ಎಂಬ ಎರಡು ವಿಷಯಗಳನ್ನು ಹೇಳುತ್ತಿದ್ದಾರೆ. ಮೂರನೆಯವನನ್ನು ಪೂರ್ತಿ ಮರೆತು ಹೋಗಿದ್ದಾರೆ. ಮಧ್ಯದಲ್ಲಿರುವ ಆತ್ಮ ವಿಷಯ ಹಿಂದೂಗಳು ಗುರುತಿಸಲಾರದೆ ಹೋಗಿದ್ದಾರೆ. ಹಿಂದೂಗಳು ಪೂರ್ತಿ ಆಧ್ಯಾತ್ಮಿಕವನ್ನು ಬಿಟ್ಟು ದೇವತೆಗಳ ಪೂಜೆಗಳಲ್ಲಿ ಮುಳುಗಿ ಹೋಗಿದ್ದಾರೆ. ಹೀಗೆ ಮೂರು ಮತದವರು ಅವರ ಗ್ರಂಥಗಳಲ್ಲಿನ ತ್ರೈತ ಸಿದ್ಧಾಂತವಾಗಿರುವ ಮೂರು ಆತ್ಮಗಳನ್ನು ತಿಳಿಯಲಾರದೆ ಹೋಗಿದ್ದಾರೆ.

ದೇವರು ಅಂದುಕೊಂಡರೇ ಏನಾದರೂ ನಡೆಯುತ್ತದೆ ಎನ್ನುವಂತೆ ನಾನು ಪಂಡಿತನು ಅಲ್ಲದಿದ್ದರೂ, ಸಾಮಾನ್ಯ ಮನುಷ್ಯನಾಗಿದ್ದರೂ, ನಮ್ಮ ವಂಶದಲ್ಲಿ ಯಾರೂ ಆಧ್ಯಾತ್ಮಿಕದೊಂದಿಗೆ ಸಂಬಂಧ ಇಲ್ಲದಿದ್ದರೂ, ನನ್ನನ್ನು ಮಾತ್ರ ಆಧ್ಯಾತ್ಮಿಕದೊಳಗೆ ದೇವರೇ ತಂದು ಯಾರಿಗೂ ಅರ್ಥವಾಗದ ಜ್ಞಾನವನ್ನು ನನಗೆ ಅರ್ಥವಾಗುವ ಹಾಗೆ ಮಾಡಿ, ಕೊನೆಗೆ ತ್ರೈತವಾಗಿರುವ ಮೂರು ಆತ್ಮಗಳನ್ನು ಮೂರು ಗ್ರಂಥಗಳಲ್ಲಿ ಇರುವಂತೆ ಗುರುತು ಮಾಡಿ, ಹಿಂದೂಮತದಲ್ಲಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಸಿದ್ಧಾಂತಕರ್ತರ ಪಕ್ಕದಲ್ಲಿ ನನ್ನನ್ನು ತ್ರೈತ ಸಿದ್ಧಾಂತಕರ್ತನನ್ನಾಗಿ ನಿಲ್ಲಿಸಿರುವುದು ನನಗೆ ದೊಡ್ಡ ವಿಚಿತ್ರವಾಗಿ ತೋಚುತ್ತಿದೆ. ದೇವರು ಅಂದುಕೊಂಡರೇ ಏನಾದರೂ ಮಾಡಬಲ್ಲನು ಎಂಬ ಮಾತು ನನ್ನ ಬಗ್ಗೆ ನೆರವೇರಿದೆಯೆಂದು ನನಗೆ ತಿಳಿದಿದೆ. ಈ ದಿನ ನಾನು ಯಾವ ಜ್ಞಾನ ವನ್ನಾದರೂ ತ್ರೈತ ಸಿದ್ಧಾಂತದೊಂದಿಗೆ ಜೋಡಿಸಿ ಹೇಳುತ್ತಿದ್ದೇನೆ. ಆದ್ದರಿಂದ ಮೂರು ದೈವಗ್ರಂಥಗಳಲ್ಲಿನ ಜ್ಞಾನ ನನಗೆ ಸುಲಭವಾಗಿ ಅರ್ಥವಾಗಿದೆ. ಮೂರು ಮತಗಳಲ್ಲಿನ ಜ್ಞಾನ ಮೊದಲಿನಿಂದ ತ್ರೈತವಾದ ಮೂರು ಆತ್ಮಗಳೊಂದಿಗೆ

ಕೂಡಿಕೊಂಡು ಇರುವುದರಿಂದ ತ್ರೈತ ತಿಳಿಯದವರಿಗೆ ಅರ್ಥವಾಗಲಿಲ್ಲ. ತ್ರೈತ ಸಿದ್ಧಾಂತ ಕರ್ತನಾದ ನನಗೆ ಮೂರು ಗ್ರಂಥಗಳ ಜ್ಞಾನ ಸುಲಭವಾಗಿ ಅರ್ಥವಾಗಿದೆ.

**ಪ್ರಶ್ನೆ :– ನೀವು ಸೃಷ್ಟಿ ರಹಸ್ಯವನ್ನು ಹೇಳುತ್ತಾ ಮೂರು ಆತ್ಮಗಳಿಂದಲೇ ಪ್ರಪಂಚ ತಯಾರಾಗಿದೆಯೆಂದು ಹೇಳುತ್ತಾ, ಸ್ವಲ್ಪ ಮಟ್ಟಿಗೆ ಆತ್ಮ, ಜೀವಾತ್ಮ, ಪರಮಾತ್ಮಗಳ ವಿಷಯವನ್ನು ವಿವರಿಸಿದ್ದೀರಿ. ಕೆಲವರು ನಿಮ್ಮ ಮಾತನ್ನು ಲೆಕ್ಕಮಾಡದೆ ತ್ರಿಮೂರ್ತಿಗಳಾದ ವಿಷ್ಣು, ಈಶ್ವರ, ಬ್ರಹ್ಮ ರಿಂದ ಪ್ರಪಂಚ ಏರ್ಪಟ್ಟಿದೆಯೆಂದು, ಇವರು ಮೂವರು ತನಗೆ ತಾನಾಗಿ ಹುಟ್ಟಿದ ಸ್ವಯಂಭುಗಳೆಂದು ಹೇಳುತ್ತಿದ್ದಾರೆ. ಮೂವರು ಮೂರ್ತಿಗಳಿಂದ ಪ್ರಪಂಚ ಸೃಷ್ಟಿಸಲ್ಪಟ್ಟರೆ, ನೀವು ಮಾತ್ರ ಮೂವರು ಮೂರ್ತಿ ಗಳಾದ ವಿಷ್ಣು, ಈಶ್ವರ, ಬ್ರಹ್ಮರೊಂದಿಗೆ ಸಂಬಂಧ ವಿಲ್ಲದೆ ಮೂರು ಆತ್ಮಗಳ ಸೃಷ್ಟಿ ಪ್ರಪಂಚ ಎನ್ನುವುದು ಅಸತ್ಯ ಎನ್ನುತ್ತಿದ್ದೀರ. ಹುಟ್ಟಿಸುವವನು ಬ್ರಹ್ಮ, ಪೋಷಿಸುವವನು ವಿಷ್ಣು, ಮರಣ ಉಂಟುಮಾಡುವವನು ಹರನು ಇಲ್ಲವೇ ಶಿವನು ಎಂದು ಹೇಳುತ್ತಾರೆಂದು, ಈ ಮೂವರಿಂದ ಹುಟ್ಟುವುದು, ಜೀವಿಸುವುದು, ಮರಣಿಸುವುದು ನಡೆಯುತ್ತಿದೆಯೆಂದು ಹೇಳುತ್ತಿದ್ದಾರೆ. ಆದರೆ ಈ ಮೂವರನ್ನು ಯಾರೂ ಹುಟ್ಟಿಸಲಿಲ್ಲವೆಂದು ಅವರಷ್ಟಕ್ಕೆ ಅವರು ಹುಟ್ಟಿದ ಸ್ವಯಂಭುಗ ಳೆಂದು ಹೇಳುತ್ತಿದ್ದಾರೆ. ಇದನ್ನು ಕುರಿತು ನೀವು ಏನು ಹೇಳುತ್ತೀರಾ?**

**ಉತ್ತರ :–** ಇರುವ ಸತ್ಯ ಒಂದಾದರೇ ಮತ್ತೊಂದು ವಿಧವಾಗಿ ಅಂದುಕೊಳ್ಳುವುದು ಪೂರ್ವದಿಂದ ಇರುವ ವಿಷಯವೇ. ಆಧ್ಯಾತ್ಮಿಕವೆಂಬ ಹೆಸರಿನಿಂದಲೇ ಕೆಲವರು ಜ್ಞಾನವನ್ನು ಬೋಧಿಸುತ್ತಿದ್ದರೂ ಅವರು ದಾರಿತಪ್ಪಿ ಇತರ ದಾರಿಯಲ್ಲಿ ಬೋಧಿಸುತ್ತಿರುತ್ತಾರೆ. ದೈವಮಾರ್ಗಗಳು ಎರಡು ವಿಧಗಳಾಗಿವೆ. ಒಂದು ಸ್ವಚ್ಛವಾದ ಸತ್ಯವಾದ ಮಾರ್ಗವಾಗಿದ್ದು, ಎರಡನೆಯದು ಸ್ವಚ್ಛತೆ ಇಲ್ಲದಿರುವುದು ಅಸತ್ಯವಾದುದಾಗಿರುತ್ತದೆ. ಸ್ವಚ್ಛವಾದ ಸತ್ಯವಾದ ಮಾರ್ಗ ಶಾಸ್ತ್ರಬದ್ಧವಾಗಿರುತ್ತದೆ. ಆತ್ಮಗಳೊಂದಿಗೆ ಕೂಡಿರುತ್ತದೆ. ಎರಡನೇ ಮಾರ್ಗ ಶಾಸ್ತ್ರಬದ್ಧ ಅಲ್ಲದಿರುವುದಾಗಿರುತ್ತಾ ದೇವತೆಗಳ ಭಕ್ತಿಯಿಂದ ಕೂಡಿಕೊಂಡಿರುತ್ತದೆ. ಮೊದಲ ಸತ್ಯವಾದ ಮಾರ್ಗ ಬ್ರಹ್ಮವಿದ್ಯೆಯೊಂದಿಗೆ ಕೂಡಿರುವುದಾಗಿ, ಮೂರು ಆತ್ಮಗಳೊಂದಿಗೆ ಬೆರೆತಿರುತ್ತದೆ. ಎರಡನೇ ಮಾರ್ಗ ವೇದಗಳ, ಪುರಾಣಗ ಳೊಂದಿಗೆ ಕೂಡಿರುವುದಾಗಿ ದೇವತೆಗಳೊಂದಿಗೆ ಬೆರೆತಿರುತ್ತದೆ. ಪ್ರಪಂಚದಲ್ಲಿ ಎರಡನೆ ಮಾರ್ಗವಾದ ದೇವತೆಗಳ ಮಾರ್ಗದಲ್ಲಿ ಹೋಗುವವರು ಶೇ.99% ಇರುವಾಗ, ಬ್ರಹ್ಮವಿದ್ಯಾ ಶಾಸ್ತ್ರವನ್ನು ಅನುಸರಿಸುತ್ತಾ ಆತ್ಮಗಳ ಮಾರ್ಗದಲ್ಲಿ ಹೋಗುವವರು ಕೇವಲ 1% ಕೂಡಾ ಅಪರೂಪವಾಗಿ ಇರುತ್ತಾರೆಂದು ಹೇಳಬಹುದು.

ಎರಡನೇ ಮಾರ್ಗದಲ್ಲಿ ಹೋಗುವವರು ತ್ರಿಮೂರ್ತಿಗಳಾದ ವಿಷ್ಣು, ಈಶ್ವರ, ಬ್ರಹ್ಮರೇ ದೊಡ್ಡ ದೇವತೆಗಳೆಂದು, ಅವರ ಮೂಲಕವೇ ಸೃಷ್ಠಿ ಎಲ್ಲವೂ ಇದೆಯೆಂದು ಹೇಳುತ್ತಿರುತ್ತಾರೆ. ಇದೆಲ್ಲಾ ಪುರಾಣಗಳಲ್ಲಿ, ವೇದಗಳಲ್ಲಿ ಇರುವ ವಿಷಯವೇ. ಮೊದಲು ವಿಷ್ಣು ನಂತರ ಈಶ್ವರನು, ಆ ನಂತರ ಬ್ರಹ್ಮ ಅವರಷ್ಟಕ್ಕೆ ಅವರಾಗಿಯೇ ಹುಟ್ಟಿದ್ದಾರೆಂದು ಆದ್ದರಿಂದ ಅವರನ್ನು ಸ್ವಯಂಭುಗಳೆಂದು ಕರೆಯುತ್ತಿದ್ದೇವೆಂದು ಹೇಳುತ್ತಿದ್ದಾರೆ. ಸರಿ ಈಗ ಅವರ ಮಾತಿನ ಪ್ರಕಾರವೇ ಹೋದರೆ ಅವರೇ ದೊಡ್ಡ ದೇವರುಗಳೆಂದು ಅವರೇ ಪ್ರಪಂಚವನ್ನು ಸೃಷ್ಠಿಸಿ, ಪಾಲಿಸುತ್ತಿದ್ದಾರೆಂದು ಬಹಳ ಜನ ಹೇಳುತ್ತಿದ್ದಾರೆ. ಆ ವಿಧವಾಗಿಯೇ ಒಪ್ಪಿಕೊಂಡರೂ ಅವರೇ ದೊಡ್ಡ ದೇವರುಗಳು, ಅವರ ನಂತರ ದೊಡ್ಡವರು ಇಲ್ಲ ಅವರು ಯಾರಿಂದಲೂ ಸೃಷ್ಠಿಸಲ್ಪಡಲಿಲ್ಲ ಎಂದರೇ ನಿಜವೆಂದು ನಾವು

ಒಪ್ಪಿಕೊಂಡರೂ ಈ ಮಾತನ್ನು ವಿಷ್ಣು, ಈಶ್ವರ, ಬ್ರಹ್ಮರೇ ಒಪ್ಪಿಕೊಳ್ಳುವಹಾಗೆ ಇಲ್ಲ. ಏಕೆಂದರೇ! ಅವರು ನಿತ್ಯವು ದೇವರನ್ನು ಕುರಿತು ಚಿಂತೆ ಮಾಡುತ್ತಾ ಮೂವರು ಮೂರು ವಿಧಗಳ ಜಪಗಳು ಮಾಡುತ್ತಿದ್ದಾರೆ. ಶಿವನು ಜಪಮಾಲೆ ಯನ್ನು ಕೈಯಲ್ಲಿ ಹಿಡಿದುಕೊಂಡು ದೇವರನ್ನು 108 ಸಲ ಸ್ಮರಿಸುತ್ತಿದ್ದಾನೆ. ಹಾಗೇ ಬ್ರಹ್ಮ ಕೂಡಾ ಕಮಲದಲಿ ಕುಳಿತುಕೊಂಡು ಜಪಮಾಲೆಯಿಂದ ಆರಾಧಿಸುತ್ತಿದ್ದಾನೆ. ತ್ರಿಮೂರ್ತಿಗಳಲ್ಲಿ ದೊಡ್ಡವನಾದ ವಿಷ್ಣು ಕೂಡಾ ಒಂದು ಪಕ್ಕಕ್ಕೆ ಮಲಗಿಕೊಂಡು ಕಣ್ಣು ಮುಚ್ಚಿಕೊಂಡು ದೇವರನ್ನೇ ಧ್ಯಾನಿಸುತ್ತಿದ್ದಾನೆ.

ತ್ರಿಮೂರ್ತಿಗಳೇ ದೇವರುಗಳಾದಾಗ ಅವರು ಯಾವ ದೇವರನ್ನು ಧ್ಯಾನಿಸುತ್ತಿದ್ದಾರೆ.? ಎಂದು ಅವರನ್ನೇ ಕೇಳಿದರೆ ನಮ್ಮನ್ನು ಸೃಷ್ಠಿಸಿದ ದೇವರನ್ನು ನಾವು ಧ್ಯಾನಿಸುತ್ತಿದ್ದೇವೆ. ನಮಗೆ ಈ ಜನ್ಮದಿಂದ ತೊಲಗಿಸಿ ಮೋಕ್ಷವನ್ನು ಸೇರಿಸೆಂದು ಪ್ರಾರ್ಥಿಸುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಹಾಗಿರುವಾಗ ನಾವು ಸ್ವಯಂಭುಗಳೆಂದು ಅಂದುಕೊಳ್ಳುವುದು ತಪ್ಪು ಅಲ್ಲವೇ! ಶರೀರದೊಂದಿಗೆ ಯಾರಿದ್ದರೂ ಅವನು ತಾಯಿ ಗರ್ಭದಿಂದಲೇ ಹುಟ್ಟಬೇಕು. ಅವನ ಶರೀರದಲ್ಲಿ ಮೂರು ಆತ್ಮಗಳಿರಬೇಕು. ಶರೀರದೊಂದಿಗೆ ಇರುವ ಯಾರಾದರಾಗಲಿ ಅವನು ಜೀವಾತ್ಮನಾಗಿ ಕರ್ಮಗಳನ್ನು ಅನುಭವಿಸುತ್ತಿರುವಾಗ ಆತನನ್ನು ಆತ್ಮ ನಡೆಸುತ್ತಿರುತ್ತದೆ. ಹೀಗೆ ಆತ್ಮ, ಜೀವಾತ್ಮ ಕೆಲಸ ಮಾಡದ ಸಜೀವ ಶರೀರಗಳು ಭೂಮಿ ಮೇಲೆ ಎಲ್ಲಿಯೂ ಇರುವುದಿಲ್ಲ. ಶರೀರದಲ್ಲಿ ಕಾಣಿಸದ ಜೀವಾತ್ಮ ಇರುವಾಗ, ಕಾಣಿಸದ ಆತ್ಮ ಆ ಜೀವಿಯನ್ನು ಆದೇಶಿಸಿ ನಡೆಸುತ್ತಿದೆ. ಹಾಗೆ ನಡೆಯುವ ಜೀವಿಯು ಅವನ ಶರೀರದಲ್ಲಿ ಕರ್ಮಬದ್ಧನಾಗಿ ಇದ್ದಾನೆ. ಆದ್ದರಿಂದ ವೇಮನಯೋಗಿ **ಶರೀರದೊಂದಿಗೆ ಹುಟ್ಟಿದ ಬ್ರಹ್ಮ ಕರ್ಮ ಬರಹ ಹೇಗೆ ಬರೆಯುತ್ತಾನೆ**? ಎಂದು ಅಂದಿದ್ದಾನೆ. ಆತನಿಗು ಕೂಡಾ ಕರ್ಮ ಬರಹವನ್ನು ಜಾರಿ ಮಾಡುವ ಆತ್ಮ ಇದ್ದಾನೆ. ಮೂವರು ಮೂರ್ತಿಗಳಿಗೂ ಕೂಡಾ ಜನನ ಇದ್ದಂತೆ ಮರಣ ಕೂಡಾ ಇದೆ. ಆದ್ದರಿಂದ ಅವರು ದೇವರುಗಳು ಎನ್ನುವುದಕ್ಕೆ ಸಾಧ್ಯವಿಲ್ಲ. ಹಾಗೆಯೇ ಅವರು ಸ್ವಯಂಭುಗಳಾಗಿ ಹುಟ್ಟಿದವರಲ್ಲ. ಶರೀರದಲ್ಲಿ

ಒಬ್ಬನು ಹುಟ್ಟಿದ್ದಾನೆ ಎಂದರೇ ಅವನಿಗೆ ಕರ್ಮ ಇದ್ದರೇನೆ ಆತ್ಮಯಿಂದ ಹುಟ್ಟಿಸಲ್ಪಡುತ್ತಿ ದ್ದಾನೆ. ಆದ್ದರಿಂದ ಬ್ರಹ್ಮ ಇತರರನ್ನು ಹುಟ್ಟಿಸಲಿಲ್ಲ. ಹಾಗೆಯೇ ವಿಷ್ಣು ಇತರರನ್ನು ಪೋಷಿಸಲಿಲ್ಲ. ಶಿವನು ಯಾರನ್ನು ಸಾಯಿಸಲಿಲ್ಲ. ಇವು ಅವರ ಕೆಲಸಗಳಲ್ಲ ಮನುಷ್ಯರು ತಿಳಿಯದ ಅಜ್ಞಾನದಿಂದ, ವಿಷ್ಣು, ಈಶ್ವರ, ಬ್ರಹ್ಮನನ್ನು ದೊಡ್ಡ ದೇವರುಗಳಾಗಿ ಭಾವಿಸಿಕೊಳ್ಳುತ್ತಿದ್ದಾರೆ. ಎಲ್ಲರನ್ನೂ ಹುಟ್ಟಿಸುವವನು, ಪೋಷಿಸುವವನು, ಮರಣಿಸುವಂತೆ ಮಾಡುವವನು ಆತ್ಮವೇಯೆಂದು ತಿಳಿಯಬೇಕು.

## ಪ್ರಶ್ನೆ :– ಈ ಪ್ರಪಂಚವನ್ನು ಸೃಷ್ಟಿಸಿದವನು ಯಾರು?

**ಉತ್ತರ :–** ಮೊಟ್ಟಮೊದಲು ಈ ಪ್ರಪಂಚವನ್ನು ಸೃಷ್ಟಿಸಿದವನು ಪರಮಾತ್ಮ. ಪ್ರಕೃತಿ ಐದು ಭಾಗಗಳನ್ನು ಮತ್ತು ಆತ್ಮವನ್ನು ಸೃಷ್ಟಿಸಿದವನು ಒಬ್ಬನೇ ಒಬ್ಬ ಪರಮಾತ್ಮ ಎಂದು ಹೇಳಬಹುದು. ಯಾವಾಗಾದರೆ ಪ್ರಕೃತಿ ಹುಟ್ಟಿದೆಯೋ ಆಗಲೇ ಆತ್ಮ ಹುಟ್ಟಿದೆ. ಯಾವಾಗಾದರೆ ಆತ್ಮ ಹುಟ್ಟಿದೆಯೋ ಆಗಲೇ ಕಾಣಿಸುವ ಪ್ರಪಂಚ ಹುಟ್ಟಿದೆ. ಆಗ ಪ್ರಪಂಚವೆಲ್ಲಾ ಇದ್ದರೂ ಅದು ಜೀವಿಗಳು ಇಲ್ಲದಹಾಗೆ ಇರುತ್ತಿತ್ತು. ಆದ್ದರಿಂದ ಪರಮಾತ್ಮ ಜೀವರಾಶಿಗಳಿರುವ ಸೃಷ್ಟಿಯನ್ನು ಸೃಷ್ಟಿಸಲಿಲ್ಲ ವೆಂದು ತಿಳಿಯುತ್ತಿದೆ. ಪ್ರಕೃತಿಯನ್ನು ಆತ್ಮವನ್ನು ಸೃಷ್ಟಿಸಿದ ಪರಮಾತ್ಮ ಪ್ರಕೃತಿಯನ್ನು ಉಪಯೋಗಿಸಿಕೊಂಡು ಶರೀರಗಳನ್ನು ತಯಾರು ಮಾಡಿ, ಅದರಲ್ಲಿ ಜೀವಾತ್ಮಗಳನ್ನು ತುಂಬಿ ಸಜೀವವಾದ ಸೃಷ್ಟಿಯನ್ನು ತಯಾರು ಮಾಡೆಂದು ಆತ್ಮಗೆ ಆದೇಶಿಸಿದಾಗ, ಅಂದಿನಿಂದ ಆತ್ಮ ಶರೀರ ಇರುವ ಜೀವರಾಶಿಗಳನ್ನು ತಯಾರು ಮಾಡಿದೆ. ಹೀಗೆ ಮನುಷ್ಯರನ್ನು ಹುಟ್ಟಿಸಿದವನು ಆತ್ಮಯೆಂದು ತಿಳಿದುಹೋಗಿದೆ. ಆತ್ಮ ಶರೀರ ಸಹಿತವಾಗಿ ಜೀವರಾಶಿಗಳನ್ನು ಮನುಷ್ಯರನ್ನು ಹುಟ್ಟಿಸುತ್ತಾ, ಅಲ್ಲಿಗೆ ಸುಮ್ಮನಾಗದೆ ಅವುಗಳನ್ನು ನಿತ್ಯ ಪೋಷಿಸುತ್ತಾ ಕೊನೆಗೆ ಯಾವುದೋ ಒಂದು ದಿನ ಮರಣವನ್ನುಂಟುಮಾಡುತ್ತಿದೆ. ಈ ವಿಧವಾಗಿ ಮನುಷ್ಯನ ಜೀವನವನ್ನಾಗಲೀ, ಇತರ ಪ್ರಾಣಿ ಜೀವನವನ್ನಾಗಲೀ ಆತ್ಮವೇ ಕ್ಷಣಕ್ಷಣವು ನಡೆಸುತ್ತಿದೆ. ಶರೀರದಲ್ಲಿ ಜೀವಿಯು ಏನು ಮಾಡದವನಾಗಿರುವಾಗ,

ಆತ್ಮವೇ ಅವನನ್ನು ಕರ್ಮ ಪ್ರಕಾರ ನಡೆಸುತ್ತಿದೆ. ಜೀವಾತ್ಮ ಶರೀರದಲ್ಲಿ ಆತ್ಮದಿಂದ ಉಂಟಾದ ಸುಖಗಳನ್ನು ದುಃಖಗಳನ್ನು ಅನುಭವಿಸುತ್ತಿದ್ದಾನೆ. ಆತ್ಮ ಎಲ್ಲಾ ಮಾಡುತ್ತಿರುವಾಗ, ಜೀವಾತ್ಮ ಬಂದಿರುವ ಅನುಭವಗಳನ್ನು ಅನುಭವಿಸುತ್ತಿರು ವಾಗ, ಪರಮಾತ್ಮ ಎಲ್ಲವನ್ನು ಸಾಕ್ಷಿಯಾಗಿ ನೋಡುತ್ತಿದೆ. ಇದನ್ನು ಅನುಸರಿಸಿ ಪ್ರಪಂಚವನ್ನು ತಯಾರು ಮಾಡಿದವನು ಪರಮಾತ್ಮನಾಗಿದ್ದು, ಜೀವರಾಶಿಗಳನ್ನು ತಯಾರು ಮಾಡಿದವನು ಆತ್ಮಯೆಂದು ತಿಳಿಯುತ್ತಿದೆ. ಪ್ರಪಂಚವನ್ನು ಆತ್ಮವನ್ನು ಸೃಷ್ಟಿಸಿದವನು ಪರಮಾತ್ಮ. ಹಾಗೆ ಮೊದಲು ಜೀವರಹಿತ ಪ್ರಪಂಚ ತಯಾರಾಗಿ, ನಂತರ ಆತ್ಮದಿಂದ ಜೀವವಿರುವ ಶರೀರಗಳು ತಯಾರಾಗಿ, ಮನುಷ್ಯರು ಪ್ರಾಣಿಗಳು, ಪಕ್ಷಿಗಳು ಮೊದಲಾದವೆಲ್ಲವೂ ತಯಾರಾಗಿವೆ.

**ಪ್ರಶ್ನೆ :– ಇದೆಲ್ಲವನ್ನು ಗಮನಿಸಿದರೇ ಪರಮಾತ್ಮಗಿಂತಲೂ ಆತ್ಮವೇ ಹೆಚ್ಚಾಗಿ ಮಾಡಿದಂತಿದೆ. ಈಗ ಆತ್ಮ, ಪರಮಾತ್ಮಗಳಲ್ಲಿ ನಮಗೆ ಯಾರು ಮುಖ್ಯವಾದವರು ಎಂದು ಹೇಳಬೇಕು?**

**ಉತ್ತರ :–** ಆತ್ಮ ಪರಮಾತ್ಮಗಳಲ್ಲಿ ಮನುಷ್ಯರಿಗೆ ಆತ್ಮವೇ ಮುಖ್ಯ. ಆತ್ಮ ಮನುಷ್ಯರನ್ನು ಹುಟ್ಟಿಸಿ, ಪೋಷಿಸಿ, ಮರಣಿಸುವಂತೆ ಮಾಡುತ್ತಿದೆ. ನಂತರ ಜೀವಿಗೆ ಹೊಸ ಜನ್ಮವನ್ನು ಉಂಟುಮಾಡಿ, ಪುನಃ ಪ್ರಪಂಚದಲ್ಲಿ ಜೀವನ ಸಾಗಿಸುವಂತೆ ಮಾಡುತ್ತಿದೆ. ಆದ್ದರಿಂದ ಎಲ್ಲಾ ವಿಧಗಳಲ್ಲಿ ಪರಮಾತ್ಮಗಿಂತಲೂ ಆತ್ಮವೇ ನಮಗೆ ದೊಡ್ಡದು. ಆದ್ದರಿಂದ ಆತ್ಮವನ್ನೇ ಆರಾಧಿಸಬೇಕೆಂದು ಮೂರು ಗ್ರಂಥಗಳಲ್ಲಿ ಹೇಳಿದ್ದಾರೆ.

**ಪ್ರಶ್ನೆ :– ಆತ್ಮ, ಪರಮಾತ್ಮ ಇಬ್ಬರೂ ದೇವರುಗಳೇ, ಇಬ್ಬರೂ ಸೃಷ್ಠಿಕರ್ತರೇ ಆದರೇ ಆತ್ಮನನ್ನು ಸೃಷ್ಠಿಸಿದ ಪರಮಾತ್ಮ ಆತ್ಮಗೆ ತಂದೆಯಾಗುತ್ತಾನೆ. ನಮ್ಮನ್ನು ಸೃಷ್ಠಿಸಿದ ಆತ್ಮ ನಮಗೆ ತಂದೆಯಾಗುತ್ತಾನೆ. ಆ ಲೆಕ್ಕ ಪ್ರಕಾರ ಪರಮಾತ್ಮ ನಮಗೆ ತಾತ**

**ಆಗುತ್ತಾನೆ. ಆರಾಧನೆ ವಿಷಯವಾಗಿ ಕೇಳಿದರೆ ಅವರಲ್ಲಿ ಯಾರನ್ನು ಹೆಚ್ಚಾಗಿ ಪೂಜಿಸಬೇಕು? ಪರಮಾತ್ಮಗಿಂತ ಆತ್ಮವೇ ಎಲ್ಲಾ ವಿಧಗಳಲ್ಲಿ ನಮ್ಮನ್ನು ಪೋಷಿಸುತ್ತಿದೆ. ನಮಗೆ ಪರಮಾತ್ಮ ಏನು ಮಾಡಲಿಲ್ಲ. ಆದ್ದರಿಂದ ಆತನನ್ನು ಏಕೆ ಆರಾಧಿಸಬೇಕು? ಎಂದು ಒಂದು ಕಡೆ ಅನಿಸಿದರೂ ಮತ್ತೊಂದು ಕಡೆ ತಂದೆಯಾದ ಆತ್ಮಗೆ ತಂದೆಯಾದ್ದರಿಂದ ಮೊದಲು ಆತನನ್ನು ಪೂಜಿಸಿ ನಂತರ ಆತ್ಮನನ್ನು ಪೂಜಿಸಿದರೂ ಫರವಾಗಿಲ್ಲವಾ? ಎಂದು ಕೇಳಿದರೆ ಅದಕ್ಕೆ ಹೀಗೆ ಉತ್ತರ ಇದೆ.**

**ಉತ್ತರ :–** ಇದು ಕೇಳಬೇಕಾದ ಪ್ರಶ್ನೆಯೇ. ಈ ಅನುಮಾನ ಯಾರಿಗಾದರೂ ಬರಬಹುದು. ಆದರೇ ಅದರ ವಿಷಯ ಯಾರೋ ಒಬ್ಬರು ತೀರ್ಮಾನಿಸಿ ಹೇಳಬೇಕು. ಹಾಗೆ ಹೇಳದೆ ಹೋದರೆ ಯಾರ ಇಷ್ಟಬಂದಂತೆ ಅವರು ಮಾಡಬಲ್ಲರು. ಈ ವಿಷಯವನ್ನು ಕುರಿತು ಬ್ರಹ್ಮವಿದ್ಯಾ ಶಾಸ್ತ್ರವೇ ಹೇಳಬೇಕು. ಆದ್ದರಿಂದ ಬ್ರಹ್ಮ ವಿದ್ಯಾ ಶಾಸ್ತ್ರದಲ್ಲಿ ಒಂದು ಭಾಗವಾದ ಖುರ್ಆನ್‌ನಲ್ಲಿ 3ನೇ ಸೂರಾ 18ನೇ ಆಯತ್‌ನಲ್ಲಿ ಹೀಗೆ ಇದೆ.

**3–18 : ಅಲ್ಲಾಹ್ ಹೊರತು ಮತ್ತೊಂದು ಆರಾಧ್ಯ ದೈವ ಇಲ್ಲವೆಂದು ಸ್ವತಃವಾಗಿ ಅಲ್ಲಾಹ್, ಆತನ ದೂತರು, ಜ್ಞಾನ ಸಂಪನ್ನರು ಸಾಕ್ಷಿಕೊಡುತ್ತಿದ್ದಾರೆ. ಆತನು ಸಮಾನತೆ, ಸಮತೂಕದಿಂದ ಈ ವಿಶ್ವವನ್ನು ನಿಲ್ಲಿಸಿಟ್ಟಿದ್ದಾನೆ. ಸರ್ವಾಧಿಕ್ಯನು, ವಿವೇಚನಾಶೀಲಿಯಾದ ಆತನು ಹೊರತು ಮತ್ತೊಬ್ಬರು ಯಾರೂ ಆರಾಧನೆಗೆ ಅರ್ಹರು ಅಲ್ಲ.**

ಈ ವಾಕ್ಯ ಮುಸ್ಲೀಮ್‌ರಿಗೇ ಸರಿಯಾಗಿ ಅರ್ಥವಾಗಲಿಲ್ಲ. ಒಬ್ಬ ದೇವರನ್ನೇ ಆರಾಧಿಸಬೇಕು ಎನ್ನುವುದೇ ಅವರ ಉದ್ದೇಶವಾದರೂ ಅದಕ್ಕೆ ಅವರ ಹತ್ತಿರ ವಿವರಣೆ ಇಲ್ಲ. ಆದರೆ ಈ ಆಯತ್‌ನಲ್ಲಿ ಹೇಳಿದ ವಿಷಯವನ್ನು

ನೋಡಿದರೇ ಇಬ್ಬರು ಅಲ್ಲಾಹ್‍ಗಳಲ್ಲಿ ಯಾರು ಆರಾಧನೆಗೆ ಅರ್ಹರು ಎನ್ನುವುದಿದ್ದರೂ, ಇಬ್ಬರು ದೇವರುಗಳು ಎಂದರೇ ಅವರು ಕೇಳುತ್ತಿಲ್ಲ. ಆ ವಾಕ್ಯವನ್ನು ನಾವೇ ತಪ್ಪಾಗಿ ಹೇಳುತ್ತಿದ್ದೇವೆಂದು, ಖುರ್‍ಆನ್ ಗ್ರಂಥದಲ್ಲಿ ಇಬ್ಬರು ಅಲ್ಲಾಹ್‍ಗಳು ಎಂಬ ಮಾತು ಇಲ್ಲವೇಯಿಲ್ಲ ಎಂದು ಕೆಲವರು ಹೇಳುತ್ತಿದ್ದಾರೆ. ಆದರೇ ಒಬ್ಬ ಅಲ್ಲಾಹ್ ಇನ್ನೊಬ್ಬ ಅಲ್ಲಾಹ್‍ನನ್ನೇ ಆರಾಧನೆಗೆ ಅರ್ಹನೆಂದು ಹೇಳುತ್ತಿದ್ದಾನೆ. ಯಾರು ಯಾರನ್ನು ಅರ್ಹನೆಂದು ಹೇಳುತ್ತಿದ್ದಾನೆಂದರೇ **'ಅಲ್ಲಾಹ್, ಆತನ ದೂತರು'** ಎಂದು ವಾಕ್ಯದಲ್ಲಿ ಹೇಳಿದ್ದಾರೆ. ಆದ್ದರಿಂದ ಸುಲಭವಾಗಿ ಅರ್ಥವಾಗಿ ಹೋಗುತ್ತದೆ. ದೇವದೂತರು ಶರೀರದಲ್ಲಿನ ಅಲ್ಲಾಹ್‍ಗೆ (ದೇವರಿಗೆ) ಇಲ್ಲ. ದೇವದೂತರು ಮೊದಲ ದೇವರಾದವನಿಗೆ, ಪ್ರಪಂಚವೆಲ್ಲಾ ವ್ಯಾಪಿಸಿರುವವನಿಗೆ ಮಾತ್ರವೇ ಇದ್ದಾರೆ. ಆದ್ದರಿಂದ ಮೊದಲ ದೇವರಾದ ಪರಮಾತ್ಮ ತಾನು ಸೃಷ್ಠಿಸಿದ ಅಲ್ಲಾಹ್‍ನನ್ನು (ಆತ್ಮನನ್ನು) ಆರಾಧನೆಗೆ ಅರ್ಹನು ಎಂದು ಹೇಳುತ್ತಿದ್ದಾನೆ.

ಶರೀರದಲ್ಲಿ 25 ಭಾಗಗಳು ಇರುವಾಗ ಅವುಗಳಿಗೆಲ್ಲ ಅಧಿಪತಿ (ಆತ್ಮ) ಆಗಿರುವುದರಿಂದ **'ಸರ್ವಾಧಿಕ್ಯನು'** ಎಂದು ಆತನಿಗೆ ಹೆಸರು ಬಂದಿದೆ. ಅಷ್ಟೇ ಅಲ್ಲದೆ ಶರೀರದಲ್ಲಿ ಎಲ್ಲಾ ಭಾಗಗಳಲ್ಲಿ ಸಮಾನವಾಗಿ ವ್ಯಾಪಿಸಿ, ಶರೀರವೆಲ್ಲಾ ಸಮತೂಕ ಹೊಂದಿದವನು ಶರೀರದಲ್ಲಿನ ಆತ್ಮವೇ ಆಗಿರುವುದರಿಂದ ಆತನೇ ಎಲ್ಲಾ ವಿಧಗಳ ಆರಾಧನೆಗೆ ಅರ್ಹನು ಎಂದು ಹೇಳಿದ್ದಾನೆ. ಈ ಆಯತ್‍ನಲ್ಲಿ ಇಬ್ಬರು ಅಲ್ಲಾಹ್‍ಗಳು ಇದ್ದಂತೆ ಮುಸ್ಲೀಮ್ ಲೋಕ ಗ್ರಹಿಸಲಾರದೆ ಹೋಗಿದೆ. ಈ ವಾಕ್ಯದಲ್ಲಿ ಕೂಡಾ ನಿಮಗೆ ಆರಾಧ್ಯ ದೈವ ಒಬ್ಬನೇಯೆಂದು ಹೇಳಿದ್ದಾರೆ ಆದರೆ, ಬೇರೆ ಏನು ಹೇಳಲಿಲ್ಲ ಅಲ್ಲವೇ! ಈ ವಾಕ್ಯದ ಪ್ರಕಾರ ಪ್ರಜೆಗಳಿಗೆ ಒಬ್ಬನೇ ದೇವರು, ಆ ಒಬ್ಬ ದೇವರನ್ನೇ ಆರಾಧಿಸಬೇಕೆಂದು ಹೇಳಲಾಗಿದೆ. ಈ ವಾಕ್ಯ ಎಷ್ಟೋ ಜ್ಞಾನದಿಂದ ಕೂಡಿಕೊಂಡಿರುವುದಾದರೂ, ಪ್ರಜೆಗಳು ಇದನ್ನು ಅರ್ಥ ಮಾಡಿಕೊಳ್ಳದಿರುವುದು ಪ್ರಜೆಗಳಿಗೆ ಇದು ದೊಡ್ಡ ನಷ್ಟವೇ. ದೇವರು ಹೇಳಿರುವುದನ್ನು ನಂಬದೇ ನಮ್ಮ ಮತ ಹಿರಿಯರು ಹೇಳಿರುವುದೇ ನಂಬುತ್ತೇವೆನ್ನುವುದು ದೊಡ್ಡ ಅಜ್ಞಾನವಾಗುತ್ತದೆ.

ದೇವರು ಇಬ್ಬರು ಇದ್ದಾರೆಂದು, ಅದರಲ್ಲಿ ಮೊದಲನೆಯವನು ನಿರ್ಜೀವವಾದ ಪ್ರಪಂಚವನ್ನು ಸೃಷ್ಠಿಸಿ, ಅದರೊಂದಿಗೆ ಈಗ ನಮಗೆ ದೇವರಾದವನನ್ನು ಕೂಡಾ ಸೃಷ್ಠಿಸಿದ್ದಾನೆ. ಹಾಗೆ ಸೃಷ್ಠಿಸಲ್ಪಟ್ಟ ದೇವರು (ಆತ್ಮ) ಮೊದಲ ದೇವರಿಗೆ (ಪರಮಾತ್ಮ) ಗೆ ಕುಮಾರನು ಎಂದು ಹೇಳಬಹುದು. ಮೊದಲ ದೇವರಾದ ಪರಮಾತ್ಮ ತನ್ನ ಕುಮಾರನಾದ ಎರಡನೇ ದೇವರಿಂದ ಸಜೀವವಾದ ಪ್ರಪಂಚವನ್ನು ಸೃಷ್ಠಿಸಿದ್ದಾನೆ. ಮೊದಲ ದೇವರು ಪರಮಾತ್ಮ ಜೀವರಾಶಿಯಿಲ್ಲದ ವಿಶ್ವವನ್ನು ಸೃಷ್ಠಿಸಿದರೇ, ಸೃಷ್ಠಿಸಲ್ಪಟ್ಟ ಎರಡನೇ ದೇವರಾದ ಆತ್ಮ ಪ್ರಕೃತಿಯನ್ನು ಉಪಯೋಗಿಸಿಕೊಂಡು ಸಮಸ್ತ ಜೀವರಾಶಿಗಳನ್ನು ತಯಾರು ಮಾಡಿದ್ದಾನೆ. ಈ ವಿಧವಾಗಿ ಇಬ್ಬರು ಸೃಷ್ಠಿಕರ್ತರು ಇದ್ದಾರೆಂದು ಹೇಳಬಹುದು. ಸಜೀವವಾದ ಮನುಷ್ಯರನ್ನು ತಯಾರು ಮಾಡಿದವನೇ ನಮಗೆ ಆರಾಧ್ಯ ದೈವವೆಂದು, ಮೊದಲ ದೇವರಾದ ಪರಮಾತ್ಮನನ್ನು ಯಾರೂ ಆರಾಧಿಸಬಾರ ದೆಂದು ಸ್ವತಃವಾಗಿ ದೊಡ್ಡ ಅಲ್ಲಾಹ್ ಅಂದರೇ ಮೊದಲ ಅಲ್ಲಾಹ್ ಹೇಳಿದ ವಿಷಯ 3ನೇ ಸೂರಾ, 18ನೇ ಆಯತ್‌ನಲ್ಲಿ ಇರುವುದನ್ನು ನೋಡಿದ್ದೇವೆ. ಇದೇ ವಿಷಯವನ್ನೇ ಎಲ್ಲರೂ ನಂಬುವ ಹಾಗೆ ಪ್ರತ್ಯೇಕವಾದ ಮೊದಲ ಅಲ್ಲಾಹ್‌ನನ್ನು ನಾನಿದ್ದೇನೆನ್ನುವಂತೆ ನನ್ನನ್ನು ಅಲ್ಲದೇ, ನಾನು ಸೃಷ್ಠಿಸಿದ ದೇವರನ್ನೇ ನೀವು ಆರಾಧಿಸಬೇಕೆಂದು ಅದೇ ಖುರ್‌ಆನ್ ಗ್ರಂಥದಲ್ಲಿ ಮತ್ತೊಂದು ಕಡೆ ಸೂರಾ 16, ಆಯತ್ 51ರಲ್ಲಿ ಹೀಗೆ ಹೇಳಿದ್ದಾರೆ ನೋಡಿರಿ.

**16–51 : ಅಲ್ಲಾಹ್ ಹೀಗೆ ಹೇಳಿದ್ದಾನೆ. "ಇಬ್ಬರು ಆರಾಧ್ಯ ದೇವರುಗಳನ್ನು ಕಲ್ಪಿಸಿಕೊಳ್ಳಬೇಡಿ. ಆರಾಧ್ಯ ದೈವ ಆತನೊಬ್ಬನೇ. ಆದ್ದರಿಂದ ನೀವೆಲ್ಲರೂ ಕೇವಲ ನನಗೇ ಭಯಪಡಿ" ಎಂದು ಹೇಳಿದ್ದಾನೆ.**

("ದಿವ್ಯ ಖುರ್‌ಆನ್ ಸಂದೇಶ" ತೆಲುಗಿನಲ್ಲಿ ಎಂಬ ಗ್ರಂಥದಲ್ಲಿ ಕೂಡಾ ಈ ವಾಕ್ಯವನ್ನು ಹೀಗೆ ಬರೆದಿದ್ದಾರೆ ನೋಡಿರಿ.)

**16–51 : ಅಲ್ಲಾಹ್ ಹೀಗೆ ಆಜ್ಞಾಪಿಸಿದ್ದಾನೆ "ಓ ಮಾನವರೇ ಇಬ್ಬರನ್ನು ಆರಾಧ್ಯ**

**ದೈವಗಳಾಗಿ ಮಾಡಿಕೊಳ್ಳಬೇಡಿ. ನಿಶ್ಚಯವಾಗಿ ಆರಾಧ್ಯದೈವ ಆತನು (ಅಲ್ಲಾಹ್) ಒಬ್ಬನೇ. ಆದ್ದರಿಂದ ನನಗೇ ಭೀತಿಪರರಾಗಿ ಇರಿ.”**

ಈ ಆಯತ್ 3–18ರಲ್ಲಿ ಹೇಳಿದ ಆಯತ್‌ಗೆ ಬಲವನ್ನು ಕೈಗೂಡಿಸುತ್ತಿದೆ. ಇಬ್ಬರು ದೇವರುಗಳು ಇದ್ದಾರೆನ್ನುವುದಕ್ಕೆ ಈ ಆಯತ್ ದೊಡ್ಡ ಸಾಕ್ಷಿಯಾಗಿದೆ. **“ಆತನನ್ನು ಆರಾಧಿಸಿರಿ, ನನಗೆ ಭಯಪಡಿರಿ”** ಎಂದು ಹೇಳುವುದರಿಂದ ಹೇಳುವವನು ದೊಡ್ಡ ದೇವರೆಂದು ಸುಲಭವಾಗಿ ಅರ್ಥವಾಗುತ್ತದೆ. ಇಲ್ಲಿ ಕೂಡಾ ಒಬ್ಬ ಮುಸ್ಲೀಮ್‌ರಿಗೇ ಅಲ್ಲದೆ ಸಮಸ್ತ ಮಾನವರಿಗು ಆರಾಧ್ಯ ದೈವ ಒಬ್ಬನೇ ಎಂದು ಆತನನ್ನೇ ಆರಾಧಿಸಬೇಕೆಂದು ಹೇಳುತ್ತಾ ಮೊದಲು ಪ್ರಪಂಚ ವನ್ನು ಮತ್ತು ನೀವು ಆರಾಧಿಸುವ ದೇವರನ್ನು ಸೃಷ್ಠಿಸಿದ ನನಗೆ ಭಯಪಡಿರೆಂದು ಹೇಳಿದ್ದಾನೆ. ಇದರಲ್ಲಿ ಅರ್ಥವಾಗದ ವಿಷಯ ಏನೂಯಿಲ್ಲ. ನಿಮ್ಮ ಆರಾಧ್ಯ ದೈವ ಒಬ್ಬನೇ ಹೊರತು ಇಬ್ಬರು ಅಲ್ಲ ಎಂದು ಹೇಳಿದ್ದಾನೆ. ಇನ್ನೂ ಆಳವಾಗಿ ಆಲೋಚಿಸಿದರೆ ನಾವು ಮಾತುಗಳ ಸಂದರ್ಭದಲ್ಲಿ ಇವನಿಗೆ ಭಯ, ಭಕ್ತಿ ಎರಡೂ ಇಲ್ಲವೆಂದು ಆಗಾಗ ಇತರರನ್ನು ಕುರಿತು ಹೇಳುತ್ತಿರುತ್ತೇವೆ. ಅದರಲ್ಲಿ ಮೊದಲನೆಯದು ಭಯ ಎಂದು ಹೇಳಿದ್ದೇವೆ ಅಲ್ಲವೇ! ನಂತರ ಎರಡನೆಯದು ಭಕ್ತಿ ಎಂದು ಕೂಡಾ ಹೇಳಿದ್ದೇವೆ. ಇದನ್ನನುಸರಿಸಿ ಭಯ ಎನ್ನುವುದು ಮೊದಲ ಸೃಷ್ಠಿಕರ್ತನಾದ ದೊಡ್ಡ ದೇವರ ಮೇಲೆ ಇರಬೇಕು. ತಾತನಾದ ದೇವರನ್ನು ಆರಾಧಿಸದೆ ಆತನಿಗೆ ಭಯಪಟ್ಟು ಇರುವುದು ಒಳ್ಳೆಯದು. ಎರಡನೇ ಸೃಷ್ಠಿಕರ್ತ ಅಂದರೇ ಸಮಸ್ತ ಜೀವರಾಶಿಗಳನ್ನು ಸೃಷ್ಠಿಸಿದ ಸೃಷ್ಠಿಕರ್ತ ನಾದ ಆತ್ಮ ಒಬ್ಬನನ್ನೇ ದೇವರ ಹಾಗೆ ಆರಾಧಿಸಬೇಕೆಂದು ಹೇಳಿದ್ದಾರೆ. ಈ ಆಯತ್‌ನಲ್ಲಿ ಇಬ್ಬರು ದೇವರುಗಳೆಂದು ನಂಬದವರಿಗೆ ನಂಬುವಂತೆ ಹೇಳಿದ್ದಾರೆ. ಇದರಿಂದ ಮನುಷ್ಯರಿಗೆ ಇಬ್ಬರು ದೇವರುಗಳಿದ್ದಾರೆಂದು ಸಾಕ್ಷಿ ದೊರಕುತ್ತಿದೆ. ಅದರಲ್ಲಿ ಸೃಷ್ಠಿಸಲ್ಪಟ್ಟ ದೇವರು ಆರಾಧ್ಯಕ್ಕೆ ಅರ್ಹನೆಂದು, ಆರಾಧ್ಯ ದೈವವನ್ನು ಸೃಷ್ಠಿಸಿದ ಮೊದಲ ಸೃಷ್ಠಿಕರ್ತ ದೊಡ್ಡ ದೇವರೇ ಆದರೂ, ಆತನನ್ನು ಆರಾಧಿಸಬಾರದೆಂದು, ಆತನು ಇದ್ದಾನೆಂದು ತಿಳಿದಿರುವುದಕ್ಕೆ ಗುರುತಾಗಿ ಆತನ ಬಗ್ಗೆ ಭಯ

ಹೊಂದಿರುವುದು ಒಳ್ಳೆಯದೆಂದು ತಿಳಿಯುತ್ತಿದೆ. ಖುರ್‌ಆನ್ ಗ್ರಂಥದಲ್ಲಿ ಆರಾಧ್ಯ ದೈವವಾದ ಅಲ್ಲಾಹ್‌ನನ್ನು ಬಹಳ ಕಡೆ ಹೇಳಿದಾಗ, ಆರಾಧ್ಯ ದೈವವಲ್ಲದ ಮೊದಲ ಅಲ್ಲಾಹ್‌ನನ್ನು ಕುರಿತು ಅಲ್ಲಲ್ಲಿ ಹೇಳಿದ್ದಾರೆ. ಆತನು ಯಾವ ಕೆಲಸವನ್ನು ಮಾಡುವುದಿಲ್ಲವೆಂದು, ಆತನು ಅಂದುಕೊಂಡರೇ ಎಲ್ಲಾ ಮುಗಿದು ಹೋಗುತ್ತವೆಯೆಂದು ಹೇಳಿರುವುದು ದೊಡ್ಡ ಅಲ್ಲಾಹ್‌ನನ್ನು ಕುರಿತಾಗಿಯೇ. ಅಷ್ಟೇ ಅಲ್ಲದೆ 112ನೇ ಸೂರಾದಲ್ಲಿರುವ ನಾಲ್ಕು ಆಯತ್‌ಗಳು ಮೊದಲ ಅಲ್ಲಾಹ್‌ನನ್ನು ಕುರಿತು ಹೇಳಿರುವವೇಯೆಂದು ತಿಳಿಯಬೇಕು.

ಇಬ್ಬರು ದೇವರುಗಳನ್ನು ಕುರಿತು ಅಂತಿಮ ದೈವಗ್ರಂಥದಲ್ಲಿ 3–18, 16–51 ರಲ್ಲಿ ಹೇಳಿದ ವಿಷಯವನ್ನು ಹೇಳಿದ್ದೇವೆ. ಮೂರು ದೈವಗ್ರಂಥಗಳಲ್ಲಿಯೂ ಒಂದೇ ಜ್ಞಾನ ಒಂದೇ ವಿಷಯ ಹೇಳಿದ್ದರೂ, ಬರೆದ ಪದ್ಧತಿ ಬೇರೆ ಬೇರೆ ಇರುವುದರಿಂದ ಎರಡು ಗ್ರಂಥಗಳಲ್ಲಿ ಬರೆದಿರುವುದು ಒಂದೇಯೆಂದು ಕೆಲವರು ಗ್ರಹಿಸಲಾರದೆ ಹೋಗುತ್ತಿದ್ದಾರೆ. ಸ್ವಲ್ಪ ಆಳವಾಗಿ ಅರ್ಥ ಮಾಡಿಕೊಂಡರೆ ಎಲ್ಲಾ ಗ್ರಂಥಗಳಲ್ಲಿ ಹೇಳಿರುವುದು ಒಂದೇ ಜ್ಞಾನವೆಂದು ತಿಳಿಯಬಲ್ಲದು. ಅಂತಿಮ ದೈವ ಗ್ರಂಥ ಖುರ್‌ಆನ್‌ನಲ್ಲಿ ಹೇಳಿದ ವಿಷಯವೇ ದ್ವಿತೀಯ ದೈವಗ್ರಂಥ ಇಂಜೀಲು (ಬೈಬಲ್) ನಲ್ಲಿ ಕೂಡಾ ಯೋಹಾನ್ ಸುವಾರ್ತೆಯಲ್ಲಿ ಐದನೆ ಅಧ್ಯಾಯದಲ್ಲಿ 23, 24 ವಾಕ್ಯಗಳಲ್ಲಿ ಹೇಳಿದ್ದಾರೆ. ಈಗ ಆ ವಾಕ್ಯಗಳನ್ನು ನೋಡೋಣ.

**ಯೋಹಾನ್, 5–23 : ತಂದೆಯನ್ನು ಗೌರವಿಸುವ ಹಾಗೆ ಎಲ್ಲರೂ ಕುಮಾರನನ್ನು ಗೌರವಿಸಬೇಕೆಂದು, ತೀರ್ಪು ನಿರ್ಣಯಿಸುವುದಕ್ಕೆ ಸರ್ವಾಧಿಕಾರವನ್ನು ಕುಮಾರನಿಗೆ ಒಪ್ಪಿಸಿದ್ದಾನೆ. ಕುಮಾರನನ್ನು ಗೌರವಿಸದವನು ಆತನನ್ನು ಕಳಿಸಿದ ತಂದೆಯನ್ನು ಗೌರವಿಸುವುದಿಲ್ಲ.**

**ಯೋಹಾನ್. 5–24 : ನನ್ನ ಮಾತು ಕೇಳಿ ನನ್ನನ್ನು ಕಳಿಸಿದವನಲ್ಲಿ ವಿಶ್ವಾಸ ಇಡುವವನು ನಿತ್ಯಜೀವವಿರುವವನು. ಅವನು ತೀರ್ಪಿನೊಳಗೆ**

**ಬಾರದೆ ಮರಣದೊಳಗಿನಿಂದ ಜೀವದೊಳಗೆ ದಾಟಿದ್ದಾನೆಂದು ನಿಮ್ಮೊಂದಿಗೆ ನಿಶ್ಚಯವಾಗಿ ಹೇಳುತ್ತಿದ್ದೇನೆ.**

ಯೋಹಾನ್ ಸುವಾರ್ತೆಯಲ್ಲಿನ ಎರಡು ವಾಕ್ಯಗಳು, ಖುರ್‌ಆನ್‌ನಲ್ಲಿನ ಎರಡು ವಾಕ್ಯಗಳಿಗೆ ಸಮಾನವಾಗಿ ಇವೆಯೆಂದು ಸ್ವಲ್ಪ ಬುದ್ಧಿಯನ್ನು ಉಪಯೋಗಿಸಿ ನೋಡಿದವರಿಗೆ ಅರ್ಥವಾಗುತ್ತದೆ. 23ನೇ ವಾಕ್ಯದಲ್ಲಿ 'ತಂದೆಯೆಂದು' ಹೇಳಿದ್ದಾರೆ ಅಲ್ಲವೇ! ಮೊದಲು ಪ್ರಕೃತಿಯನ್ನು, ಆತ್ಮವನ್ನು ತಯಾರು ಮಾಡಿದ ಸೃಷ್ಟಿಕರ್ತನನ್ನೇ ಇಲ್ಲಿ ತಂದೆಯೆಂದು ಹೇಳಿದ್ದಾರೆ. ಕುಮಾರನು ಅಂದರೇ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಆತ್ಮನನ್ನೇ ಕುಮಾರನು ಎಂದು ಹೇಳುತ್ತಿದ್ದಾರೆ. ಮೊದಲ ಸೃಷ್ಟಿಕರ್ತನಾದ ಪರಮಾತ್ಮ ಅಥವಾ ಪರಿಶುದ್ಧಾತ್ಮನಿಂದ ತಯಾರಾದ ಕುಮಾರನಾಗುವ ಆತ್ಮನನ್ನು ಎಲ್ಲರೂ ಆರಾಧಿಸಬೇಕೆಂದು ಹೇಳಿದ್ದಾರೆ. ಪರಮಾತ್ಮನನ್ನು ಆರಾಧಿಸದೆ ಭಕ್ತಿ ಭಾವನೆಗಳನ್ನು ಆತನ ಕುಮಾರನಾದ ಆತ್ಮ ಮೇಲೆ ತೋರಿಸಬೇಕೆಂದು, ಆತ್ಮನನ್ನೇ ಆರಾಧಿಸಬೇಕೆಂದು ಹಾಗೆ ಕುಮಾರನಾದ ಆತ್ಮನನ್ನು ಆರಾಧಿಸಿದರೆ ಸೃಷ್ಟಿಕರ್ತನಾದ ಪರಮಾತ್ಮನನ್ನು ಆರಾಧಿಸಿದಂತೇಯೆಂದು ಹೇಳಿದ್ದಾರೆ. ಇದರ ಸಾರಾಂಶವನ್ನು ನೋಡಿದರೆ **"ನೀವು ನನ್ನನ್ನು ಆರಾಧಿಸಬಾರದು, ನನ್ನ ಕುಮಾರನನ್ನೇ ಆರಾಧಿಸಿರೆಂದು"** ಖುರ್‌ಆನ್‌ನಲ್ಲಿ ಹೇಳಿದಂತಿದೆ. **"ನನ್ನ ಕುಮಾರನನ್ನು ಆರಾಧಿಸಿದರೇ ನನ್ನನ್ನು ಆರಾಧಿಸಿದ ಹಾಗೆಯೇ ಎಂದು, ನನ್ನ ಮಾತಿನ ಪ್ರಕಾರ ನನ್ನ ಕುಮಾರನನ್ನು ಆರಾಧಿಸದೆ ಹೋದರೆ ನನ್ನನ್ನು ಆರಾಧಿಸದಂತೆಯೆಂದು"** ಕೂಡಾ ಹೇಳಿದ್ದಾರೆ. ಇಲ್ಲಿ 23ನೇ ವಾಕ್ಯದಲ್ಲಿ ಹೇಳಿದ ವಿಷಯವನ್ನು ನೋಡಿದರೆ ಖುರ್‌ಆನ್‌ನಲ್ಲಿ 3–18 ರಲ್ಲಿ ಹೇಳಿದ ಸಾರಾಂಶವೇ ಇದೆ. ನಿಮಗೆ ಒಬ್ಬನೇ ಎಂದು ಹೇಳಿದಂತೆ ಇಲ್ಲಿಯೂ ಕೂಡಾ **'ನೀವು ಕುಮಾರನನ್ನೇ ಆರಾಧಿಸಿರಿ, ಆತನೇ ನಿಮಗೆ ಆರಾಧ್ಯ ದೈವ'** ಎಂದು ಹೇಳಿದಂತಿದೆ.

ಬೈಬಲ್‌ನಲ್ಲಿ ಯೋಹಾನ್ 5–24ರಲ್ಲಿ ಇರುವ ವಾಕ್ಯವನ್ನು ನೋಡಿದರೆ, ಖುರ್‌ಆನ್‌ನಲ್ಲಿ **"ನಾನು ಕೂಡಾ ಇದ್ದೇನೆ ನನಗೆ ಭಯಪಟ್ಟು ಇರಿ"** ಎನ್ನುವಂತೆ.

**“ನನ್ನನ್ನು ಕಳಿಸಿದವನಲ್ಲಿ ನಂಬಿಕೆ ಇಡುವವನು”** ಎಂದು ಮೊದಲ ಸೃಷ್ಠಿಕರ್ತನಾದ ದೇವರನ್ನು ಕುರಿತು ಹೇಳಿದಂತೆ ಇದೆ. ಹಾಗೆ ಮೊದಲ ದೇವರ ಮಾತಿನ ಮೇಲೆ ವಿಶ್ವಾಸವಿಟ್ಟು ಎರಡನೇ ದೇವರನ್ನು ಆರಾಧನೆ ಮಾಡುವವನು ಮರಣಿಸಿದ ನಂತರ ಎರಡನೇ ಜನ್ಮಕ್ಕೆ ತೀರ್ಪಿನೊಳಗೆ ಬರದಂತೆ ನಿತ್ಯ ಜೀವವಾದ ಮೋಕ್ಷವನ್ನು ಹೊಂದುತ್ತಾನೆ ಎಂದು ಹೇಳಿದ್ದಾನೆ. ಖುರ್‌ಆನ್‌ನಲ್ಲಿ ಇಬ್ಬರು ದೇವರುಗಳು ಇದ್ದಾರೆಂದು ಹೇಳಿದ ಹಾಗೆಯೇ ಈ ಎರಡು ವಾಕ್ಯಗಳಲ್ಲಿ ತಂದೆ, ಕುಮಾರನು ಇಬ್ಬರು ದೇವರುಗಳಿದ್ದಾರೆಂದು ಹೇಳಿದ್ದಾರೆ. ಪರಮಾತ್ಮಗೆ ಭಯಪಟ್ಟು ಆತನ ಮಾತಿನ ಪ್ರಕಾರ ಆತ್ಮವನ್ನು ಆರಾಧಿಸಿದರೆ ಅವನಿಗೆ ಮೋಕ್ಷ ಉಂಟಾಗುತ್ತದೆಂದು ಕೂಡಾ ಹೇಳಿದ್ದಾರೆ. ಮೊದಲ ದೇವರನ್ನು ನಂಬಿ ಎರಡನೇ ದೇವರನ್ನು ಆರಾಧಿಸಬೇಕೆಂದು ಎರಡು ಗ್ರಂಥಗಳಲ್ಲಿ ಹೇಳಿದ್ದಾರೆ. ಖುರ್‌ಆನ್‌ನಲ್ಲಿ ಮೊದಲ ದೇವರಿಗೆ ಭಯಪಡು ಎಂದಿದ್ದಾರೆ. ಬೈಬಲ್‌ನಲ್ಲಿ ಆತನ ಮೇಲೆ ವಿಶ್ವಾಸ ಇಡಬೇಕೆಂದಿದ್ದಾನೆ. ಹಾಗೆಯೇ ಮೊದಲ ಸೃಷ್ಠಿಕರ್ತನನ್ನು ಅಥವಾ ಪರಿಶುದ್ಧಾತ್ಮನನ್ನು ತಿಳಿದಿದ್ದು, ಆತನು ತಯಾರು ಮಾಡಿದ ದೇವರನ್ನು ಆರಾಧಿಸಿರೆಂದು ಹೇಳಿದ್ದಾನೆ. ಹೇಗೆ ನೋಡಿದರೂ ಇಬ್ಬರು ದೇವರುಗಳ ಪ್ರಸ್ತಾವನೆ ಎರಡು ಗ್ರಂಥಗಳಲ್ಲಿ ಬಂದಿದೆ. ಆದ್ದರಿಂದ ಒಬ್ಬ ದೇವರು ಆರಾಧಿಸಲ್ಪಡುವವನು. ಒಬ್ಬ ದೇವರು ಗುರುತು ಇರಬೇಕಾದವನು. ವಿಶ್ವವನ್ನು ಸೃಷ್ಠಿಸಿದ ಪರಮಾತ್ಮನನ್ನು ನಂಬಿ ಆತನು ಹೇಳಿದ ಜ್ಞಾನದ ಪ್ರಕಾರ ಜೀವರಾಶಿಗಳನ್ನು ಸೃಷ್ಠಿಸುತ್ತಾ, ಪೋಷಿಸುತ್ತಾ, ಮರಣಿಸುವಂತೆ ಮಾಡುತ್ತಾ, ಪುನಃ ಪಾಪಪುಣ್ಯಗಳ ಲೆಕ್ಕದಲ್ಲಿ ತೀರ್ಪು ಕೊಟ್ಟು ಪುನಃ ಹುಟ್ಟುವಂತೆ ಮಾಡುತ್ತಿರುವ ಆತ್ಮನನ್ನು ಆರಾಧಿಸಬೇಕೆಂದು ಎರಡು ಗ್ರಂಥಗಳಲ್ಲಿನ ನಾಲ್ಕು ವಾಕ್ಯಗಳ ಸಾರಾಂಶ ಇದೆ.

ಇದೇ ವಿಷಯವೇ ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಲ್ಲಿ ಇದೆ. ಭಗವದ್ಗೀತೆಯಲ್ಲಿನ ಜ್ಞಾನಸಾರಾಂಶವೇ ಉಳಿದ ಎರಡು ಗ್ರಂಥಗಳಲ್ಲಿ ಇರುವುದರಿಂದ ಮೂರು ಗ್ರಂಥಗಳಲ್ಲಿ ಇಬ್ಬರು ದೇವರುಗಳ ವಿಷಯ

ಇದೆಯೆಂದು ಹೇಳಬಹುದು. ಭಗವದ್ಗೀತೆಯಲ್ಲಿ ಮೊದಲ ಸೃಷ್ಠಿಕರ್ತನನ್ನು ಪುರುಷೋತ್ತಮ ಮತ್ತು ಪರಮಾತ್ಮ ಎಂದು ಹೇಳಿದ್ದಾರೆ. ಎರಡನೇ ದೇವರನ್ನು ಆತ್ಮ ಎಂದು ಹೇಳಿದ್ದಾರೆ. ಪರಮಾತ್ಮ ಆತ್ಮ ವಿಷಯಗಳನ್ನು ಅನೇಕ ಶ್ಲೋಕಗಳಲ್ಲಿ ಹೇಳಿದ್ದಾರೆ. ಆದರೆ ಯಾವ ಶ್ಲೋಕ ಯಾವ ಆತ್ಮಗೆ ಎಂದು ಬಹಳ ಜನರಿಗೆ ತಿಳಿಯದಿರುವುದರಿಂದ, ನಂತರ ಮೊದಲಿಗೇ ಭಗವದ್ಗೀತೆ ಜ್ಞಾನ ಹಿಂದೂಗಳಿಗೆ ಅರ್ಥವಾಗದಿರುವುದರಿಂದ, ಹಿಂದೂಗಳು ಭಗವದ್ಗೀತೆಗಿಂತ ಮೊದಲಿನಿಂದ ಅನೇಕ ದೇವತೆಗಳಿಗೆ, ದೆವ್ವಗಳಿಗೆ, ಗಿಡಗಳಿಗೆ, ಹುತ್ತಗಳಿಗೆ ಭಕ್ತರಾಗಿದ್ದು ಅವುಗ ಳನ್ನೇ ಆರಾಧಿಸುವುದರಿಂದ ದೇವರುಗಳು ಇಬ್ಬರೆಂದಾಗಲಿ, ಅದರಲ್ಲಿ ಒಂದೇ ದೇವರನ್ನು ಆರಾಧಿಸಬೇಕೆಂದಾಗಲೀ ತಿಳಿಯದಂತೆ ಹೋಗಿದೆ. ಬೈಬಲ್, ಖುರ್‌ಆನ್ ಜ್ಞಾನಕ್ಕೆ ಮೂಲಾಧಾರ ತೌರಾತು (ಭಗವದ್ಗೀತೆ) ಆದರೂ ಕ್ರೈಸ್ಥರಿಗು, ಮುಸ್ಲೀಮ್‌ರಿಗು ಅರ್ಥವಾದಷ್ಟು ಜ್ಞಾನ ಕೂಡಾ ಹಿಂದೂಗಳಿಗೆ ಅರ್ಥವಾಗಲಿಲ್ಲ. ಅವರು ಕುರುಡರಂತೆ ಒಂದೇ ದೇವರು ಅನ್ನುವಂತೆ ಕೂಡಾ ಹೇಳಲಾರದೆ ಹೋಗುತ್ತಿದ್ದಾರೆ.

ನಾನು ಈ ದಿನ ಪ್ರತಿಪಾದಿಸಿದ ತ್ರೈತ ಸಿದ್ಧಾಂತ ಸತ್ಯವಾದುದೆಂದು ತಿಳಿಯುವ ಹಾಗೆ ತ್ರೈತ ಸಿದ್ಧಾಂತ ಸೂತ್ರಗಳು ಭಗವದ್ಗೀತೆಯಲ್ಲಿಯೂ, ಬೈಬಲ್ ನಲ್ಲಿಯೂ, ಖುರ್‌ಆನ್‌ನಲ್ಲಿಯೂ ಇವೆ. ನನಗಿಂತ ಮೊದಲು ಹಿಂದೂ ಮತದಲ್ಲಿ ಮೂವರು ಸಿದ್ಧಾಂತಕರ್ತರು ಬಂದಿದ್ದಾರೆ. ಮೊದಲನೆಯವರು ಆದಿ ಶಂಕರಾ ಚಾರ್ಯರವರು (ಕೇರಳ ನಿವಾಸಿ), ಎರಡನೆಯವರು ವಿಶಿಷ್ಠಾದ್ವೈತ ವನ್ನು ಪ್ರತಿಪಾದಿಸಿದ್ದಾರೆ ಈತನು ತಮಿಳುನಾಡು ನಿವಾಸಿ. ಮೊದಲು ಶಂಕರಾ ಚಾರ್ಯರವರು ಅದ್ವೈತವನ್ನು ಪ್ರಚಾರ ಮಾಡಿದರೆ, ನಂತರ ರಾಮಾನುಜಾ ಚಾರ್ಯರವರು ವಿಶಿಷ್ಟಾದ್ವೈತವನ್ನು ಪ್ರಚಾರ ಮಾಡಿದ್ದಾರೆ. ನಂತರ ಸ್ವಲ್ಪ ಕಾಲಕ್ಕೆ ಕರ್ನಾಟಕ ನಿವಾಸಿಯಾದ ಮಧ್ವಾಚಾರ್ಯರವರು ದ್ವೈತವನ್ನು ಪ್ರತಿ ಪಾದಿಸಿ ಹೇಳಿದ್ದಾರೆ. ಈ ಮೂರು ಸಿದ್ಧಾಂತಗಳಲ್ಲಿ ಈ ದಿನ ಭೂಮಿ ಮೇಲೆ ಅದ್ವೈತ, ವಿಶಿಷ್ಟಾದ್ವೈತವೇ ಹೆಚ್ಚಾಗಿದೆ. ದ್ವೈತವು ಹೆಸರಿಗೆ ಮಾತ್ರವೇ ಇದೆ.

ಪ್ರಸ್ತುತ ಕಾಲದಲ್ಲಿ ಆಂಧ್ರ ರಾಷ್ಟ್ರದಲ್ಲಿ ನಿವಾಸಿಸುವ ಪ್ರಬೋಧಾನಂದ ಯೋಗೀಶ್ವರ ರಾಗಿ ಇರುವ ನನ್ನಿಂದ ತ್ರೈತ ಸಿದ್ಧಾಂತ ಪ್ರತಿಪಾದಿಸಲ್ಪಟ್ಟಿದೆ. ನನ್ನಿಂದ ಹೇಳಲ್ಪಟ್ಟಿರುವ ತ್ರೈತ ಸಿದ್ಧಾಂತಕ್ಕೆ ಶಾಸ್ತ್ರಾಧಾರ ಇದೆ. ಮೊದಲು ಪ್ರಕಟಿಸಲ್ಪಟ್ಟ ಉಳಿದ ಮೂರು ಸಿದ್ಧಾಂತಗಳಿಗೆ ಶಾಸ್ತ್ರಾಧಾರ ಇಲ್ಲ.

ಬ್ರಹ್ಮ ವಿದ್ಯಾಶಾಸ್ತ್ರವಾಗಿ ಇರುವ ಪ್ರಥಮ ದೈವಗ್ರಂಥ ತೌರಾತ್ (ಭಗವದ್ಗೀತೆ) ನಲ್ಲಿಯೂ, ದ್ವಿತೀಯ ದೈವಗ್ರಂಥ ಇಂಜೀಲ್ ಬೈಬಲ್‌ನಲ್ಲಿಯೂ, ಅಂತಿಮ ದೈವಗ್ರಂಥ ಖುರ್‌ಆನ್‌ನಲ್ಲಿಯೂ ನಮ್ಮಿಂದ ಹೇಳಲ್ಪಟ್ಟಿರುವ ತ್ರೈತ ಸಿದ್ಧಾಂತಕ್ಕೆ ಆಧಾರಗಳು ಈ ಕೆಳಕಂಡಂತಿವೆ.

## ಭಗವದ್ಗೀತೆ :

**ಭಗವದ್ಗೀತೆಯಲ್ಲಿ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿರುವ 16, 17 ಶ್ಲೋಕ ಗಳಲ್ಲಿ ತ್ರೈತ ಸಿದ್ಧಾಂತ ಇದೆ.**

**ಕ್ಷರನು – ಜೀವಾತ್ಮ (ಆರಾಧಿಸುವವನು) ಸೃಷ್ಠಿಸಲ್ಪಟ್ಟವನು.**

**ಅಕ್ಷರನು – ಆತ್ಮ (ಆರಾಧ್ಯ ದೈವ) ಎರಡನೇ ಸೃಷ್ಠಿಕರ್ತ.**

**ಪುರುಷೋತ್ತಮನು – ಪರಮಾತ್ಮ (ಪರಿಶುದ್ಧಾತ್ಮ) ಮೊದಲನೇ ಸೃಷ್ಠಿಕರ್ತ.**

## ಬೈಬಲ್ :

**ಬೈಬಲ್‌ನಲ್ಲಿ ಮತ್ತಾಯ 28–19ನೇ ವಚನದಲ್ಲಿ ತ್ರೈತ ಸಿದ್ಧಾಂತವಿದೆ.**

**ಕುಮಾರನು – ಜೀವಾತ್ಮ (ಆರಾಧಿಸುವವನು) ಸೃಷ್ಠಿಸಲ್ಪಟ್ಟವನು.**

**ತಂದೆ – ಆತ್ಮ (ಆರಾಧ್ಯ ದೈವ) ಎರಡನೇ ಸೃಷ್ಠಿಕರ್ತ.**

**ಪರಿಶುದ್ಧಾತ್ಮ – ಪರಮಾತ್ಮ (ಅಲ್ಲಾಹ್) ಮೊದಲನೇ ಸೃಷ್ಠಿಕರ್ತ**

## ಖುರ್‌ಆನ್ :

**ಖುರ್‌ಆನ್‌ನಲ್ಲಿ 50ನೇ ಸೂರಾ, 21ನೇ ಆಯತ್‌ನಲ್ಲಿ ತ್ರೈತ ಸಿದ್ಧಾಂತ ಇದೆ.**

**ನಡೆಸಲ್ಪಡುವವನು – ಜೀವಾತ್ಮ (ಆರಾಧಿಸುವವನು) ಸೃಷ್ಟಿಸಲ್ಪಟ್ಟವನು.**

**ನಡೆಸುವವನು – ಆತ್ಮ (ಆರಾಧ್ಯ ದೈವ) ಎರಡನೆ ಸೃಷ್ಠಿಕರ್ತ.**

**ಸಾಕ್ಷಿಯಾಗಿ ಇರುವವನು – ಪರಮಾತ್ಮ (ಅಲ್ಲಾಹ್) ಮೊದಲ ಸೃಷ್ಠಿಕರ್ತ.**

ಈ ವಿಧವಾಗಿ ಮೂರು ದೈವಗ್ರಂಥಗಳಲ್ಲಿ ಮೂರು ಕಡೆ ತ್ರೈತ ಸಿದ್ಧಾಂತ ಹೇಳಲ್ಪಟ್ಟಿದೆ. ಆದರೂ ತ್ರೈತ ಸಿದ್ಧಾಂತವನ್ನು ಕುರಿತು ಹಿಂದೂಗಳಿಗು, ಕ್ರೈಸ್ಥರಿಗು, ಮುಸ್ಲೀಮ್‌ರಿಗು ತಿಳಿಯದ ಹಾಗೆ ಹೋಗಿದೆ. ಪ್ರಜೆಗಳಿಗೆ ತಿಳಿಯದ ದೈವ ಸಿದ್ಧಾಂತವನ್ನು ಈ ದಿನ ನನ್ನ ಮುಖಾಂತರ ದೇವರು ಬಹಿರಂಗ ಪಡಿಸಿದ್ದಾನೆ. ಈ ದಿನ **ತ್ರೈತ ಸಿದ್ಧಾಂತವನ್ನು ಪ್ರತಿಪಾದಿಸಿದವರು ಪ್ರಬೋಧಾನಂದ ಯೋಗೀಶ್ವರರು** ಎಂದು ಹೆಸರು ಬಂದಿದೆ. ಐದು ಸಾವಿರ ವರ್ಷಗಳ ಸಮಯದಲ್ಲಿ ತ್ರೈತ ಸಿದ್ಧಾಂತ ಭಗವದ್ಗೀತೆ ಗ್ರಂಥ ರೂಪದಲ್ಲಿ ಇದ್ದರೂ, ಈ ತ್ರೈತ ಸಿದ್ಧಾಂತ ವನ್ನು ಸೃಷ್ಠಿ ಆದಿಯಲ್ಲಿಯೇ ದೇವರು ಹೇಳಿದ್ದಾನೆ. ಸೃಷ್ಠಿ ಆದಿಯಲ್ಲಿ ಹೇಳಿದ ಅದೇ ಸಿದ್ಧಾಂತವೇ ಮೂರು ದೈವಗ್ರಂಥಗಳಲ್ಲಿ ಐದು ಸಾವಿರ ವರ್ಷಗಳಿಂದ ಇದ್ದರೂ, ಅದು ಮನುಷ್ಯರಲ್ಲಿ ತಿಳಿಯದ ಹಾಗೆ ಹೋಗಿರುವು ದರಿಂದ ಈ ದಿನ ಶಾಸ್ತ್ರಬದ್ಧವಾಗಿ ನಮ್ಮಿಂದ ಹೇಳಿಸಲ್ಪಟ್ಟಿದೆ. ಈ ದಿನ ನಾವು ತ್ರೈತ ಸಿದ್ಧಾಂತ ವನ್ನು ಹೇಳಿದರೂ ತ್ರೈತ ಸಿದ್ಧಾಂತದಲ್ಲಿರುವ ಮೂವರು ಪುರುಷರ ಮಾತು 1400 ವರ್ಷಗಳ ಪೂರ್ವದಲ್ಲಿಯೇ ಖುರ್‌ಆನ್‌ನಲ್ಲಿ 5ನೇ ಸೂರಾ 73 ನೇ ಆಯತ್‌ನಲ್ಲಿ ಬರೆಯಲ್ಪಟ್ಟಿದೆ ನೋಡಿರಿ.

**ಸೂರಾ 5 ಆಯತ್ 73 :– ಅಲ್ಲಾಹ್ ಮೂವರಲ್ಲಿ ಮೂರನೆಯವನು ಎಂದು ಹೆಳಿದವರು ಕೂಡಾ ನಿಜಕ್ಕೂ ತಿರಸ್ಕಾರಕ್ಕೆ ಒಳಗಾದ ಹಾಗೆಯೇ, ವಾಸ್ತವಕ್ಕೆ ಒಬ್ಬನಾದ**

**ಅಲ್ಲಾಹ್ ಹೊರತು ಮತ್ತೊಬ್ಬ ಆರಾಧ್ಯ ದೈವ ಇಲ್ಲವೇಯಿಲ್ಲ. ಒಂದುವೇಳೆ ಅವರು ತಮ್ಮ ಮಾತುಗಳನ್ನು ಬಿಡದಿದ್ದರೇ ಅವರಲ್ಲಿ ತಿರಸ್ಕಾರ ವೈಖರಿ ಮೇಲೆ ಇರುವವರಿಗೆ ಬಾಧಕರವಾದ ಶಿಕ್ಷೆ ತಪ್ಪದೇ ಇರುತ್ತದೆ.**

ಈ ವಾಕ್ಯ 1400 ವರ್ಷಗಳ ಸಮಯದಲ್ಲಿ ಅಂತಿಮ ದೈವಗ್ರಂಥ ಖುರ್‌ಆನ್‌ನಲ್ಲಿ ಬರೆಯಲ್ಪಟ್ಟಿದೆ. ಅಂದರೇ ಮೂವರು ಪುರುಷರಿದ್ದಾರೆಂದು ಈ ದಿನ ನಾನು ಹೇಳಿದ ಮಾತು ಆ ದಿನ ವಾಕ್ಯದಲ್ಲಿ ಇದೆಯೆಂದರೇ ನನಗು ಕೂಡಾ ಸಂತೋಷವೇ. ಆದರೆ ಇಲ್ಲಿ ದೈವ ಬೇರೆ, ಆರಾಧ್ಯ ದೈವ ಬೇರೆ ಎಂದು ಎರಡು ವಿಧಗಳ ದೇವರುಗಳು ಇದ್ದಾರೆ. ಜೀವಾತ್ಮ, ಆತ್ಮ, ಪರಮಾತ್ಮ ಮೂವರ ವರಸೆಯಲ್ಲಿ ಮೂರನೆಯವನು ನಿಜವಾದ ದೊಡ್ಡ ದೇವರು ಆದರೂ, ಆತನು ಆರಾಧ್ಯ ದೈವವಲ್ಲ ಎಂದು ಹೇಳಿದ್ದಾರೆ. ಮೂರನೆಯವನು ನಾನು ಸೃಷ್ಟಿಕರ್ತನೇ ಆದರೂ ನಿಮಗೆ ಎರಡನೆಯವನಾದ ಆತ್ಮವೇ ಆರಾಧ್ಯ ದೈವವೆಂದು ಸೂರಾ 3, ಆಯತ್ 18 ರಲ್ಲಿಯೂ, ಸೂರಾ 16, ಆಯತ್ 51ರಲ್ಲಿ ಹೇಳಿದ್ದಾರೆ. ನಾನು ಕೂಡಾ ಅದೇ ವಿಷಯವನ್ನೇ ಹೇಳುತ್ತಾ ಎರಡನೇ ಆತ್ಮವೇ ಆರಾಧ್ಯ ದೈವವೆಂದು ಹೇಳುತ್ತಿದ್ದೇನೆ. ಎರಡನೆಯವನಲ್ಲ ಮೂರನೆಯವನೆಂದು ಹೇಳಿದರೇ ಆತನು ಸತ್ಯತಿರಸ್ಕಾರನು ಎಂದು ಹೇಳಿದ್ದಾರೆ. ಅಂದರೇ ಸತ್ಯವನ್ನು ಒಪ್ಪಿಕೊಳ್ಳದವ ನೆಂದು ಅರ್ಥ. ತ್ರೈತ ಸಿದ್ಧಾಂತವನ್ನು ತಿಳಿದವನು ದೇವರು ಮೂರನೆಯವನು ಅಂದರೂ, ಆರಾಧ್ಯ ದೈವ ಎರಡನೆಯವನೇಯೆಂದು ಹೇಳಿದಂತೆ ನಾವು ಮೊದಲೇ ಬೋಧಿಸಿದ್ದೇವೆ. ಈ ದಿನ ತ್ರೈತ ಸಿದ್ಧಾಂತವನ್ನು ನಮ್ಮ ಮುಖಾಂತ ರವೇ ಇತರರು ತಿಳಿಯುತ್ತಿದ್ದಾರೆ. ಆದ್ದರಿಂದ ಮೂರನೇ ಆತ್ಮನಾದ ಪರಮಾತ್ಮ ನನ್ನು ಆರಾಧ್ಯ ದೈವವೆಂದು ಯಾರೂ ಹೇಳುವುದಿಲ್ಲ. ಮನುಷ್ಯರನ್ನು ಸೃಷ್ಟಿಸಿದ ಆತ್ಮವನ್ನೇ ಆರಾಧ್ಯ ದೈವವಾಗಿ ಹೇಳುವ ಹಾಗೆ ನಾವು ಮೊದಲೇ ವಿಶಧೀಕರಿಸಿ ಹೇಳಿದ್ದೇವೆ. ಆದ್ದರಿಂದ ತ್ರೈತ ಸಿದ್ಧಾಂತದಲ್ಲಿ ಆರಾಧ್ಯ ದೈವ ಎರಡನೇ ದೈವವಾದ ಆತ್ಮವೇಯೆಂದು ತ್ರೈತ ತಿಳಿದ ಎಲ್ಲರಿಗೂ ತಿಳಿದಿದೆ. ಆದರೇ ತ್ರೈತ ಸಿದ್ಧಾಂತವನ್ನು ತಿಳಿಯದವರು ಎಷ್ಟೋ ಜನ ಇದ್ದಾರೆ, ಅವರು ದೇವರು ಯಾರು? ಆರಾಧ್ಯ

ದೈವ ಯಾರು? ಎಂದು ತಿಳಿಯದೆ ಹೋಗಿರುವುದರಿಂದ ದೇವರ ಶಿಕ್ಷೆ ಅವರಿಗೆ ತಪ್ಪುವುದಿಲ್ಲ.

**ಪ್ರಶ್ನೆ : ಭಗವದ್ಗೀತೆ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ ನೀವು ಮೂವರು ಪುರುಷರು ಇದ್ದಾರೆಂದು ಹೇಳುತ್ತಿದ್ದೀರ. ಅಲ್ಲಿ 16ನೇ ಶ್ಲೋಕದಲ್ಲಿ ಕ್ಷರ, ಅಕ್ಷರ ಎಂದಾಗ ಕ್ಷರ ಅಂದರೇ ನಾಶವಾಗುವುದು ಶರೀರ, ಅಕ್ಷರ ಅಂದರೇ ನಾಶ ಆಗದವನು ಜೀವಾತ್ಮಯೆಂದು ಎಲ್ಲಾ ಭಗವದ್ಗೀತೆಗಳಲ್ಲಿ ವಿವರ ಬರೆದಿದ್ದಾರೆ. ಸುಮಾರು ಮುನ್ನೂರು ಭಗವದ್ಗೀತೆಗಳಲ್ಲಿ ಎಷ್ಟೋ ದೊಡ್ಡ ಸ್ವಾಮೀಜಿಗಳು ಆ ಮಾತು ಬರೆದಿರುವಾಗ ನೀವು ಮಾತ್ರ ಕ್ಷರನು ಎಂದರೇ ಜೀವಿ, ಅಕ್ಷರನು ಎಂದರೇ ಆತ್ಮಯೆಂದು ಹೊಸ ಅರ್ಥವನ್ನು ತಂದಿದ್ದೀರ. ಎಷ್ಟೋ ದೊಡ್ಡ ಘಟಾನು ಘಟಿಗಳಾದ ಸ್ವಾಮೀಜಿಗಳು ಹೇಳಿರುವುದಕ್ಕೆ ನೀವು ವಿರುದ್ಧ ವಾಗಿ ಏಕೆ ಬರೆದಿದ್ದೀರಾ? ಅಷ್ಟುಜನ ಹೇಳಿರುವುದು ತಪ್ಪು, ನೀವು ಹೇಳಿರುವುದು ಒಪ್ಪು ಆಗುತ್ತದಾ? ಕ್ಷರ ಎಂದರೇ ನಾಶ ವಾಗುವ ಶರೀರ ಎಂದು ಎಲ್ಲರಿಗೂ ತಿಳಿದಿದೆ ಅಲ್ಲವೇ! ಇದಕ್ಕೆ ನೀವು ಏನನ್ನುತ್ತೀರಾ?**

**ಉತ್ತರ :– ಅಸತ್ಯವನ್ನು ಸಾವಿರಜನ ಹೇಳಿದರೂ ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರಜನ ಅಲ್ಲಗಳೆದರೂ ಅದು ಅಸತ್ಯವಲ್ಲ.**

ಎಂಬ ಸೂತ್ರದ ಪ್ರಕಾರ ಎಷ್ಟೋ ಜನ ಸ್ವಾಮಿಗಳು ಹೇಳಿರುವುದು ಸತ್ಯವೆಂದು ನೀವು ಏಕೆ ಅಂದುಕೊಳ್ಳಬೇಕು. ಅವರೆಲ್ಲರೂ ಮೊದಲು ಹುಟ್ಟಿದವರು.

ದೊಡ್ಡವರು ಎಂದರೇ ನಾನು ಅವರಿಗಿಂತಲೂ ಮೊದಲಿನಿಂದ ಇರುವವನು ಎಂದು ನೀವು ಏಕೆ ಅಂದುಕೊಳ್ಳಬಾರದು? ನಾನು ಮೊದಲಿನಿಂದ ಹಿಂದೂಗಳಿಗೆ ಭಗವದ್ಗೀತೆ ಅರ್ಥವಾಗಲಿಲ್ಲವೆಂದು ಹೇಳುತ್ತಲೇ ಇದ್ದೇನೆ. ಈಗ ಭಗವದ್ಗೀತೆ ಯನ್ನು ಅದರಲ್ಲಿನ ತ್ರೈತ ಸಿದ್ಧಾಂತವನ್ನು ಸಿಕ್ಕು ತೆಗೆದ ಹಾಗೆ ವಿವರವಾಗಿ ಹೇಳುತ್ತಿದ್ದರೂ ಅರ್ಥ ಮಾಡಿಕೊಳ್ಳದೇ ಯಾರೋ ಏನೋ ಹೇಳಿದ್ದಾರೆಂದು ಅನ್ನುತ್ತಿದ್ದಾರೆ. ಈ ವಿಷಯವನ್ನು ನನ್ನನ್ನು ಕೇಳದಂತೆ ನಾನು ಹೇಳಿರುವುದು ತಪ್ಪಾ, ಅವರು ಹೇಳಿರುವುದು ತಪ್ಪಾಯೆಂದು ನೀವು ಭಗವದ್ಗೀತೆಯಲ್ಲಿಯೇ ಹುಡುಕಿ ನೋಡಬಹುದು ಅಲ್ಲವೇ! ಎಷ್ಟೋ ವರ್ಷಗಳಿಂದ ಎಷ್ಟೋಜನ ಪಂಡಿತರು, ಸ್ವಾಮೀಜಿಗಳು ಭಗವದ್ಗೀತೆಯನ್ನು ಬರೆದು ದೊಡ್ಡ ಹೆಸರು ಪಡೆದಿರುವುದು ನಿಜವೇ! ಅಷ್ಟು ಮಾತ್ರಕ್ಕೆ ಅವರು ಹೇಳಿರುವುದು ಸತ್ಯ ಅಂದುಕೊಳ್ಳುವುದು ದೊಡ್ಡ ತಪ್ಪು. ಅವರು ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವನ್ನು ಹೊಂದಿರಬಹುದು ಆದರೇ ಜ್ಞಾನವನ್ನು ತಿಳಿದಿರುವುದಿಲ್ಲ ಅಲ್ಲವೇ! ಭಗವದ್ಗೀತೆಯಲ್ಲಿ **"ದ್ವಾವಿಮೌ ಪುರುಷೌ"** ಎಂದು ಹೇಳಿದಾಗ ಇಬ್ಬರು ಪುರುಷರು ಎಂದು ಅರ್ಥ ಅಲ್ಲವೇ! ನಂತರ **"ಉತ್ತಮಃ ಪುರುಷ ಸ್ತ್ವನ್ಯಃ"** ಎಂದು ಹೇಳಿದಾಗ ಉತ್ತಮವಾದ ಪುರುಷನು ಅನ್ಯನು ಮತ್ತೊಬ್ಬನು ಇದ್ದಾನೆಂದು ಆತನನ್ನೇ ಪರಮಾತ್ಮ ಎಂದು ಕರೆಯುತ್ತಿದ್ದೇವೆಯೆಂದು ಹೇಳಿದ್ದಾನೆ.

ಮೊದಲ ಶ್ಲೋಕದಲ್ಲಿ ಇಬ್ಬರು ಪುರುಷರೆಂದು ಹೇಳಿದ್ದಾರೆ. ಎರಡನೇ ಶ್ಲೋಕದಲ್ಲಿ ಇಬ್ಬರಿಗಿಂತಲೂ ಉತ್ತಮ ಪುರುಷನು ಪರಮಾತ್ಮಯೆಂದು ಹೇಳಿದ್ದಾರೆ. ಆಗ ಮೂವರು ಪುರುಷರಾಗುತ್ತಿದ್ದಾರೆ ಅಲ್ಲವೇ! ಉಳಿದ ಎಲ್ಲಾ ಭಗವದ್ಗೀತೆಗಳಲ್ಲಿ ಮೂವರು ಪುರುಷರೆಂದು ಒಪ್ಪಿಕೊಂಡು ಹೇಳುತ್ತಿದ್ದರೂ ಮೊದಲ ಕ್ಷರ ಪುರುಷನನ್ನು ನಾಶವಾಗುವ ಶರೀರ ಎಂದು ಹೇಳುತ್ತಿದ್ದಾರೆ. ಇದ್ಹೇಗಿದೆ ಎಂದರೇ ಒಬ್ಬನು ಇತರರೊಂದಿಗೆ ಮಾತನಾಡುತ್ತಾ "ನನಗೆ ಮೂವರು ಗಂಡು ಮಕ್ಕಳು, ಮೊನ್ನೆಯೇ ಒಬ್ಬ ಮಗನಿಗೆ ಮದುವೆ ಮಾಡಿದ್ದೇನೆ. ಆದರೂ ಬಂದಿರುವ ಅಳಿಯ ಒಳ್ಳೆಯವನು ಅಲ್ಲ. ಪ್ರತಿದಿನ ಸಾರಾಯಿ ಕುಡಿದು ಬಂದು

ನನ್ನ ಮಗಳನ್ನು ಹೊಡೆಯುತ್ತಾನೆ" ಎನ್ನುವಂತಿದೆ. ಗಂಡು ಮಕ್ಕಳು ಮೂವರಾದರೆ ಅಳಿಯ ಎಲ್ಲಿಂದ ಬಂದಿದ್ದಾನೆ ಎಂದು ಪ್ರಶ್ನೆ ಹಾಕದೇ ನಾವು ಕೇಳಿದರೆ ಹೇಳುವವನಿಗಿಂತ ತಿಳಿವಳಿಕೆಯಿಲ್ಲದವನು ಕೇಳಿಸಿಕೊಂಡವನು ಆಗುತ್ತಾನೆ. ಅದೇ ವಿಧವಾಗಿ ಮೂವರು ಪುರುಷರಾದಾಗ ನಾಶವಾಗುವವನು ಒಬ್ಬನು, ನಾಶ ಆಗದಿರುವವನು ಮತ್ತೊಬ್ಬನು ಅಂದಾಗ, ನಾಶ ಆಗುವವನು ಎಂದರೇ ನಾಳೆನಾ ಅಥವಾ ನಾಡಿದ್ದಾ, ವರ್ಷಕ್ಕಾ ಅಥವಾ ಪ್ರಳಯದಲ್ಲಿಯಾ ಎಂದು ಆಲೋಚಿಸದೆ ಈ ದಿನವೇ ಇಲ್ಲದ ಹಾಗೆ ಹೋಗುತ್ತಾನೆ ಅಂದುಕೊಂಡರೆ ಅದು ಸತ್ಯವಾಗ ಬಹುದು, ಆಗದಿರಬಹುದು. ಹಾಗೆಯೇ ನಾಶವಾಗುವವನು ಅಂದಾಗ ಯಾವಾಗ ಎಂದು ಆಲೋಚಿಸದೆ, ಹೇಗೆ ಎಂದು ಆಲೋಚಿಸದೆ ನಾಶವಾಗುವುದು ಶರೀರ ಎಂದಿದ್ದಾರೆ.

ಶರೀರ ಪ್ರಕೃತಿಯಿಂದ ತಯಾರಾಗುವುದು. ಪ್ರಕೃತಿ ಸ್ತ್ರೀ ತತ್ತ್ವ ಇರುವಂತಾದ್ದು. ನನಗೆ ಸತಿ (ಹೆಂಡತಿ) ಯಂತಹವಳು. ಸರ್ವಜೀವರಾಶಿಗಳಿಗೆ ತಾಯಿ ಎಂದು ಹೇಳಿದಾಗ ಶರೀರ ಪ್ರಕೃತಿಯಾದ ಸ್ತ್ರೀ ಎಂದು ತಿಳಿದಾಗ, ಕ್ಷರ ಪುರುಷನೊಳಗೆ ಸ್ತ್ರೀಯಾದ ಶರೀರವನ್ನು ಏಕೆ ಹೇಳಬೇಕು ಎಂದು ಯಾರೂ ಆಲೋಚಿಸದಂತೆ ಹೋಗಿದ್ದಾರೆ. ಪುರುಷೋತ್ತಮ ಪ್ರಾಪ್ತಿ ಯೋಗಕ್ಕಿಂತಲೂ ಮೊದಲು ಇರುವ ಗುಣತ್ರಯ ವಿಭಾಗ ಯೋಗದಲ್ಲಿ ಮೊದಲ ಮೂರು ನಾಲ್ಕು ಶ್ಲೋಕಗಳಲ್ಲಿ ಪ್ರಕೃತಿ ಜೀವಿಗಳಿಗೆ ತಾಯಿಯಂತ ಹವಳೆಂದು ಹೇಳಿದ್ದಾರೆ. ಆಗ ಪ್ರಕೃತಿಯಿಂದ ತಯಾರಾದ ಶರೀರವನ್ನು ಸ್ತ್ರೀಗೆ ಹೋಲಿಸಬಹುದು. ಸ್ತ್ರೀ ಲಿಂಗವಾದ ಶರೀರವನ್ನು ಪುಲಿಂಗವಾದ ಕ್ಷರ ಪುರುಷನ ಸ್ಥಾನದಲ್ಲಿ ಹೇಳುವುದು ತಪ್ಪೆಂದು, ವಿಚಿತ್ರವಾಗಿ ಇರುತ್ತದೆಂದು ಆಲೋಚನೆ ಮಾಡದೇ, ಯಾರೋ ದೊಡ್ಡವರೆಂದು ಹೆಸರಿಟ್ಟುಕೊಂಡವರು ಬರೆದರೆ, ಸ್ವಲ್ಪವಾದರೂ ಆಲೋಚಿಸದೆ ಅದೇ ಸತ್ಯ, ನಿಮ್ಮದೇ ಅಸತ್ಯವೆಂದು ಪ್ರಶ್ನಿಸುವುದು ಹೇಗಿದೆಯೋ ನೀವೇ ಆಲೋಚಿಸಿರಿ. ಕ್ಷರ ಪುರುಷನು ಮೋಕ್ಷವನ್ನು ಹೊಂದಿದಾಗ ನಾಶವಾಗಿ ಹೋಗಿ ಪರಮಾತ್ಮನಾಗಿ ಬದಲಾಗುತ್ತಾನೆಂಬ ಉದ್ದೇಶದಿಂದ ಆ

ಮಾತನ್ನು ಕ್ಷರನು ಎಂದು ಹೇಳಿದ್ದಾರೆ ಹೊರತು ಬೇರೇ ಅರ್ಥವನ್ನು ತೆಗೆದುಕೊಳ್ಳಬಾರದು. ಶರೀರದಲ್ಲಿ ನಿವಾಸ ಮಾಡುವವನು ಕ್ಷರ ಪುರುಷನಾದ ಜೀವಾತ್ಮ, ಮರಣದಲ್ಲಿ ಶರೀರ ನಾಶವಾಗುತ್ತದೆ ಹೊರತು ಕ್ಷರ ಪುರುಷನಾದ ಜೀವಾತ್ಮ ನಾಶವಾಗುವುದಿಲ್ಲ. ಜೀವಾತ್ಮ, ಆತ್ಮಯಿಂದ ಬೇರೇ ಶರೀರವನ್ನು ಸೇರುತ್ತಿದ್ದಾನೆ. ಮರಣದಲ್ಲಿ ಶರೀರವು ನಾಶವಾದರೇ, ಮೋಕ್ಷದಲ್ಲಿ ಜೀವಾತ್ಮ ನಾಶವಾಗುತ್ತಾನೆ. ಈ ತಾರತಮ್ಯ ತಿಳಿಯದವರು ಜೀವಾತ್ಮವನ್ನು ಶರೀರ ಎನ್ನುವುದು ತಪ್ಪು.

ಮೂರು ಆತ್ಮಗಳನ್ನು ಮೂವರು ಪುರುಷರನ್ನಾಗಿ ಹೇಳಿದ್ದಾರೆ. ಇಬ್ಬರು ಪುರುಷರು ಒಂದು ಶರೀರದಲ್ಲಿ ಸ್ವಲ್ಪ ಕಾಲವಿದ್ದು, ನಂತರ ಜನನದಲ್ಲಿ ಹೊಸ ಶರೀರವನ್ನು ಸೇರಿ, ಮರಣದಿಂದ ಹಳೆಯ ಶರೀರವನ್ನು ಬಿಟ್ಟು ಹಾಕುತ್ತಿದ್ದಾರೆ. ಜೀವಾತ್ಮ ಶರೀರದಲ್ಲಿ ಒಂದು ಕಡೆ ಇರುವಾಗ. ಆತ್ಮ ಶರೀರವೆಲ್ಲಾ ವ್ಯಾಪಿಸಿ ಶರೀರಕ್ಕೆ ಅಧಿಪತಿಯಾಗಿದೆ. ಅಷ್ಟೇ ಅಲ್ಲದೆ ಶರೀರದಲ್ಲಿನ ಪ್ರತಿ ಕೆಲಸವನ್ನು ಆತ್ಮವೇ ಮಾಡುತ್ತಿದೆ. ಆತ್ಮ ಮಾಡುವ ಪ್ರತಿ ಕೆಲಸವನ್ನು ಪರಮಾತ್ಮ ನೋಡುತ್ತಿರುವಾಗ, ಜೀವಾತ್ಮ ಆ ಕೆಲಸದಲ್ಲಿನ ಕಷ್ಟ ಸುಖಗಳ ಅನುಭವಗಳನ್ನು ಅನುಭವಿಸುತ್ತಿದ್ದಾನೆ. ಪರಮಾತ್ಮ ಶರೀರದಲ್ಲಿ ಜೀವಾತ್ಮ ಆತ್ಮಗೆ ಸಾಕ್ಷಿಯಾಗಿರುತ್ತಾ ಶರೀರದ ಹೊರಗೆ ಅಣುವಣುವಿನಲ್ಲೂ ವ್ಯಾಪಿಸಿದೆ. ಆದ್ದರಿಂದ ಪರಮಾತ್ಮನನ್ನು ಸರ್ವವ್ಯಾಪಿ, ಸರ್ವದರ್ಶಿಯೆಂದು ಕರೆದಿದ್ದಾರೆ.

ತೆಲುಗು ಭಾಷೆಯಿಂದ ಆರಂಭವಾದ ಆತ್ಮಜ್ಞಾನವು ಕೊನೆಗೆ ಮೂವರು ಪುರುಷರವರೆಗೂ ಹರಡಿದೆ. ಆದರೆ ಮನುಷ್ಯರು ತೆಲುಗು ಭಾಷೆಯನ್ನು ಕಲಿತುಕೊಂಡಿದ್ದಾರೆ ಆದರೆ, ಅದರಲ್ಲಿ ನಿಕ್ಷಿಪ್ತವಾಗಿರುವ ಜ್ಞಾನವನ್ನು ತಿಳಿಯಲಾರದೆ ಹೋಗಿದ್ದಾರೆ. ಕೆಲವರು ತೆಲುಗು ಭಾಷೆಯಲ್ಲಿ ಪಂಡಿತರಾಗಿ ಹೆಸರು ಹೊಂದಿದರೂ, ಅವರಿಗೂ ಕೂಡಾ ಆತ್ಮ, ಪರಮಾತ್ಮರ ವಿಷಯ ತಿಳಿಯದ ಹಾಗೆ ಹೋಗಿದೆ. ತೆಲುಗು ಭಾಷೆ ಎರಡು ವಿಧಗಳಾಗಿದೆ. ಒಂದು

ಅಂಕಿಗಳಾಗಿ, ಎರಡು ಸಂಖ್ಯೆಗಳಾಗಿ. ತೆಲುಗು ಅಂಕಿಗಳನ್ನೇ ತೆಲುಗು ಅಕ್ಷರಗಳೆಂದು ಹೇಳಬಹುದು. ತೆಲುಗು ಅಂಕಿಗಳ ಮೂಲಕ ಅಂದರೆ ತೆಲುಗು ಅಕ್ಷರಗಳ ಮೂಲಕ ಆಧ್ಯಾತ್ಮಿಕ ಜ್ಞಾನವನ್ನು ತಿಳಿಯಲು ಸಾಧ್ಯವಾಯಿತು. ಹಾಗೆಯೇ ತೆಲುಗು ಸಂಖ್ಯೆಗಳ ಮೂಲಕ ಕೂಡ ಆಧ್ಯಾತ್ಮಿಕ ಜ್ಞಾನವನ್ನು ತಿಳಿಯುವುದಕ್ಕೆ ಅವಕಾಶ ಇರುವ ಹಾಗೆ ನಮ್ಮ ಹಿರಿಯರು ಸಂಖ್ಯೆಗಳನ್ನು ಜೋಡಿಸಿ ಇಟ್ಟಿದ್ದಾರೆ. ಇಲ್ಲಿಯವರೆಗು ತೆಲುಗು ಭಾಷೆಯಲ್ಲಿನ ಅಕ್ಷರ ಜ್ಞಾನವನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದೇವೆ. ಈಗ ಸಂಖ್ಯೆಗಳ ಜ್ಞಾನವನ್ನು ಕೂಡಾ ಹೇಗೆ ಇದೆಯೋ ಪರಿಶೀಲಿಸೋಣ.

ಈ ಪ್ರಪಂಚ ಇಲ್ಲದಿರುವಾಗ ಕೂಡಾ ದೇವರು ಇದ್ದಾನೆ. ಈಗಲೂ ಇದ್ದಾನೆ, ಆಗಲೂ ಇದ್ದಾನೆ. ಆದರೆ ಆತನು ಹೇಗಿರುವುದು ಯಾರಿಗೂ ತಿಳಿದಿಲ್ಲ. ಆತನು ಎಲ್ಲದಕ್ಕೂ ಅತೀತನು, ಯಾವುದಕ್ಕೂ ತಿಳಿಯುವವನು ಅಲ್ಲ. ಅಂತಹ ದೇವರು ತನ್ನ ಇರುವಿಕೆಯನ್ನು ಹೊರಗೆ ತಿಳಿಸಬೇಕೆಂದು ಕೊಂಡಿದ್ದಾನೆ. ಆಗ ಆತನ ಸಂಕಲ್ಪ ನಡೆಯುತ್ತಾ ಬಂದಿದೆ. ಯಾರಿಗೂ ತಿಳಿಯದ ಆದಿ ದೇವರು ಮೊದಲು ತನ್ನಿಂದ ಪ್ರಕೃತಿಯನ್ನು ಬಿಡುಗಡೆ ಮಾಡಬೇಕೆಂದುಕೊಂಡಿದ್ದಾನೆ. ನಂತರ ತಾನು ಸ್ವತಃವಾಗಿ ಮೂರು ಭಾಗಗಳಾಗಿ ತಿಳಿಯಬೇಕೆಂದುಕೊಂಡಿದ್ದಾನೆ. ನಂತರ ಹಾಗೆಯೇ ಪ್ರಕೃತಿಯನ್ನು ತಯಾರು ಮಾಡಿದ್ದಾನೆ. ನಂತರ ಕೂಡಲೇ ಮೂರು ಆತ್ಮಗಳನ್ನು ತಯಾರು ಮಾಡಿದ್ದಾನೆ. ತಿಳಿಯದ ದೇವರಿಂದ ತಿಳಿಯುವ ವಿಧವಾಗಿ ನಾಲ್ಕು ಭಾಗಗಳು ಬಂದಿವೆ. ಆ ನಾಲ್ಕರಲ್ಲಿ ಮೂರು ಪುರುಷತತ್ತ್ವ ಮತ್ತೊಂದು ಸ್ತ್ರೀ ತತ್ತ್ವವಾಗಿ ಇರುವ ಹಾಗೆ ಮಾಡಿದ್ದಾನೆ. ಇದರಿಂದ ದೇವರು ಎರಡು ವಿಧಗಳಾಗಿ ಹೊರಗೆ ತಿಳಿದಿದ್ದಾನೆ ಎಂದು ಹೇಳಬಹುದು.

ಈ ವಿಧವಾಗಿ ತಯಾರಾಗುವ ಮುನ್ನ ತಯಾರು ಆಗುವ ಅವುಗಳಿಗೆ ಅನುಗುಣವಾಗಿ ಕೆಲವು ಗುರುತುಗಳು ತಯಾರಾಗಿವೆ. ಆ ಗುರುತುಗಳನ್ನೇ

ಸಂಖ್ಯೆಗಳು ಎಂದು ಕರೆದಿದ್ದೇವೆ. ಹಾಗೆಯೇ ಮತ್ತೊಂದು ವಿಧವಾದ ಗುರುತುಗಳು ಕೂಡಾ ತಯಾರಾಗಿವೆ. ಅವುಗಳನ್ನು ಅಂಕಿಗಳು ಎಂದಿದ್ದಾರೆ. ಈ ವಿಧವಾಗಿ ದೇವರು ವ್ಯಕ್ತವಾಗುವ ಜ್ಞಾನವನ್ನು ತಿಳಿಸುವುದಕ್ಕೆ ದೇವರು ಏರ್ಪಡಿಸಿದ ಎರಡು ವಿಧಗಳ ಗುರುತುಗಳನ್ನೇ ಸಂಖ್ಯೆಗಳು, ಅಂಕಿಗಳು ಎಂದಿದ್ದಾರೆ. ಭೂಮಿ ಮೇಲೆ ದೇವರ ಜ್ಞಾನ ಸಂಖ್ಯೆಗಳು, ಅಂಕಿಗಳ ರೂಪದಲ್ಲಿ ತಯಾರಾಗಿದೆ. ಈ ಅಂಕಿಗಳು, ಸಂಖ್ಯೆಗಳನ್ನು ಸೇರಿಸಿ ಬ್ರಹ್ಮವಿದ್ಯಾ ಶಾಸ್ತ್ರ ಎಂದು ಅನ್ನುತ್ತೇವೆ. ಸಂಖ್ಯೆಗಳು, ಅಂಕಿಗಳ ರೂಪದಲ್ಲಿ ತಯಾರಾಗಿರುವುದೇ ಬ್ರಹ್ಮವಿದ್ಯಾ ಶಾಸ್ತ್ರ. ಈ ಬ್ರಹ್ಮವಿದ್ಯಾ ಶಾಸ್ತ್ರವನ್ನು ಅನುಸರಿಸಿ ದೇವರನ್ನು ಕಂಡುಕೊಳ್ಳುವ ಹಾಗೆ, ದೇವರನ್ನು ತಿಳಿಯುವ ಹಾಗೆ ಅವಕಾಶವನ್ನು ಕಲ್ಪಿಸಿದ್ದಾನೆ. ಈ ಗ್ರಂಥದ ಮೊದಲಿನಲ್ಲಿಯೇ ಮೊದಲು ತಯಾರಾದ ಅಂಕಿಗಳನ್ನು ತೋರಿಸಿ ಅವುಗಳಲ್ಲಿ ದೈವಜ್ಞಾನ ಅಡಗಿದೆಯೆಂದು ಹೇಳಿದ್ದೇವೆ. ಓಂ ಎನ್ನುವುದು ಪ್ರಥಮಾಕ್ಷರ ಅಂಕೆಗಳ ರೂಪದಲ್ಲಿರುವ ತೆಲುಗು ಭಾಷೆಯಾಗಿದೆ. ಇದಕ್ಕು ಮುನ್ನವೇ **"ಲು"** ಎಂಬ ಹೆಸರಿನಿಂದ ಒಂದು ಗ್ರಂಥವನ್ನು ಕೊಟ್ಟಿದ್ದೇವೆ. ಅದರಲ್ಲಿ ತೆಲುಗು ಎಂಬ ಪದದಲ್ಲಿ 'ಲು' ಎಂಬ ಅಕ್ಷರ ಎಷ್ಟು ಬೆಲೆಯುಳ್ಳದ್ದಾಗಿ ಇದೆಯೋ ಕೂಡಾ ಹೇಳಿದ್ದೇವೆ. ಆ ದಿನ ತೆಲುಗು ಭಾಷೆಯಾಗಿ ಗುರುತಿಸಲ್ಪಟ್ಟ ಗುರುತುಗಳಲ್ಲಿ ದೈವಜ್ಞಾನ ಅಡಗಿದೆಯೆಂದು ಹೇಳಿಕೊಂಡಿದ್ದೇವೆ.

ಅಂಕಿಗಳ ವಿಧಾನದಲ್ಲಿ ಓಮ್, ನ, ಮ, ಶಿ, ವಾ,ಯ ಅನ್ನುವ ಆರು ಅಕ್ಷರಗಳು ಮೊದಲು ತಯಾರಾಗಿವೆಯೆಂದು ಹೇಳಿದ್ದೇವೆ. ಯಾವ ವಿಧವಾಗಿ ಮೊದಲು ಓಮ್ ದೇವರ ಗುರುತಾಗಿ ಅಂಕಿಗಳಿಂದ ತಯಾರಾಗಿದೆಯೋ, ಅದೇ ವಿಧವಾಗಿ ಸಂಖ್ಯೆಗಳಲ್ಲಿ ಮೊದಲು ಪ್ರಕೃತಿ ಗುರುತಾಗಿ ಒಂದು ಚಿಹ್ನೆ ತಯಾರಾಗಿದೆ. ಅಂಕಿಗಳಲ್ಲಿ ಓಮ್ ದೇವರ ಗುರುತಾಗಿದ್ದು, ಸಂಖ್ಯೆಗಳಲ್ಲಿ ಮೊದಲು ಪ್ರಕೃತಿ ಗುರುತು ತಯಾರಾಗಿದೆ. ಇದನ್ನನುಸರಿಸಿ ದೇವರು ಸಂಪೂರ್ಣವಾಗಿ ತಿಳಿಯಬೇಕೆಂದರೇ ಪ್ರಕೃತಿಯನ್ನು ತಿಳಿದಾಗ ಅಸಲಾದ ದೇವರು ತಿಳಿಯಲ್ಪಡುತ್ತಾನೆ. ಆದ್ದರಿಂದ ದೇವರು ಎರಡು ವಿಧಗಳಾಗಿ ವ್ಯಕ್ತ

ಆಗಿದ್ದಾನೆ. ಅಂಕಿಗಳ ವಿಧಾನದಲ್ಲಿ ಭಾಷೆ ತಯಾರಾದರೆ ಅದರ ಹೆಸರು ತೆಲುಗು ಭಾಷೆಯೆಂದು ಹೆಸರಿಟ್ಟುಕೊಂಡಿದ್ದೇವೆ. ಆ ವಿಧವಾಗಿ ತೆಲುಗು ಎಂಬ ಹೆಸರು ಇಟ್ಟುಕೊಳ್ಳುವುದಕ್ಕೆ ಎಷ್ಟೋ ಅರ್ಥ ಇದೆಯೆಂದು ಇದಕ್ಕು ಮುನ್ನವೇ **"ಲು" "ತೆಲುಗು"** ಎಂಬ ಗ್ರಂಥದಲ್ಲಿ ಹೇಳಿಕೊಂಡಿದ್ದೇವೆ. ಈಗ ಎರಡನೇ ಪ್ರಕೃತಿ ವಿಧಾನದಲ್ಲಿ ಅಂದರೇ ಪ್ರಕೃತಿ ಕಡೆಯಿಂದ ನೋಡಿದರೆ ದೇವರು ಹೇಗೆ ತಿಳಿಯುತ್ತಾನೋ, ಸಂಖ್ಯೆಗಳ ಮೂಲಕ ವಿವರಿಸಿ ತಿಳಿದುಕೊಳ್ಳೋಣ.

ಇದೆಲ್ಲವೂ ಯಾವಾಗಲೋ ಸೃಷ್ಠಿ ಆದಿಯಲ್ಲಿ ನಡೆದಿದೆಯೆಂದು ನೀವೇ ಹೇಳುತ್ತಿದ್ದೀರ, ಆಗ ನಡೆದ ವಿಷಯವನ್ನು ಈಗ ನೀವು ಹೇಗೆ ತಿಳಿಸಲು ಸಾಧ್ಯ. ನೀವು ಹೇಳಿರುವುದೆಲ್ಲ ಅಭೂತಕಲ್ಪನೆ ಅಲ್ಲವೇ! ಎಂದು ಇತರರು ನನ್ನನ್ನು ಪ್ರಶ್ನಿಸುವುದಕ್ಕೆ ಅವಕಾಶವಿದೆ. ವಾಸ್ತವವೇ! ಯಾವಾಗಲೋ ನಡೆದಿರುವುದು, ಯಾರಿಗೂ ತಿಳಿಯದಿರುವುದು ನಿನಗೆ ಹೇಗೆ ತಿಳಿಯುತ್ತದೆ ನಾವೇತಕ್ಕೆ ನಂಬಬೇಕು ಎಂದು ಇತರರು ನನ್ನನ್ನು ಕೇಳುವುದರಲ್ಲಿ ನ್ಯಾಯವಿದೆ. ಇದೆಲ್ಲವೂ ಸೃಷ್ಠಿ ಆದಿಯಲ್ಲಿ ನಡೆದಿರುವುದೇ ಆ ದಿನ ನಾನು ಇಲ್ಲ ನೀನು ಇಲ್ಲ, ಯಾರೂ ಇಲ್ಲ. ಅಂತಹ ಸಮಯದಲ್ಲಿ ನಡೆದ ವಿಧಾನ ನನಗೇ ಅಲ್ಲ ಯಾರಿಗೂ ತಿಳಿಯುವುದಕ್ಕೆ ಅವಕಾಶವೇ ಇಲ್ಲ. ನನಗೆ ಯಾವುದೂ ತಿಳಿಯದೆಂದು ಪೂರ್ತಿಯಾಗಿ ಒಪ್ಪಿಕೊಳ್ಳುತ್ತಿದ್ದೇನೆ. ಆದರೂ ನನಗೆ ತಿಳಿಯ ದಿರುವುದನ್ನು ನಾನು ಹೇಳುವುದು ನನಗೂ ಕೂಡಾ ಆಶ್ಚರ್ಯವಾಗಿಯೇ ಇದೆ. ಈ ವಿಷಯವನ್ನು ನಾನು ನಂಬಬೇಕಾ ಇಲ್ಲವಾ ಎಂಬ ಸಂಶಯ ಕೂಡಾ ಒಂದು ಸಲ ಬಂದಿದೆ. ಆದರೂ ಇದೆಲ್ಲವೂ ಪೂರ್ತಿ ಸತ್ಯವೆಂದು ನಂಬುತ್ತಿದ್ದೇನೆ. ನಿಮ್ಮನ್ನು ನಂಬಿರೆಂದು ನಾನು ಹೇಳುತ್ತಿಲ್ಲ. ಮೊದಲು ನೀವು ಇದು ನಂಬುವಂತಹ ವಿಷಯವಾ ಅಲ್ಲವಾ! ಎಂದು ಆಲೋಚಿಸಿರಿ. ನಿಮ್ಮ ಆಲೋಚನೆಯಲ್ಲಿ ನಂಬಬಹುದು ಎಂದು ತಿಳಿದರೇ ನಂಬಿರಿ ಇಲ್ಲದಿದ್ದರೆ ನಂಬಬೇಡಿ. ನಾನು ಬಲವಂತ ಮಾಡಿ ನೀವು ನಂಬಿರೆಂದು ಹೇಳುತ್ತಿಲ್ಲ.

ದ್ವಿತೀಯ ದೈವಗ್ರಂಥ ಇಂಜೀಲು (ಬೈಬಲ್) ನಲ್ಲಿ ಮತ್ತಾಯ ಸುವಾರ್ತೆ 10ನೇ ಅಧ್ಯಾಯದಲ್ಲಿ 20ನೇ ವಚನದಲ್ಲಿ ಈ ವಿಧವಾಗಿ ಇದೆ.


**ಮತ್ತಾಯ 10–20 "ನಿಮ್ಮ ತಂದೆ ಆತ್ಮ ನಿಮ್ಮಲ್ಲಿದ್ದು ಮಾತನಾಡುತ್ತಿದ್ದಾನೇ ಹೊರತು ಮಾತನಾಡುವವರು ನೀವು ಅಲ್ಲ"**

ಎಂದು ಇದೆ. ಈ ವಾಕ್ಯವನ್ನನುಸರಿಸಿ ಯಾವ ಮನುಷ್ಯ ಸ್ವತಃವಾಗಿ ಮಾತನಾಡುತ್ತಿಲ್ಲವೆಂದು, ಆತ್ಮ ಮಾತನಾಡಿಸಿದರೇನೆ ಮಾತನಾಡುತ್ತಿದ್ದಾ ನೆಂದು ತಿಳಿಯುತ್ತಿದೆ. ಹಾಗೇ ಅಂತಿಮ ದೈವಗ್ರಂಥ ಖುರ್‌ಆನ್‌ನಲ್ಲಿ **"ನಿಮ್ಮ ಶರೀರದಲ್ಲಿ ನಾನು ಕಾರ್ಯಕರ್ತನಾಗಿ ಇದ್ದೇನೆಂದು, ಎಲ್ಲಾ ಕೆಲಸಗಳು ನಾನೇ ಮಾಡುತ್ತಿದ್ದೇನೆಂದು"** ಸೂರಾ 2, ಆಯತ್ 255 ರಲ್ಲಿಯು ಮತ್ತು ಸೂರಾ 6, ಆಯತ್ 102 ರಲ್ಲಿಯು ಇನ್ನು ಬಹಳ ಕಡೆ ಹೇಳಿದ್ದಾರೆ. ಭಗವದ್ಗೀತೆಯಲ್ಲಿ ಕೂಡಾ **"ನೀನು ಏನೂ ಮಾಡುತ್ತಿಲ್ಲ, ಎಲ್ಲಾ ನಾನೇ ಮಾಡುತ್ತಿದ್ದೇ ನೆಂದು"** ಹೇಳಿದ್ದಾನೆ. ಇದನ್ನನುಸರಿಸಿ ನನಗೆ ತಿಳಿಯದ ವಿಷಯ ನನ್ನೊಳಗಿನಿಂದ ಹೇಳಲ್ಪಟ್ಟರೂ ಅದು ನಾನು ಹೇಳುವುದು ಅಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಶರೀರದಲ್ಲಿನ ದೇವರು ಹೇಳಿರುವುದು ಸತ್ಯವೇ ಯೆಂದು ನಾನು ಪೂರ್ತಿಯಾಗಿ ನಂಬುತ್ತಿದ್ದೇನೆ. ನಿಮ್ಮ ವಿಷಯ ನನಗೆ ತಿಳಿಯದು.

ಆಧ್ಯಾತ್ಮಿಕವನ್ನು ಅಂದರೇ ಆತ್ಮ ವಿಧಾನವನ್ನು ತಿಳಿಯುವುದಕ್ಕೆ ಸ್ವಲ್ಪ ಪ್ರಕೃತಿಯನ್ನು ಕೂಡಾ ತಿಳಿಯಬೇಕಾಗಿದೆ. ಆತ್ಮ ಪುರುಷನು ಅನ್ನುವುದಕ್ಕೆ ಸ್ತ್ರೀ ಇದ್ದಾಗಲೇ ಹಾಗೆ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸ್ತ್ರೀ ತತ್ತ್ವವಾದ ಪ್ರಕೃತಿಯನ್ನು ದೇವರು ತಯಾರು ಮಾಡಿ, ಪುರುಷ ತತ್ತ್ವವಾದ ಆತ್ಮನನ್ನು


ತಯಾರು ಮಾಡಿದ್ದಾನೆ. ದೇವರ ನಿರ್ಣಯದ ಪ್ರಕಾರ ಪ್ರಪಂಚ ತಯಾರಾಗಿದೆ. ಪ್ರಪಂಚದಲ್ಲಿ ಆತ್ಮಗೆ ಗುರುತಾಗಿ ಪುರುಷರು, ಪ್ರಕೃತಿಗೆ ಗುರುತಾಗಿ ಸ್ತ್ರೀಯರು ಕಾಣಿಸುತ್ತಿದ್ದಾರೆ. ಪ್ರಕೃತಿಗು ಆತ್ಮಗು ತಯಾರಾದವೇ ಜೀವರಾಶಿಗಳೆಂದು ಹೇಳಬಹುದು. ಅಂದರೇ ಸ್ತ್ರೀ ತತ್ತ್ವದಿಂದ ಮತ್ತು ಪುರುಷತತ್ತ್ವದಿಂದ ಸರ್ವ ಜೀವರಾಶಿಗಳು ತಯಾರಾಗಿವೆ. ಅದೇ ಈ ದಿನ ಕಾಣಿಸುವ ಜೀವರೂಪ ವಾದ ವಿಶ್ವ. ಸ್ತ್ರೀಯರು ಪ್ರಕೃತಿಗೆ ಗುರುತಾಗಿದ್ದು, ಪುರುಷರು ಆತ್ಮಗೆ ಗುರುತಾಗಿದ್ದು ಪ್ರಕೃತಿ ಪುರುಷರಿಂದ ಹುಟ್ಟಿದ ಜೀವಿಗಳ ಗುರುತಾಗಿ ನಪುಂಸಕ ರನ್ನು ದೇವರು ತಯಾರು ಮಾಡಿಟ್ಟಿದ್ದಾನೆ. ತಾಯಿ ತಂದೆಗೆ ಹುಟ್ಟಿದ ವ್ಯಕ್ತಿಯಲ್ಲಿ ತಾಯಿ ಹೋಲಿಕೆಗಳು ಕೆಲವು, ತಂದೆ ಹೋಲಿಕೆಗಳು ಕೆಲವು ಇರುವುದು ನೋಡುತ್ತಿದ್ದೇವೆ. ಹಾಗೆಯೇ ಪ್ರಕೃತಿ ಪುರುಷರಿಗೆ ಹುಟ್ಟಿದ ಜೀವಿಗೆ ಗುರುತಾಗಿ ಸ್ವಲ್ಪ ಸ್ತ್ರೀ, ಸ್ವಲ್ಪ ಪುರುಷ ಲಕ್ಷಣಗಳಿರುವ ನಪುಂಸಕನನ್ನು ದೇವರು ತೋರಿಸುವುದು ನಡೆದಿದೆ. ನಪುಂಸಕನು ಜೀವಿಗೆ ಗುರುತಾಗಿದ್ದು, ಸ್ತ್ರೀ ಪ್ರಕೃತಿಗೆ ಗುರುತಾಗಿದ್ದು, ಪುರುಷನು ಆತ್ಮಗೆ ಗುರುತಾಗಿದ್ದಾನೆ. ಪ್ರಕೃತಿಗಿಂತಲೂ ದೇವರಾದವನೇ ದೊಡ್ಡವನೆಂದು ತಿಳಿಯುವ ಹಾಗೆ ಸ್ತ್ರೀ ಶರೀರ ಬಲದಲ್ಲಿ ಕಡಿಮೆ ಇದ್ದರೆ, ಪುರುಷ ಶರೀರ ಬಲದಲ್ಲಿ, ಆಕಾರದಲ್ಲಿ ಕೂಡಾ ದೊಡ್ಡದಾಗಿ ದೃಢವಾಗಿರುತ್ತದೆ. ಸ್ತ್ರೀಯರ ಶರೀರಗಳು ಪುರುಷನಿಗಿಂತಲೂ ಆಕಾರದಲ್ಲಿ ಬಲಹೀನವಾಗಿರುತ್ತವೆ. ಪ್ರಕೃತಿ ಪುರುಷರಿಗೆ (ಆತ್ಮಗೆ) ಹುಟ್ಟಿದ ನಪುಂಸಕನು ಮಧ್ಯರಕವಾಗಿ ಇರುವುದು ಕೂಡಾ ನೋಡುತ್ತಿದ್ದೇವೆ. ಇದೆಲ್ಲಾ ಹೊರಗೆ ಕಾಣಿಸುವ ವಿಧಾನ. ಕಾಣಿಸದ ವಿಧಾನವನ್ನು ಸೃಷ್ಠಿ ಆದಿಯಲ್ಲಿ ನಡೆದ ಬದಲಾವಣೆಯನ್ನು ನೋಡಿದರೇ, ಅಂಕಿಗಳ ವಿಧಾನ ಒಂದು ಭಾಷೆಯಾಗಿ ಏರ್ಪಟ್ಟಿದೆ. ಹಾಗೆಯೇ ಭಾಷೆಯಲ್ಲಿನ ಭಾಗವಾಗಿ ಸಂಖ್ಯೆಗಳ ವಿಧಾನ ಕೂಡಾ ಏರ್ಪಟ್ಟಿದೆ. ಅದನ್ನು ಈಗ ತಿಳಿದುಕೊಳ್ಳೋಣ.

ಆದಿಯಲ್ಲಿನ ಕಾಣಿಸದ ದೇವರು ಮೊದಲು ಪ್ರಕೃತಿ ವಿಧಾನವನ್ನು ತೋರಿಸುತ್ತಾ ಒಂದೇ ಗೆರೆ ದುಂಡನೆಯ ವಲಯವಾಗಿ ಇರುವಂತೆ ತೋರಿಸಿದ್ದಾನೆ. ಅದರ ಆಕಾರ ಕೆಳಗಿನ ಚಿತ್ರದಲ್ಲಿ ಇದೆ.




ಪ್ರಕೃತಿಯನ್ನು ಗುರುತಾಗಿ ತೋರಿಸುತ್ತಾ ಒಂದು ವಲಯಾಕಾರವನ್ನು ದೇವರು ತಯಾರು ಮಾಡಿದ್ದಾನೆ. ಆ ವಲಯ ಯಾವ ಕಡೆ ನೋಡಿದರೂ ಐದು ಗೆರೆಗಳು ಇರುವ ಹಾಗೆ ತಿಳಿಯುತ್ತಿದೆ. ಇದನ್ನು ಅನುಸರಿಸಿ ಪ್ರಕೃತಿ ಐದು ಭಾಗಗಳಾಗಿ ಇದೆಯೆಂದು ತಿಳಿಯುತ್ತಿದೆ. ಪ್ರಕೃತಿಯ ಐದು ಭಾಗಗಳಿಗು ಐದು ವಲಯಗಳು ಇವೆಯೆಂದು ಅರ್ಥವಾಗುತ್ತಿದೆ. ನಂತರ ಪ್ರಕೃತಿಯಿಂದ ಅಂದರೇ ಸ್ತ್ರೀ ಯಿಂದಲೇ ತಯಾರು ಆಗಬೇಕೆಂದು ಅಥವಾ ಹುಟ್ಟುತ್ತಿವೆಯೆಂದು

ತಿಳಿಯುವ ಹಾಗೆ ಆ ವಲಯದಲ್ಲಿನ ಎರಡು ಗುರುತುಗಳ ಎರಡು ರೇಖೆಗಳನ್ನು ತೆಗೆದುಕೊಂಡು ಒಂದು ದುಂಡನೆ ಆಕಾರವಾಗಿ ತಯಾರು ಮಾಡಿದ್ದಾನೆ. ನಂತರ ಎರಡು ಗುರುತುಗಳ ರೇಖೆಗಳನ್ನು ಸೇರಿಸಿ ದುಂಡನೆಯ ಆಕಾರವನ್ನು ತಯಾರು ಮಾಡಿದ್ದಾನೆ. ಉಳಿದ ಒಂದು ದುಂಡನೆಯ ಗುರುತನ್ನು ಅರ್ಧ ದುಂಡನೆ ಆಕಾರವಾಗಿ ತಯಾರು ಮಾಡಿದ್ದಾನೆ. ಎರಡು ದುಂಡನೆಯ ರೇಖೆಗಳನ್ನು ಹೀಗೆ ಒಂದು ದುಂಡನೆ ಆಕಾರವಾಗಿ ತಯಾರು ಮಾಡಿದ್ದಾನೆ ಅದು ಅರ್ಥವಾಗುವುದಕ್ಕೆ ಚಿತ್ರ ರೂಪದಲ್ಲಿ ನೋಡೋಣ.





ಈ ವಿಧವಾಗಿ ನಾಲ್ಕು ಗುರುತುಗಳ ರೇಖೆಗಳನ್ನು, ಎರಡು ದುಂಡನೆ ಆಕಾರಗಳಾಗಿ ತಯಾರು ಮಾಡಿದ್ದಾನೆ. ಸ್ತ್ರೀ ಯಿಂದಲೇ ಪುರುಷನು ಹುಟ್ಟುತ್ತಿದ್ದಾನೆನ್ನುವುದಕ್ಕೆ ಗುರುತಾಗಿ ಪ್ರಕೃತಿಯಂತೆ ತೋರಿಸಿದ ಐದು ವಲಯಗಳಿಂದ ನಾಲ್ಕು ವಲಗಳೊಂದಿಗೆ ತಯಾರಾದ ಎರಡು ದುಂಡನೆ ಭಾಗಗಳನ್ನು ಎರಡು ಆತ್ಮಗಳಾಗಿ ಹೋಲಿಸಿ ಹೇಳಿದ್ದಾನೆ. ನಂತರ ಉಳಿದ

ಒಂದು ವಲಯವನ್ನು ತೆಗೆದು ಅರ್ಧ ಸೊನ್ನೆಯಾಗಿ ತೋರಿಸಿದ್ದಾನೆ. ಅದು ಹೀಗೆ ಇದೆ.




ಈ ವಿಧವಾಗಿ ತಯಾರಾದ ಅರ್ಧ ಸೊನ್ನೆಯನ್ನು ಎರಡು ಸೊನ್ನೆಗಳ ಪಕ್ಕದಲ್ಲಿ ಇಟ್ಟಿದ್ದಾನೆ. ಆಗ ಹೀಗೆ ಕಾಣಿಸುತ್ತಾ ಇದೆ.




ಈ ವಿಧವಾಗಿ ಮೂರು ಸಂಖ್ಯೆಗಳು ತಯಾರಾಗಿವೆ. ಆ ಮೂರು ಸಂಖ್ಯೆಗಳನ್ನು ಕೂಡಿಸಿ ನೋಡಿದಾಗ ಅದೇ ಶತವಾಗಿ (ನೂರಾಗಿ) ತಯಾರಾಗಿದೆ. ಸಂಖ್ಯೆಗಳಲ್ಲಿ ಒಂದು ಅದರ ಪಕ್ಕದಲ್ಲಿ ಎರಡು ಸೊನ್ನೆಗಳನ್ನು ಇಟ್ಟರೆ ನೂರು ಎಂದು ಕರೆಯುತ್ತೇವೆ. ಹಾಗೆಯೇ ಶತ ಎಂದು ಕೂಡಾ ಅನ್ನುತ್ತೇವೆ. ಅಂಕಿಗಳು

ಬ್ರಹ್ಮವಿದ್ಯಾ ಶಾಸ್ತ್ರವಾಗಿ ತಯಾರಾದರೆ, ಅದರಲ್ಲಿನ ಭಾಗವಾಗಿ ಸಂಖ್ಯಾಶಾಸ್ತ್ರ ತಯಾರಾಗಿದೆ.





1) ಆಕಾಶ 2) ಗಾಳಿ 3) ಅಗ್ನಿ 4) ನೀರು 5) ಭೂಮಿ. ಒಂದನೇ ನಂಬರು ಆಕಾಶ ಮೇಲೆ ಇರುವಾಗ, ಅದರ ಕೆಳಗೆ ಎರಡನೇ ನಂಬರ್ ಗಾಳಿ ಇದೆ. ಗಾಳಿ ಕೆಳಗೆ ಮೂರನೇ ನಂಬರ್ ಅಗ್ನಿ ಇದೆ. ಅದರ ಕೆಳಗೆ ನಾಲ್ಕನೆ ನಂಬರ್ ನೀರು ಇದೆ. ಅದರ ಕೆಳಗೆ ಐದನೆ ನಂಬರ್ ಭೂಮಿ ಇದೆ. ಕೆಳಗೆ ಭೂಮಿ ಇರುವಾಗ ಭೂಮಿ ಮೇಲೆ ನೀರು ಕೆರೆಗಳ ರೂಪದಲ್ಲಿ, ನದಿಗಳ ರೂಪದಲ್ಲಿ, ಸಮುದ್ರಗಳ ರೂಪದಲ್ಲಿ ಇರುವುದು ನೋಡುತ್ತಲೇ ಇದ್ದೇವೆ. ಈ ವಿಧವಾಗಿ ಒಂದರ ನಂತರ ಒಂದು ಇರುವಾಗ ಕೊನೆಯಲ್ಲಿ

ಆಕಾಶ ಇದೆ. ಇದನ್ನೇ ಪ್ರಕೃತಿ ಗುರುತಾಗಿ ದೇವರು ವಲಯವನ್ನು ತಯಾರು ಮಾಡಿ, ಆ ವಲಯಗಳಿಂದ ತೆಗೆದುಕೊಂಡ ಗೆರೆಗಳಿಂದ ೧೦೦ ಅನ್ನು ತಯಾರು ಮಾಡಿದ್ದಾನೆ.




ಈ ವಿಧವಾಗಿ ಪ್ರಕೃತಿಯಿಂದ ಮೂವರು ಪುರುಷರು ತಯಾರಾದಂತೆ ಸೂಚಿಸಿದ್ದಾರೆ. ಇಲ್ಲಿ ಮೂರು ಗುರುತುಗಳನ್ನು ಪಕ್ಕ ಪಕ್ಕದಲ್ಲಿ ಬರೆದರೆ



ಶತವಾಗಿ ಕಾಣಿಸುತ್ತಿದೆ. ಅಂದರೇ ಜೀವಾತ್ಮ, ಅದರ ಪಕ್ಕದಲ್ಲಿ ಆತ್ಮ, ಅದರ ಪಕ್ಕದಲ್ಲಿ ಪರಮಾತ್ಮ ಇರುವಂತೆ ತಿಳಿಯುತ್ತಿದೆ. ಈ ವಿಧವಾಗಿ ಶತ ಎಂಬ ಮೂರು ಸಂಖ್ಯೆಗಳಿಂದ ಮೂರು ಆತ್ಮಗಳನ್ನು ಗುರುತಿಸಬಹುದು. ಎರಡು ಸೊನ್ನೆಗಳು ಸಂಪೂರ್ಣವಾಗಿದ್ದು ಆತ್ಮ ಪರಮಾತ್ಮನಾಗಿ ಇರುವಾಗ, ಅರ್ಧ ಸೊನ್ನೆ ಎರಡು ಆತ್ಮಗಳಿಗಿಂತಲೂ ಕಡಿಮೆಯದೆನ್ನುವಂತೆ ಅದೇ ಜೀವಾತ್ಮ ಎಂದು ತಿಳಿಯುವ ಹಾಗೆ ಜ್ಞಾನಿಗಳು ಸಂಖ್ಯಾಶಾಸ್ತ್ರವನ್ನು ತಯಾರು ಮಾಡಿ ಶತವನ್ನು ತೋರಿಸಿದ್ದಾರೆ. ಸಂಖ್ಯಾಶಾಸ್ತ್ರ ಬ್ರಹ್ಮವಿದ್ಯಾ ಶಾಸ್ತ್ರಕ್ಕೆ ಅನುಬಂಧವಾಗಿದೆ. ಸಂಖ್ಯಾ ಶಾಸ್ತ್ರವನ್ನೇ ಈ ದಿನ ಗಣಿತ ಶಾಸ್ತ್ರ ಎಂದು ಕೂಡಾ ಕರೆಯುತ್ತಿದ್ದೇವೆ. ಈ ಗಣಿತದಲ್ಲಿ ಜೀವಾತ್ಮಗು, ಆತ್ಮಗು, ಪರಮಾತ್ಮಗು ಗುರುತಾಗಿರುವ ಸಂಖ್ಯೆಗಳು ಕೂಡಾ ಇವೆ. ಅವುಗಳನ್ನು ಇನ್ನೊಂದು ಪದ್ಧತಿಯಲ್ಲಿ ಅರ್ಥ ಮಾಡಿಕೊಳ್ಳೋಣ.

ಮೂರು ಆತ್ಮಗಳ ಸಿದ್ಧಾಂತವೇ ತ್ರೈತ ಸಿದ್ಧಾಂತ. ಆ ತ್ರೈತ ಸಿದ್ಧಾಂತಕ್ಕೆ ಗುರುತಾಗಿ ಮೂರು ಸಂಖ್ಯೆಗಳ ಗುರುತನ್ನು ಹಿರಿಯರು ನಿರ್ಣಯಿಸುವುದು ನಡೆದಿದೆ. ಜೀವಾತ್ಮನಾಗಿರುವ ನಾವು ದೇವರಾಗಿರುವ ಆತ್ಮನನ್ನು, ಆತ್ಮ ದೇವರನ್ನು ಸೃಷ್ಟಿಸಿದ ಪರಮಾತ್ಮನನ್ನು ತಿಳಿಯಬೇಕಾಗಿದೆ. ಆದರೂ ಅವರು ತಿಳಿಯಲ್ಪಡ ದವರಾಗಿ ಇದ್ದಾರೆ. ತಿಳಿಯಲ್ಪಡದವರಾಗಿ ಇರುವುದರಿಂದ ಅವರಿಬ್ಬರನ್ನು ಎರಡು ಸೊನ್ನೆಗಳಾಗಿ ತೋರಿಸಿ, ತಿಳಿಯಬೇಕಾದ ಜೀವಿಯನ್ನು ಅರ್ಧ

ಸೊನ್ನೆಯಾಗಿ ತೋರಿಸುವುದಾಗಿದೆ. ಈ ವಿಧವಾಗಿ ತೋರಿಸಿದ ಮೂರು ಸಂಖ್ಯೆಗಳ ಗುರುತನ್ನು ಮೂರು ಅಕ್ಷರಗಳ ಶತವಾಗಿ ಹೇಳುವುದಾಗಿದೆ. ಮೂರು ಸಂಖ್ಯೆಗಳು ಮೂರು ಆತ್ಮಗಳಿಗೆ ಗುರುತುಗಳಾಗಿ ಹೇಳಿದ್ದಾರೆ ಕೆಳಗೆ ನೋಡಿರಿ.




ಹೀಗೆ ಮೂರು ಗುರುತುಗಳನ್ನು ಜೀವಾತ್ಮ, ಆತ್ಮ, ಪರಮಾತ್ಮನಾಗಿ ತೋರಿಸುವುದೇ ಅಲ್ಲದೆ ಪೂರ್ತಿ ವಿವರವಾಗಿ ಸಂಖ್ಯೆಗಳಲ್ಲಿ ಇದಕ್ಕೂ ಮುನ್ನವೇ 3, 6, 9 ಎಂದು ಹೇಳಿದ್ದೇವೆ. 3, 6, 9 ತೆಲುಗು ಭಾಷೆ ಅಲ್ಲ ಇವು ಆಂಗ್ಲ ಭಾಷೆ ಸಂಖ್ಯೆಗಳು. ತೆಲುಗು ಭಾಷೆಯಲ್ಲಿ 3, 6, 9 ಪ್ರತ್ಯೇಕವಾಗಿ ಇರುತ್ತಾ, ಪ್ರತ್ಯೇಕವಾದ ಜ್ಞಾನವನ್ನು ಬೋಧಿಸುತ್ತಿವೆ. ಆಂಗ್ಲ ಭಾಷೆಯಲ್ಲಿರುವ 3, 6, 9 ಸಂಖ್ಯೆಗಳನ್ನು ತೆಲುಗಿನಲ್ಲಿ (ಕನ್ನಡದಲ್ಲಿ) ಬರೆದುಕೊಂಡರೆ **౩౬౯** ಎಂದು ಇದೆ. ತೆಲುಗು ಭಾಷೆಯಲ್ಲಿ ಸಂಖ್ಯೆಗಳನ್ನು ಬರೆದುಕೊಂಡರೆ **౧౨౩౪౫౬౭౮౯౧౦** ಎಂದು ಬರೆಯಬಹುದು. ಇಂಗ್ಲೀಷ್ ಭಾಷೆಯಲ್ಲಿ ಸಂಖ್ಯೆಗಳಿಗಿಂತಲೂ ತೆಲುಗು ಭಾಷೆಯಲ್ಲಿನ ಸಂಖ್ಯೆಗಳು ವಿಶೇಷ ಅರ್ಥ ಹೊಂದಿವೆ. **౧౨౩౪౫౬౭౮౯౧౦** ಇದರಲ್ಲಿ ಮೊದಲ ಎರಡು ಸಂಖ್ಯೆಗಳನ್ನು ಬಿಟ್ಟು ನೋಡಿದರೆ ಮೂರು ಇದೆ. ನಂತರ ಎರಡು ಸಂಖ್ಯೆಗಳನ್ನು ಬಿಟ್ಟು ನೋಡಿದರೆ ಆರು ಇದೆ. ಅದರ ನಂತರ ಎರಡು ಸಂಖ್ಯೆಗಳನ್ನು ಬಿಟ್ಟು ನೋಡಿದರೆ ಒಂಭತ್ತು ಇದೆ. ಮೂರು ಸಂಖ್ಯೆಯನ್ನು ಜೀವಾತ್ಮವಾಗಿ, ಆರು ಸಂಖ್ಯೆಯನ್ನು ಆತ್ಮವಾಗಿ, ಒಂಭತ್ತು ಸಂಖ್ಯೆಯನ್ನು ಪರಮಾತ್ಮವಾಗಿ ಹೇಳಿಕೊಂಡಿದ್ದೇವೆ.

**೩೬೯** ಎಂದರೇ ಜೀವಾತ್ಮಗೆ ಗುರುತಾಗಿ, **೯೬೩** ಎಂದರೇ ಪರಮಾತ್ಮಗೆ ಗುರುತಾಗಿ ಹೇಳಿಕೊಂಡಿದ್ದೇವೆ. ಅಷ್ಟೇ ಅಲ್ಲದೆ **೬೬೬** ಅನ್ನು ಮಾಯೆಗೆ ನಂಬರಾಗಿ, **೯೬೩** ಅನ್ನು ಸೃಷ್ಠಿಕರ್ತ ಗುರುತಾಗಿ ಹೇಳಿಕೊಂಡಿದ್ದೇವೆ. ಅಷ್ಟೇ ಅಲ್ಲದೆ ಎಲ್ಲದಕ್ಕೂ ಮಧ್ಯದಲ್ಲಿರುವ ಆರನ್ನು ಆರಾಧ್ಯ ದೈವವಾದ ದೇವರು ಎಂದು ಅಂದರೇ ಆತ್ಮ ಎಂದು ಹೇಳಿಕೊಂಡಿದ್ದೇವೆ. ಈ ವಿಧವಾಗಿ ಗಣಿತದಲ್ಲಿರುವ ಸಂಖ್ಯೆಗಳನ್ನು ಆಧ್ಯಾತ್ಮಿಕದೊಂದಿಗೆ ಹೋಲಿರುವಂತೆ ನಮ್ಮ ಹಿರಿಯರು ಜೋಡಿಸಿ ಏರ್ಪಡಿಸಿದ ಸಂಖ್ಯಾಶಾಸ್ತ್ರವಾದ ಗಣಿತ ಶಾಸ್ತ್ರವನ್ನು ತಯಾರು ಮಾಡಿದ್ದಾರೆ.

ಈ ಗ್ರಂಥದೊಂದಿಗೆ **"ದೇವರ ಗುರುತು 963"** ಎನ್ನುವ ಗ್ರಂಥವನ್ನು ಓದಿದರೆ ಇಲ್ಲಿ ಹೇಳಿದ ಜ್ಞಾನ ಕೂಡಾ ಚೆನ್ನಾಗಿ ಅರ್ಥವಾಗುತ್ತದೆ. ಹಾಗೆಯೇ **"ಲು", "ತೆಲುಗು"** ಎನ್ನುವ ಗ್ರಂಥವನ್ನು ಓದಿದರೇ ತೆಲುಗು ಭಾಷೆಯ ಹಿರಿಮೆ ಪೂರ್ತಿಯಾಗಿ ತಿಳಿಯಬಲ್ಲದು. ಈ ಎರಡು ಗ್ರಂಥಗಳು ಗತದಲ್ಲಿ ನಮ್ಮಿಂದ ಬರೆಯಲ್ಪಟ್ಟಿರುವವೇ ಎಂದು ಹೇಳುತ್ತಿದ್ದೇವೆ.

**ಪ್ರಶ್ನೆ :- ನೀವು ದೈವಜ್ಞಾನವೆಂದು, ಆಧ್ಯಾತ್ಮಿಕ ಜ್ಞಾನವೆಂದು ಎಷ್ಟೋ ವಿಧಗಳಲ್ಲಿ ಅರ್ಥವಾಗುವಂತೆ ಪೂರ್ತಿ ವಿಶಧೀಕರಿಸಿ ಹೇಳುತ್ತಿದ್ದೀರಿ. ಆದರೇ ಕೆಲವರು ಪೂರ್ತಿ ಧನ, ಪೂರ್ತಿ ಅಧಿಕಾರ ಇಲ್ಲದಿದ್ದರೂ ಸ್ವಲ್ಪಮಟ್ಟಿನ ಧನ, ಸ್ವಲ್ಪಮಟ್ಟಿನ ಅಧಿಕಾರ ಇರುವ ಚಿಕ್ಕ ಉದ್ಯೋಗಗಳು ಮಾಡುವವರು ಕೂಡಾ ನಿಮ್ಮನ್ನು ಅವಹೇಳನವಾಗಿ ಮಾತನಾಡುತ್ತಾ, ಜ್ಞಾನ ಎಂಬ ಹೆಸರಿನಿಂದ ಅಮಾಯಕರನ್ನು ಮೋಸ ಮಾಡುತ್ತಿದ್ದಾರೆ ಎಂದು ಅನ್ನುತ್ತಿದ್ದಾರೆ. ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಚಿಕ್ಕ ಉದ್ಯೋಗಗಳಾದ S.I, C.I ಗಳಾಗಿದ್ದು ಸ್ವಲ್ಪಮಟ್ಟಿನ ಅಧಿಕಾರದಿಂದಲೇ ಎಷ್ಟೋ**

**ದೊಡ್ಡ ಯೋಗೀಶ್ವರರಾದ ನಿಮ್ಮಂತವರನ್ನು ಕೂಡಾ ಲೆಕ್ಕ ಮಾಡದೆ, ಸ್ವಲ್ಪವಾದರೂ ಗೌರವವನ್ನು ಕೂಡಾ ಕೊಡದೇ ಅವನು ಇವನು ಎಂದು ಮಾತನಾಡುತ್ತಿದ್ದಾರೆ. ನಿಮ್ಮಂತವರ ಹತ್ತಿರ ಜ್ಞಾನವನ್ನು ತಿಳಿದುಕೊಳ್ಳುವವರನ್ನು ನೋಡಿ, ನೀವು ಇಷ್ಟು ಟೆಕ್ನಾಲಜಿ ಅಭಿವೃದ್ಧಿಯಾದ ಕಾಲದಲ್ಲಿ ಕೂಡಾ ಹಿಂದಕ್ಕೆ ಪ್ರಾಚೀನಕಾಲಕ್ಕೆ ಹೋಗುತ್ತಾ, ದೇವರು, ಜ್ಞಾನ ಎನ್ನುತ್ತಿದ್ದೀರಿ. ನಿಮ್ಮಂತವರು ಜ್ಞಾನ ಎನ್ನುತ್ತಾ ಇತರರ ಹತ್ತಿರ ಮೋಸ ಹೋಗುತ್ತಿದ್ದೀರ ಎಂದು ಜ್ಞಾನ ತಿಳಿದುಕೊಳ್ಳುತ್ತಿರುವ ವರನ್ನು ಕೀಳಾಗಿ ಮಾತನಾಡುತ್ತಿದ್ದಾರೆ. ಅವರು ಮಾತನಾಡುವ ಮಾತುಗಳನ್ನು ನೋಡಿದರೆ ಜ್ಞಾನಿಗಳು ತಲೆತಗ್ಗಿಸಿಕೊಳ್ಳಬೇಕಾಗಿ ಬರುತ್ತಿದೆ. ಇಂತವರನ್ನು ಕುರಿತು ನೀವು ಏನು ಹೇಳುತ್ತೀರಾ?**

**ಉತ್ತರ :–** ಈ ವಿಧವಾಗಿ ಮಾತನಾಡುವವರು ತ್ರೇತಾಯುಗದಿಂದ ಕಾಣಿಸುತ್ತಲೇ ಇದ್ದಾರೆ. ಪ್ರತಿಯೊಂದನ್ನು ದೇವರು ಅಂದರೇ ಅವರ ಶರೀರಗಳಲ್ಲಿನ ಆತ್ಮನಾಗಿ ಇರುವವನು ಗಮನಿಸುತ್ತಲೇ ಇದ್ದಾನೆ. ಇದೆಲ್ಲದಕ್ಕೂ ತೀರ್ಪು ಮರಣಿಸಿದ ದಿನ ಇರುತ್ತದೆ ಎಂದು ನಮಗೂ ಕೂಡಾ ತಿಳಿದಿದೆ. ಪೂರ್ವಜನ್ಮದಲ್ಲಿ ಸ್ವಲ್ಪ ಪುಣ್ಯವನ್ನು ಸಂಪಾದಿಸಿಕೊಂಡಿರುವುದರಿಂದ ಸ್ವಲ್ಪ ಚೆನ್ನಾಗಿ ಬದುಕುವ ಜೀವಿತವನ್ನು ದೇವರು ಕೊಟ್ಟರೇ, ದೇವರೆಂಬ ವಿಶ್ವಾಸ ಇಲ್ಲದಿದ್ದರೂ, ಅವರ ಬದುಕು ಅವರು ಬದುಕುತ್ತಿದ್ದರೂ ಫರವಾಗಿಲ್ಲ. ಹಾಗಲ್ಲದೆ ಆಧ್ಯಾತ್ಮಿಕ ಜ್ಞಾನಿಗಳನ್ನು ಅವಹೇಳನವಾಗಿ ಮಾತನಾಡುವುದರಿಂದ ಅವರು ನಂತರ ಜನ್ಮದಲ್ಲಿ ಭಯಂಕರವಾದ ಜೀವಿತವನ್ನು ಕಳೆಯಬೇಕಾಗಿ ಬರುತ್ತದೆಂದು ದೈವ ಗ್ರಂಥಗಳಲ್ಲಿ ದೇವರು ಮೊದಲೇ ಹೇಳಿದ್ದಾನೆ. ಅವರ ವಿಷಯವನ್ನು ನಾವು ಹೇಳಿಕೊಂಡರೂ ಏನೂ ಪ್ರಯೋಜನೆಯಿಲ್ಲ. ಅವರು ಯಾವ ವಿಧವಾಗಿಯು ಬದಲಾಗುವುದಿಲ್ಲ. ದೇವರು ಅಂತವರಿಗೆ ಎಂತಹ ಶಿಕ್ಷೆಗಳು ನಿರ್ಣಯಿಸಿ ಇಟ್ಟಿರುವುದು ದೈವಗ್ರಂಥಗ

ಳಲ್ಲಿ ಹೇಳಿದ್ದಾರೆ. ಅವರ ವಿಷಯ ಪಕ್ಕಕ್ಕಿಟ್ಟು ನಾವು ದೈವಮಾರ್ಗ ದಿಂದ ಪಕ್ಕಕ್ಕೆ ಹೋಗದಿರುವಂತೆ, ದೇವರನ್ನು ಬೇಡಿಕೊಂಡು ದೇವರ ಮಾರ್ಗದಲ್ಲಿ ಪ್ರಯಾಣಿಸುವಂತೆ ಪ್ರಯತ್ನಿಸೋಣ.

ದೇವರು ಪ್ರಥಮ ದೈವಗ್ರಂಥದಲ್ಲಿ ದೈವಾಸುರ ಸಂಪದ್ವಿಭಾಗ ಯೋಗ ಎಂಬ ಅಧ್ಯಾಯದಲ್ಲಿ 18, 19, 20 ಶ್ಲೋಕಗಳಲ್ಲಿ ಹೇಗೆ ಹೇಳಿದ್ದಾನೊ ನೋಡಿರಿ. **"ಅಂತವರಿಗೆ ಅಹಂಕಾರ ಹೆಚ್ಚಾಗಿ, ಗರ್ವದಿಂದ ತಮ್ಮ ಶರೀರದಲ್ಲಿಯೂ, ಇತರರ ಶರೀರದಲ್ಲಿಯೂ, ಇರುವ ನನ್ನನ್ನು ಅಸೂಯೆಯಿಂದ ದ್ವೇಷಿಸಿ ಮಾತನಾಡುತ್ತಿರುತ್ತಾರೆ. ಅವರು ಒಳ್ಳೆಯದನ್ನು ದ್ವೇಷಿಸುತ್ತಾ, ಜ್ಞಾನವನ್ನು ದೂಷಿಸುತ್ತಾ ಇರುತ್ತಾರೆ. ಅಂತವರನ್ನು ಅಜ್ಞಾನಿಗಳಲ್ಲಿಯೇ ಹುಟ್ಟಿಸುತ್ತಾ, ಮಾಯೆಯಲ್ಲಿಯೇ ಮುಳುಗಿರುವ ಹಾಗೆ ಮಾಡಿ, ಜನ್ಮ ಜನ್ಮಕ್ಕೂ ಅಜ್ಞಾನದ ಕಡೆ ಹೋಗುತ್ತಿರುತ್ತಾರೆ. ಅವರಿಗೆ ನನ್ನ ಜ್ಞಾನವೊಂದರ ಗಟ್ಟು ಯಾವ ಮಾತ್ರವು ದೊರಕದಂತೆ ಮಾಡಿ, ಅಷ್ಟಕ್ಕಷ್ಟು ಅಧೋಗತಿಗೆ ಕಳಿಸುತ್ತೇನೆ."** ಎಂದು ಹೇಳಿದ್ದಾನೆ. ಅದೇ ದ್ವಿತೀಯ ದೈವಗ್ರಂಥದಲ್ಲಿ **"ಆತ್ಮವನ್ನು, ಆತ್ಮಜ್ಞಾನವನ್ನು ದೂಷಿಸಿದವರಿಗೆ ಎರಡು ಯುಗಗಳ ಪರ್ಯಂತ ನಿತ್ಯ ಪಾಪವನ್ನು ಅನುಭವಿಸುವಂತೆ ಮಾಡುತ್ತೇನೆ."** ಎಂದೂ ಕೂಡಾ ಹೇಳಿದ್ದಾನೆ. ಈ ವಿಧವಾಗಿ ದೈವಗ್ರಂಥಗಳಲ್ಲಿ ಅವರಿಗೆ ಶಿಕ್ಷೆಗಳು ನಿರ್ಣಯಿಸಲ್ಪಟ್ಟಿವೆ. ಅಂತವರನ್ನು ನಮ್ಮಂತವರು ಏನೂ ಮಾಡಲಾರೆವು. ದೇವರೇ ಅವರನ್ನು ತನ್ನ ಶಿಕ್ಷೆಯೊಳಗೆ ಸೆಳೆಯುತ್ತಾನೆ. ಲೋಕದಲ್ಲಿ ಅಜ್ಞಾನಿಗಳು ಜ್ಞಾನಿಗಳನ್ನು ಹೇಳನವಾಗಿ ಮಾತನಾಡುವುದು ತ್ರೇತಾಯುಗದಿಂದ ನಡೆಯುತ್ತಿದೆ. ಈಗಲೂ ಕೂಡಾ ಇದ್ದಾರೆ ಅಲ್ಲವೇ! ಅವರನ್ನು ಬಿಟ್ಟು ನೀವು ಜ್ಞಾನ ಸಂಬಂಧ ಪ್ರಶ್ನೆಗಳನ್ನು ಕೇಳಿರಿ.


**ಪ್ರಶ್ನೆ :– ನಾವು ಕೇಳುವುದು ಜ್ಞಾನ ಸಂಬಂಧ ವಿಷಯವೇ ಅಲ್ಲವೇ! ನೀವು ಸಾಮಾನ್ಯವಾದ ಮನುಷ್ಯ ಅಲ್ಲವೆಂದು ನಮಗೆ ತಿಳಿದಿದೆ. ನಾವು ನೋಡಿದಷ್ಟರಲ್ಲಿ ನೀವು ಹೇಳಿದರೆ ಭಯಂಕರ**

**ವಾದ ರೋಗಗಳು ಇತರರಿಗೆ ಇಲ್ಲದ ಹಾಗೆ ಹೋಗಿವೆ. ಎಷ್ಟೋ ದೇವತೆಗಳು ನಿಮ್ಮ ಮಾತುಗಳನ್ನು ಗೌರವಿಸಿದ್ದಾರೆ. ನಿಮ್ಮ ಜೀವನದಲ್ಲಿ ಜ್ಞಾನವನ್ನು ಹೇಳುವುದೇ ಅಲ್ಲದೆ ಎಷ್ಟೋ ಅಧ್ಭುತವಾದ ಜ್ಞಾನ ರಹಸ್ಯಗಳನ್ನು ಹೇಳಿದ್ದೀರಿ. ನಿಮ್ಮ ಗ್ರಂಥಗಳಲ್ಲಿ ಪ್ರತ್ಯಕ್ಷವಾಗಿ ಎಷ್ಟೋ ಮಹತ್ವಗಳನ್ನು ನೋಡಿದ್ದೇವೆ. ಅದರಲ್ಲಿ ಒಂದು ಕೂಡಾ ಕೈಲಾಗದ ಅಜ್ಞಾನಿಗಳು ನಿಮ್ಮನ್ನು ಎದುರಿಸಿ ಮಾತನಾಡುವುದು ನೋಡಿದ್ದೇವೆ. ಇತರರ ರೋಗಗ ಳನ್ನು ಹೋಗಲಾಡಿಸಿದ ನೀವು, ನಿಮ್ಮ ರೋಗಗಳಿಗೆ ಔಷಧಿ ಯನ್ನು ಏಕೆ ಬಳಸುತ್ತಿದ್ದಾರೆಂದು ಕೇಳಿದ್ದಾರೆ. ನಾನು ಎಂತಹವ ನಾದರೂ ಸರ್ವಸಾಧಾರಣ ಮನುಷ್ಯನಾಗಿ ಇರುತ್ತೇನೆಂದು ಹೇಳಿದ ವಿಷಯ ಅವರಿಗೆ ತಿಳಿಯದೆಯೇ ಮಾತನಾಡುತ್ತಿದ್ದಾರೆ. ನೀವು ಅಂತಹ ದುರ್ಮಾರ್ಗರನ್ನು ಏನೂ ಮಾಡಲು ಸಾಧ್ಯವಿಲ್ಲವಾ?**

**ಉತ್ತರ :–** ನಾನು ಪ್ರತೀಕಾರವಾಗಿ ಏನಾದರೂ ಮಾಡುವುದಕ್ಕೆ ಎಲ್ಲರಂತಹ ಮನುಷ್ಯನು ಅಲ್ಲ. ನಾನು ಬೊಂಬೆಯಂತಹವನು ಆಡಿಸುವವನು ನನ್ನ ಶರೀರದಲ್ಲಿರುವ ದೇವರು. ನನ್ನ ಮುಖಾಂತರ ಉನ್ನತ ಕಾರ್ಯಗಳು ನಡೆದಿರುವುದು ವಾಸ್ತವವೇ. ಅದು ನನ್ನೊಳಗಿರುವ ದೇವರ ಮಹಿಮೆಯೇ ಹೊರತು, ನನ್ನ ಪ್ರಮೇಯವೇನು ಇಲ್ಲವೆಂದು ಹೇಳುತ್ತಿದ್ದೇನೆ. ಈಗಲೂ ಕೂಡಾ ಎಲ್ಲವನ್ನು ದೇವರೇ ನೋಡುತ್ತಾನೆಂದು ಹೇಳುತ್ತಿದ್ದೇನೆ.

ನಾವು ಎಂತಹವರು ನಮ್ಮ ಹಿರಿಮೆಯೇನು, ನಮ್ಮ ಮನುಷ್ಯತ್ವ ಏನೆಂದು ತಿಳಿಯುವುದಕ್ಕೆ ಸಾಕ್ಷಿಯಾಗಿ ನಮ್ಮ ಗ್ರಂಥಗಳನ್ನು ಓದಿದ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿರುವ ಇಬ್ಬರು ಸಜಾ ಖೈದಿಗಳು ಬರೆದಿರುವ ವಿಧಾನವನ್ನು ನೋಡಿದರೆ

ಯಾರಿಗಾದರೂ ಅರ್ಥವಾಗಬಲ್ಲದು. ನಮ್ಮ ವಿಷಯ ಸ್ವಲ್ಪವಾದರೂ ತಿಳಿಯದವರು, ಎಷ್ಟು ಕೂಗಾಡಿದರು ಅವರನ್ನು ನಾವು ಬೊಗಳುವ ನಾಯಿಗಳನ್ನಾಗಿ ಲೆಕ್ಕಿಸಿಕೊಳ್ಳುತ್ತೇವೆ. ಅಜ್ಞಾನಿಗಳೇ ನಮ್ಮನ್ನು ವಿಮರ್ಶಿಸುತ್ತಿದ್ದಾರೆ ಹೊರತು, ಜ್ಞಾನಿಗಳು ಎಲ್ಲರೂ ನನ್ನನ್ನು ಪ್ರಶಂಸಿಸುತ್ತಿದ್ದಾರೆ.




**"If you only knew the magnificence of the 3, 6, and 9, then you would have a key to the universe."**

**"3, 6 ಮತ್ತು 9 ರ ವಿಶೇಷತೆಯನ್ನು ತಿಳಿದುಕೊಂಡರೆ ವಿಶ್ವವನ್ನು ಕುರಿತು ತಿಳಿದುಕೊಳ್ಳುವ ಅವಕಾಶ ಇದೆ."**


**– ನಿಕೋಲಾ ಟೆಸ್ಲಾ**

**(1)**




**(2)**

**– ಐನ್‌ಸ್ಟೀನ್**





(3)

ನಾವು ಇಲ್ಲಿಯವರೆಗು 3 6 9 ಎನ್ನುವ ಅಂಕಿಗಳನ್ನು ಆಧ್ಯಾತ್ಮಿಕ ಭಾವನೆಯಿಂದ ಕೂಡಿದ ಅರ್ಥವನ್ನು ತಿಳಿಸುತ್ತಾ ಬಂದಿದ್ದೇವೆ. ಆದರೇ 3 6 9 ಅನ್ನು ಕುರಿತು ಉಳಿದ ಶಾಸ್ತ್ರಜ್ಞರು ಕೂಡಾ ಅವರ ಭಾವನೆಯನ್ನು ಪ್ರಕಟಿಸಿ ಇರುವುದನ್ನು, ಗಣಿತ ಶಾಸ್ತ್ರದಲ್ಲಿ ಎಷ್ಟೋ ವಿಜ್ಞಾನವನ್ನು ಸಂಪಾದಿಸಿಕೊಂಡ ಶಾಸ್ತ್ರಜ್ಞರು, ಪರಿಶೋಧಕರು 3,6,9 ಅನ್ನು ಕುರಿತು ಬರೆದಿರುವ ಚಿತ್ರಪಟಗಳನ್ನು ಈಗ ನಿಮಗೆ ತೋರಿಸುವುದಕ್ಕೆ ಪ್ರಕಟಿಸಿದ್ದೇವೆ. ಅವು ಎಲ್ಲವೂ ನಾವು ಹೇಳಿರುವುದಕ್ಕೆ ಬಲವನ್ನು ಕೈಗೂಡಿಸುವಂತೆ ಇರುವುದರಿಂದ, ಅವರು ಹೇಳಿದ ವಿಷಯಗಳನ್ನು ಪ್ರಕಟಿಸುವುದು ನಡೆದಿದೆ. ಇಲ್ಲಿ ಮೊದಲಿರುವ ಶಾಸ್ತ್ರಜ್ಞರ ಹೆಸರು ನಿಕೋಲಾ ಟೆಸ್ಲಾ (Nikola Tesla). ಈತನು ಕರೆಂಟನ್ನು ಕಂಡುಹಿಡಿದ ವ್ಯಕ್ತಿ. ಆತನು **"3,6,9 ಒಂದರ ವಿಶೇಷತೆಯನ್ನು ತಿಳಿದುಕೊಂಡರೆ ವಿಶ್ವವನ್ನು ಕುರಿತು ತಿಳಿದುಕೊಳ್ಳುವ ಅವಕಾಶ ಇದೆ"** ಎಂದು ಬರೆದಿರುವುದು ಖಗೋಳಶಾಸ್ತ್ರಕ್ಕೆ ಸಂಬಂಧಿಸಿದ ವಿಷಯವಾದರೂ, ಅದು ಬ್ರಹ್ಮವಿದ್ಯಾ ಶಾಸ್ತ್ರಕ್ಕೆ ಬಹಳ ಹತ್ತಿರ ಸಂಬಂಧವಿದೆ. ಹಾಗೆಯೇ ಪ್ರಪಂಚದಲ್ಲಿ ದೊಡ್ಡ ಸೈಂಟಿಸ್ಟೆಂದು ಹೆಸರು ವಾಸಿಯಾದ ಐನ್‌ಸ್ಟೀನ್ (Einstein) ಗಣಿತ ಶಾಸ್ತ್ರದ ಪ್ರಕಾರ 6–3=6 ಎಂದು ಬರೆದ ಅಂಕಿಗಳನ್ನು ನೋಡುತ್ತಲೇ ಆಧ್ಯಾತ್ಮಿಕ ಗುರುತಿಗೆ ಬರುತ್ತಿದೆ. ಇಬ್ಬರು ಶಾಸ್ತ್ರಜ್ಞರು ಅವರ ಭಾವನೆಗಳಲ್ಲಿ ಯಾವ ಅರ್ಥದಿಂದ ಹೇಳಿದರೂ,

ನಮ್ಮ ಭಾವನೆಯಲ್ಲಿ ದೇವರು ವಿಶ್ವದಲ್ಲಿ 3, 6, 9 ಆಗಿ ಇದ್ದಾನೆಂದು, 3, 6, 9 ನ್ನೇ ಜೀವಾತ್ಮ, ಆತ್ಮ, ಪರಮಾತ್ಮನಾಗಿ ಹೇಳುತ್ತಿದ್ದೇವೆಂದು ಈ ಗ್ರಂಥದಲ್ಲಿ ಮೊದಲೇ ಹೇಳಿ ಕೊಂಡಿದ್ದೇವೆ. ಅದೇ ಪ್ರಕಾರವೇ ಈಗ ಈ ಚಿತ್ರಗಳಿಗೆ ವಿವರವನ್ನು ಹೇಳಿಕೊಳ್ಳೋಣ.

ಮೊದಲ ಚಿತ್ರದಲ್ಲಿನ ಶಾಸ್ತ್ರಜ್ಞನನ್ನು ಗಮನಿಸಿದರೆ ಒಂದು ಕೈಯಿಂದ ಬೆಳಗುತ್ತಿರುವ ಲೈಟನ್ನು ತೋರಿಸುತ್ತಾ ಮತ್ತೊಂದು ಕೈಯಿಂದ ಒಂದು ಬೆರಳನ್ನು ತಲೆಯಲ್ಲಿ ಮೆದುಳು ಕಡೆಗೆ, ಮತ್ತೊಂದು ಬೆರಳನ್ನು ಬಾಯಿ ಕಡೆಗೆ, ಮೂರನೇ ಬೆರಳನ್ನು ಶರೀರದ ಕಡೆಗೆ ತೋರಿಸುತ್ತಿದ್ದಾನೆ. ಆ ದಿನ ಆ ವ್ಯಕ್ತಿಯಲ್ಲಿ ಆರಾಗಿರುವ ಎರಡನೇ ಆತ್ಮ ಯಾವ ಭಾವನೆಯನ್ನು ತಿಳಿಸಿದೆಯೋ ನನಗೆ ತಿಳಿದಿಲ್ಲ ಆದರೇ, ಈಗ ನಮಗೆ ಅಗತ್ಯವಾದ ಆಧ್ಯಾತ್ಮಿಕ ಭಾವವನ್ನೇ ನನ್ನಲ್ಲಿ ಆರಾಗಿರುವ ಎರಡನೇ ಆತ್ಮ ತಿಳಿಸಿದ ವಿಷಯವನ್ನೇ ತಿಳಿಸುತ್ತಿದ್ದೇನೆ. ಜೀವವಿರುವ ಶರೀರವನ್ನು ಬೆಳಗುತ್ತಿರುವ ಬಲ್ಬಿನೊಂದಿಗೆ ಸಮಾನವಾಗಿ ಹೋಲಿಸಿ ಒಂದು ಕೈಯಿಂದ ತೋರಿಸುತ್ತಿದ್ದಾನೆ. ಬೆಳಗದ ಬಲ್ಬು ಜೀವವಿಲ್ಲದ ಶರೀರವಿದ್ದಂತೆ. ಒಂದು ಬಲ್ಬು ಬೆಳಗಬೇಕೆಂದರೇ ಅದಕ್ಕೆ ಪಾಜಿಟಿವ್, ನೆಗಿಟಿವ್, ಅರ್ತ್ ಎನ್ನುವ ಮೂರು ಜೋಡಣೆಗಳಿರುತ್ತವೆ. ಹಾಗೆಯೇ ಒಂದು ಶರೀರ ಸಜೀವ ಆಗಬೇಕೆಂದರೇ ಅದರೊಳಗೆ ಜೀವಾತ್ಮ, ಆತ್ಮ, ಪರಮಾತ್ಮ ಎನ್ನುವ ಮೂರು ಆತ್ಮಗಳಿರಬೇಕು. ಮುಖ್ಯವಾಗಿ ಬಲ್ಬು ಬೆಳಗುವುದಕ್ಕೆ ಪಾಜಿಟಿವ್, ನೆಗಿಟಿವ್ (ಧನಧೃವ, ಋಣಧೃವಗಳು) ಅನ್ನುವ ಎರಡು ಜೋಡಣೆಗಳಿದ್ದರೂ. ಮೂರನೇ ಜೋಡಣೆ ಅರ್ತ್ (ಭೂಮಿ) ಎನ್ನುವ ಜೋಡಣೆ ತಪ್ಪದೇ ಅನುಸಂಧಾನ ವಾಗಿರುತ್ತದೆ. ಇದನ್ನು ಕುರಿತು ತಿಳಿಯುವುದಕ್ಕೆ ಒಂದು ಪ್ಲಗ್ ಸಾಕೇಟ್‌ನ್ನು ನಂತರ ಪುಟದ ಚಿತ್ರದಲ್ಲಿ ನೋಡಿದರೆ ಚೆನ್ನಾಗಿ ಅರ್ಥವಾಗುತ್ತದೆ.

ಒಂದು ಬೆಳಗುತ್ತಿರುವ ಬಲ್ಬನ್ನು ತೋರಿಸಿದ ನಿಕೋಲಾ ಟೆಸ್ಲಾ ಸಜೀವವಾಗಿರುವ ಶರೀರದಲ್ಲಿ ಮೂರು ಆತ್ಮಗಳಿವೆಯೆಂದು ತಿಳಿಸುತ್ತಿದ್ದಾನೆ. ಅಷ್ಟೇ ಅಲ್ಲದೆ ಮೂರು ಬೆರಳುಗಳನ್ನು ತೋರಿಸುತ್ತಾ ಒಂದನ್ನು ಮೇಲಕ್ಕೆ





ಮೆದಳು ಕಡೆಗೆ, ಎರನೆಯದನ್ನು ಬಾಯಿ ಕಡೆಗೆ, ಮೂರನೆಯದನ್ನು ಶರೀರ ಕಡೆಗೆ ತೋರಿಸುತ್ತಿದ್ದಾನೆ. ಯಾರಿಗೂ ತಿಳಿಯದ ಹಾಗೆ ಆಜ್ಞೆಗ್ಗಳನ್ನು ಕೊಡುವ ಮೆದಳನ್ನು ಪರಮಾತ್ಮ ಗುರುತಾಗಿ, ಕದಲಿ ಕೆಲಸ ಮಾಡುತ್ತಾ ಮಾತನಾಡುವ ಬಾಯನ್ನು ಆತ್ಮವಾಗಿ, ಸ್ವಲ್ಪ ಕಾಲ ಬೆಳೆದು ಎಂದಿಗಾದರೂ ನಶಿಸುವ ಶರೀರವನ್ನು ಜೀವಾತ್ಮ ಗುರುತಾಗಿ ಸೂಚಿಸುತ್ತಾ ಆ ವಿಧವಾಗಿ ಒಂದು ಬೆರಳನ್ನು ಮೇಲಕ್ಕೆ, ಎರಡನೇ ಬೆರಳನ್ನು ಮಧ್ಯಕ್ಕು, ಮೂರನೇ ಬೆರಳನ್ನು ಕೆಳಗಡೆಗೆ ತೋರಿಸುವುದು ನಡೆದಿದೆ. ಇದನ್ನನುಸರಿಸಿ ಬೆಳಗುತ್ತಿರುವ ಬಲ್ಬು(ದೀಪ)ನಂಥಾದ್ದು ಸಜೀವವಾಗಿರುವ ಶರೀರವೆಂದು ತೋರಿಸುವಂತೆ ಇದೆ. ಜೀವಾತ್ಮ, ಆತ್ಮ, ಪರಮಾತ್ಮ ಎನ್ನುವ ಮೂರು ಆತ್ಮಗಳ ವಿಷಯ ತಿಳಿದುಕೊಂಡರೆ ಜೀವಿಯೊಂದಿಗೆ ಕೂಡಿಕೊಂಡ ಪ್ರಪಂಚ ಅಂದರೇ ವಿಶ್ವವೊಂದರ ವಿವರ ತಿಳಿಯುತ್ತದೆಂದು 3, 6, 9 ಅನ್ನು ತೋರಿಸಿ ಇವುಗಳನ್ನು ಕುರಿತು ತಿಳಿಯಲ್ಪಟ್ಟರೆ ಪ್ರಕೃತಿ ಪರಮಾತ್ಮನೊಂದಿಗೆ ಕೂಡಿರುವ ವಿಶ್ವವನ್ನು (ಪ್ರಕೃತಿ+ಆತ್ಮಗಳು=ವಿಶ್ವ) ತಿಳಿಯಬಹುದೆಂದು ನಿಕೋಲಾ ಟೆಸ್ಲಾ ತಿಳಿಸಿದ್ದಾನೆ.


ಇನ್ನು ಐನ್‌ಸ್ಟೀನ್ ತಿಳಿಸಿದ ವಿಷಯಕ್ಕೆ ಬಂದರೆ ಆತನು 6–3=6 ಎಂದು ಬರೆದಿದ್ದಾನೆ. ಹಾಗೆ ಬರೆಯುವುದೇ ಅಲ್ಲದೆ, ಒಂದು ಕಡೆ ಕೈಯಿಂದ 6–3 ಅನ್ನು ಅಂಡರ್ ಲೈನ್ ಮಾಡಿ (6–3 ಗೆ ಕೆಳಗೆ ಗೆರೆ ಗೀಚಿ) ತೋರಿಸುತ್ತಾ, ಮತ್ತೊಂದು ಕಡೆ ಬಾಯಿಂದ ನಾಲಿಗೆಯನ್ನು ಪೂರ್ತಿ ಹೊರಗೆ ಇಟ್ಟು ತೋರಿಸುತ್ತಿದ್ದಾನೆ. ಈ ದೃಶ್ಯವೆಲ್ಲವೂ ಒಂದು ವಿಚಿತ್ರವಾಗಿ ಕಾಣಿಸಿದರೂ, ಆತ್ಮ ವಿಷಯದಲ್ಲಿ (ಆಧ್ಯಾತ್ಮಿಕ ವಿಷಯದಲ್ಲಿ) ಎಷ್ಟೋ ಜ್ಞಾನದಿಂದ ಕೂಡಿಕೊಂಡ ಅರ್ಥ ಇದೆಯೆಂದು ಆತ್ಮವೇ ತಿಳಿಸುತ್ತಿದೆ ನೋಡಿರಿ. ನಾವು ಗ್ರಂಥದಲ್ಲಿ


ಬರೆದುಕೊಂಡ ಅರ್ಥದ ಪ್ರಕಾರ ಆರು (6) ಆತ್ಮಗೆ ಗುರುತೆಂದು (3) ಜೀವಾತ್ಮಗೆ ಗುರುತೆಂದು ಹೇಳಿಕೊಂಡಿದ್ದೇವೆ. ಸಜೀವ ಶರೀರದಲ್ಲಿ ಜೀವಾತ್ಮ, ಆತ್ಮ, ಪರಮಾತ್ಮ ಎನ್ನುವ ಮೂರು ಆತ್ಮಗಳಿದ್ದರೂ ಪರಮಾತ್ಮ ರೂಪ, ನಾಮ, ಕ್ರಿಯೆಗಳು ಇಲ್ಲದಿರುವುದಾಗಿ ಶರೀರದಲ್ಲಿದ್ದರೂ ಅದು ಇಲ್ಲದಂತೆಯೇ, ಎಲ್ಲಿಯೂ ಲೆಕ್ಕಿಸಲ್ಪಡುವುದಿಲ್ಲ. ಶರೀರದಲ್ಲಿ ತಿಳಿಯಲ್ಪಡುವವು ಆತ್ಮ, ಜೀವಾತ್ಮ ಎಂಬ ಎರಡೇ ಆದ್ದರಿಂದ, ಐನ್‌ಸ್ಟೀನ್ ಆರನ್ನು, ಮೂರನ್ನು ಮಾತ್ರವೇ ತೋರಿಸಿದ್ದಾನೆ. ಶರೀರದಲ್ಲಿ ಆತ್ಮಗೂ ಜೀವಾತ್ಮಗೂ ಎರಡಕ್ಕು ಗುರುತಾಗಿ ನಾಲಿಗೆ ಇದೆ. ಒಂದು ಕೆಲಸವನ್ನು ಮಾಡಿದಾಗ, ಆ ಕೆಲಸವನ್ನು ಜೀವಿಯಾದ ನಾನು ಮಾಡಿದಂತೆ ನಿಮಗೆ ಕಾಣಿಸಿದರೂ, ಅದನ್ನು ನಾನು ಮಾಡಲಿಲ್ಲ, ನನ್ನಲ್ಲಿರುವ ಆತ್ಮ ಮಾಡಿದೆಯೆಂದು ತಿಳಿಸುವ ನಿಮಿತ್ತ, ಪೂರ್ವದಲ್ಲಿ ಒಂದು ಕಾರ್ಯವನ್ನು ಮಾಡಿದ ವ್ಯಕ್ತಿ ಅದು ತನಗೆ ಸಂಬಂಧ ಇಲ್ಲವೆಂದು ಅರ್ಥವಾಗುವಂತೆ ನಾಲಿಗೆಯನ್ನು ಹೊರಗೆ ಇಟ್ಟು ತೋರಿಸುತ್ತಿದ್ದನು. ಪ್ರಸ್ತುತ ಕಾಲದಲ್ಲಿ ಕರ್ಮಯೋಗ ಸಾರಾಂಶವನ್ನು ತಿಳಿಸುವ ನಾಲಿಗೆಯನ್ನು ಹೊರಗೆ ತೋರಿಸುವ ವಿಧಾನ ಯಾರಿಗೂ ತಿಳಿಯದಹಾಗೆ ಹೋಗಿದೆ. ಆದರೂ ನನ್ನ ಮಾತಿಗೆ ಸಾಕ್ಷಿ ಇಂದಿಗೂ ಕೆಲವು ಕಡೆ ಇದೆಯೆಂದು, ಅದರ ಪ್ರಕಾರವೇ ಅಮೇರಿಕಾ ರಿಜಿಲಿಂಗ್ ಕಿಂಗ್ ಆದ ಅಂಡರ್‌ಟೇಕರ್ ತಾನು ಮ್ಯಾಚ್ ಗೆದ್ದಾಗೆಲ್ಲಾ ಗೆದ್ದಿರುವುದು ನಾನಲ್ಲ, ಆತ್ಮಶಕ್ತಿಯಿಂದಲೇ ಗೆಲ್ಲುವುದು ನಡೆದಿದೆಯೆಂದು ತಿಳಿಯುವಹಾಗೆ, ಮ್ಯಾಚ್ ಮುಗಿದುಹೋದ ನಂತರ ಮೊಣಕಾಲ ಮೇಲೆ ಕುಳಿತುಕೊಂಡು ತನ್ನ ನಾಲಿಗೆಯನ್ನು ಪೂರ್ತಿ ಹೊರಗಿಟ್ಟು ತೋರಿಸುವುದು ನಡೆಯುತ್ತಿದೆ. ನಿಮಗೆ ಅರ್ಥವಾಗಬೇಕೆಂದರೇ ಇಟರ್‌ನೆಟ್‌ನಲ್ಲಿ ಅಂಡರ್‌ಟೇಕರ್ ಗೆದ್ದಿರುವ ಮ್ಯಾಚ್‌ಗಳನ್ನು ನೋಡಬಹುದು. ನಾಲಿಗೆ ಮನುಷ್ಯ ಅಲ್ಲಾಡಿಸಿದರೇ ಅಲ್ಲಾಡುತ್ತಿದೆ. ಹಾಗೇ ಮನುಷ್ಯ ಕದಲಿಸದಿದ್ದರೂ ಕದಲುತ್ತಿದೆ. ಮನುಷ್ಯ ಅಂದುಕೊಂಡಾಗ ಅಲ್ಲಾಡಿಸಿದರೆ ಅಲ್ಲಾಡುವ ನಾಲಿಗೆ, ಯಾವಕಡೆ ಕದಲಿಸಿದರೆ ಆ ಕಡೆ ಕದಲುವ ನಾಲಿಗೆ, ಉಳಿದ ಸಮಯಗಳಲ್ಲಿ ಮನುಷ್ಯನಿಗೆ ತಿಳಿಯದಂತೆ, ಮನುಷ್ಯನ ಪ್ರಮೇಯ ಇಲ್ಲದೆ ಅದಷ್ಟಕ್ಕದೆ ಕದಲುತ್ತಿರುವಹಾಗೆ ಕಾಣಿಸುತ್ತಿದೆ.


ಹಾಗೆ ಮನುಷ್ಯನ ಪ್ರಮೇಯ ಇಲ್ಲದಂತೆ ಕದಲುವುದಕ್ಕೆ ಕಾರಣ ನಮಗೆ ತಿಳಿಯದಂತೇ ಶರೀರದಲ್ಲಿರುವ ಆತ್ಮವೇ ಎಂದು ತಿಳಿಯುತ್ತಿದೆ. ಆತ್ಮ ತನ್ನ ಶಕ್ತಿಯಿಂದ ನಾಲಿಗೆಯನ್ನು ಹಲ್ಲಿನ ಮಧ್ಯದಲ್ಲಿ ವೇಗವಾಗಿ ಕದಲಿಸುತ್ತಾ ತನ್ನ ಶಕ್ತಿಗೆ ಸಾಕ್ಷಿಯನ್ನು ಕೊಡುತ್ತಿದೆ. ಆದ್ದರಿಂದ ಮನುಷ್ಯನ ಪ್ರಮೇಯದಿಂದ ಕದಲುವ ನಾಲಿಗೆ ಜೀವಾತ್ಮಗೆ ಗುರುತೆಂದು, ಮನುಷ್ಯನ ಪ್ರಮೇಯ ಇಲ್ಲದಂತೆ, ಜೀವಿಗೆ ತಿಳಿಯದಂತೆ ಕದಲುವ ನಾಲಿಗೆ ಆತ್ಮಗೆ ಗುರುತೆಂದು ತಿಳಿಯಬಹುದು. ಈಕಡೆ ಜೀವಿಗು ಆಕಡೆ ಆತ್ಮಗು ಎರಡಕ್ಕೂ ಗುರುತಾದ ನಾಲಿಗೆಯನ್ನು ಐನ್‌ಸ್ಟೀನ್ ತೋರಿಸುತ್ತಾ, ಜೀವಾತ್ಮಗು, ಆತ್ಮಗು, ಗುರುತಾದ ಮೂರು ಆರನ್ನೇ ಅಂಡರ್‌ಲೈನ್ ಮಾಡಿ ತೋರಿಸಿದ್ದಾನೆ. ಮನುಷ್ಯನ ಶರೀರದಲ್ಲಿ ಜೀವಿಗೆ ತಿಳಿದು ಕೆಲಸ ನಡೆದಾಗ ಉಪಯೋಗಪಡುವ ಶಕ್ತಿ ಆತ್ಮಶಕ್ತಿಯೇ ಎಂದು, ಜೀವಿಗೆ ತಿಳಿಯದಂತೆ ನಡೆಯುವಾಗ ಕೂಡಾ ಉಪಯೋಗಪಡುವ ಶಕ್ತಿ ಆತ್ಮ ಶಕ್ತಿಯೇ ಎಂದು, ಎಲ್ಲರಿಗೂ ತಿಳಿಯುವಹಾಗೆ ಆತ್ಮ ಗುರುತಾದ ಆರರಲ್ಲಿ ಮೂರನ್ನು ತೆಗೆದುಹಾಕಿದರೂ, ಆರೇ ಇದೆಯೆಂದು 6–3=6 ಎಂದು ತೋರಿಸುವುದು ನಡೆದಿದೆ.

ಇನ್ನು ಮೂರನೇ ಚಿತ್ರದಲ್ಲಿ ಬೆಳ್ಳನೆಯದರಲ್ಲಿ ಕಪ್ಪನೆಯ ಗುರುತಾಗಿ ಮೂರನ್ನು, ಕಪ್ಪನೆಯದರಲ್ಲಿ ಬಿಳಿಯ ಗುರುತಾಗಿ ಆರನ್ನು ತೋರಿಸುವುದು ನಡೆದಿದೆ. ಶರೀರದಲ್ಲಿ ಜೀವಾತ್ಮ (3), ಆತ್ಮ (6) ಎರಡೂ ಬೇರೆಬೇರೆಯಾಗಿದ್ದರೂ ಎರಡರಲ್ಲಿ ಪರಮಾತ್ಮ ಕಲೆತು ಅಣುವಣುವೂ ಶರೀರವೆಲ್ಲಾ ವ್ಯಾಪಿಸಿ ಇದೆಯೆಂದು ತಿಳಿಯುವಹಾಗೆ, ಬೆಳ್ಳನೆಯ ಕಪ್ಪನೆಯ ಎರಡು ಬಣ್ಣಗಳು ಬೆರೆತಿರುವ ಎಳೆಬಿಳಿಪು, ಎಳೆ ಕಪ್ಪುಬಣ್ಣ ಗೆರೆಯನ್ನು ಮೂರಕ್ಕು ಆರಕ್ಕು ಮಧ್ಯದಲ್ಲಿಯೂ, ಮೂರಕ್ಕು ಆರಕ್ಕು ಸುತ್ತಲೂ ಇರುವಹಾಗೆ ತೋರಿಸುವುದು ನಡೆದಿದೆ. ಹಾಗೆ ತೋರಿಸುವುದೇ ಅಲ್ಲದೆ ಗೆರೆಯಂತಿರುವ ಬಿಳಿ ಕಪ್ಪು ಬೆರೆತಿರುವ ಎಳೆಬಣ್ಣದ ಗೆರೆಯನ್ನು ಒಂಭ (9) ತ್ತಾಗಿ ಗುರುತಿಸಿ ತೋರಿಸುವುದು ನಡೆದಿದೆ. ಆ ದಿನ ಅವರು ಯಾವ ಭಾವನೆಯಿಂದ ತೋರಿಸಿದರೂ, ಈ ದಿನ ಆತ್ಮ ತನ್ನ ಜ್ಞಾನವನ್ನು ತಿಳಿಯುವಹಾಗೆ ಆ ಬೊಂಬೆಗಳಿಗೆ ಪೂರ್ತಿ ವಿವರವನ್ನು ಕೊಟ್ಟಿದೆ.


9
8
1
7
0
2
6
5
4
3


360°
360°
(3+6+0=9)


9
8
1
7
2
6
3
5
4


9
8
1
7
2
6
3
5
4

# ಪತ್ರಗಳು

## ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರ

### ಪಾದ ಪದ್ಮಗಳಿಗೆ ನನ್ನ ಸಾಷ್ಟಾಂಗ ವಂದನೆಗಳು.

ನನ್ನ ಹೆಸರು ಸಾಕಾ ಧನಂಜಯ, S/o. ಅಚ್ಚಪ್ಪ, ವಯಸ್ಸು 48 ವರ್ಷಗಳು, ಕುಲ ಪದ್ಮಶಾಲಿ, ನಿವಾಸ ಬೆಂಗಳೂರು, ಯಲಹಂಕ ಅಗ್ರಹಾರ ಲೇಅವುಟ್.

ನಾನು ಪ್ರಸ್ತುತ ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಜೈಲ್‌ನಲ್ಲಿ ಸಜಾ ಖೈದಿಯಾಗಿ ಇದ್ದೇನೆ. ನನಗೆ ಜೀವಾವದಿ ಖೈದಿಯಾಗಿ ಕೋರ್ಟು ಶಿಕ್ಷೆ ಹಾಕಿದೆ. ನನ್ನ ಸಜಾ ಖೈದಿ ನಂಬರ್. 9203 (Convict Prison) ರೂಮ್ ನಂಬರ್ C-7 (Block NO-7) ನಲ್ಲಿ ಇದ್ದೇನೆ.

ನಾನು ಬಾಲ್ಯದಿಂದ ರಾಮನು ಮತ್ತು ಆಂಜನೇಯ ಭಕ್ತನಾಗಿ ಇದ್ದೂ, ನನ್ನ ಜೀವನದಲ್ಲಿ ಬರುವ ಸಮಸ್ಯೆಗಳಿಗೆ, ಬಾಧೆಗಳಿಗೆ ಅನುಗುಣವಾಗಿ ಬೇರೇ ಇತರ ದೇವತೆಗಳನ್ನು ಸಹ ಪೂಜಿಸುತ್ತಿದ್ದೆನು. ಆದರೇ ಎಷ್ಟು ಮಂದಿ ದೇವತೆಗಳನ್ನು ಪೂಜಿಸಿದರೂ ನನ್ನ ಸಮಸ್ಯೆಗಳು, ಬಾಧೆಗಳು ಹೋಗಲಿಲ್ಲ. ನಾನು ಬಾಲ್ಯದಿಂದಲೂ ದೈವಭಕ್ತಿಯಿಂದ ಜ್ಞಾನ ತಿಳಿದುಕೊಳ್ಳಬೇಕೆಂದು ಬಹಳ ಶ್ರದ್ಧೆಯಿಂದ ಕೆಲವು ಆಶ್ರಮಗಳಿಗೆ ಸಹ ಹೋಗಿ, ಜ್ಞಾನ ಬೋಧನೆಗಳು ಕೇಳುತ್ತಿದ್ದೆನು. ಅದರಲ್ಲಿ ಭಾಗವಾಗಿ ಕೈವಾರ ತಾತಯ್ಯನ ಮಠದಲ್ಲಿ (ಪೋತುಲೂರಿ ವೀರಬ್ರಹ್ಮಯ್ಯರವರ ಅನುಬಂಧ ಮಠ)ಕ್ಕೆ ಹೋಗಿ ತತ್ತ್ವ ಜ್ಞಾನಬೋಧನೆಗಳನ್ನು ಶ್ರದ್ಧೆಯಿಂದ ಕೇಳುತ್ತಿದ್ದೆನು. ಆದರೇ ನನ್ನ ಬಾಧೆಗಳು ಇನ್ನೂ ಬೆಳೆಯುತ್ತಲೇ ಇದ್ದವು.

ನಾನು ಜ್ಞಾನ ಎಂದು, ಭಕ್ತಿ ಎಂದು ತಿರುಗುತ್ತಾ ಇದ್ದರೇ ನಮ್ಮ ಕುಟುಂಬದವರೆಲ್ಲರೂ ವಿರೋಧಿಸುತ್ತಾ ಇರುತ್ತಿದ್ದರು. ಆದರೂ ನಾನು ಹಾಗೇ ಮಾಡುತ್ತಾ ಇರುವುದರಿಂದ, ನನ್ನ ಕುಟುಂಬದವರು, ಬಂಧುಗಳು ಎಲ್ಲರೂ ದೂರವಾಗಿದ್ದಾರೆ. ನಾನು ಮದುವೆ ಸಹ ಮಾಡಿಕೊಳ್ಳಲಿಲ್ಲ. ನನಗೆ ಜೀವನದ ಮೇಲೆ ನಿರಾಶೆ ಉಂಟಾಗುತ್ತಿತ್ತು, ಬಾಧೆಗಳು ಭರಿಸುತ್ತಾ, ಜ್ಞಾನ ತಿಳಿದುಕೊಳ್ಳಬೇ

ಕೆಂಬ ಶ್ರದ್ಧೆಯಿಂದ ಬಹಳ ಕಡೆಗೆ ಹೋಗಿ, ಗುರುಗಳ ಹತ್ತಿರಕ್ಕೆ, ಪಂಡಿತರ ಹತ್ತಿರಕ್ಕೆ, ಬಾಬಾಗಳ ಹತ್ತಿರಕ್ಕೆ ಕೂಡಾ ಹೋಗಿ ಬಹಳ ಬೋಧನೆಗಳನ್ನು ಕೇಳುತ್ತಿದ್ದನು. ನನಗೆ ಜ್ಞಾನ ಸಂಬಂಧ ಎಷ್ಟೋ ಪ್ರಶ್ನೆಗಳು ಬರುತ್ತಿದ್ದವು, ಅವರನ್ನು ಕೇಳಿದರೇ ಅವರು ಹೇಳುವ ಸಮಾಧಾನದಲ್ಲಿ ನನಗೆ ತೃಪ್ತಿಯಾಗಿ ಸಮಾಧಾನ ದೊರಕುತ್ತಿರಲಿಲ್ಲ.

ಈ ವಿಧವಾಗಿ ನಾನು ಜೀವನ ಕಳೆಯುತ್ತಿರುವಾಗ, ನಾನು ಕೆಲಸ ಮಾಡುವ ಚಿಂತಾಮಣಿ ಟೌನ್‌ನಲ್ಲಿ ಇರುವ ಕೋನಕಪಲ್ಲಿ ಗ್ರಾಮದಲ್ಲಿ ಹ್ಯಾಂಡ್ಲೂಮ್ ಮಗ್ಗದ ಪರಿಶ್ರಮದಲ್ಲಿ ನಮ್ಮ ಪರಿಶ್ರಮದ ಯಜಮಾನನಿಗೂ ಆತನ ಹೆಂಡತಿಗೂ ಮಧ್ಯೆ ಕಲಹದಿಂದ ಆಕೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಾಗ, ಆ ಅಪರಾಧ ನನ್ನ ಮೇಲೆ ಹಾಕಲ್ಪಟ್ಟು ನನಗೆ ಜೀವಾವಧಿ ಖೈದೀಯಾಗಿ ಶಿಕ್ಷೆ ಬಿದ್ದಿದೆ. ಜೈಲು ಜೀವನ ಕಳೆಯುತ್ತಾ ಓದು ಅಷ್ಟಾಗಿ ಬಾರದ ಕಾರಣದಿಂದ ಇನ್ನೂ ಓದಿಕೊಳ್ಳಬೇಕೆನ್ನುವ ಕೋರಿಕೆ ಉಂಟಾಗಿ ಕನ್ನಡ, ತೆಲುಗು ಭಾಷೆಗಳು ಕಲಿತುಕೊಂಡು ವಾರ್ತಾ ಪತ್ರಿಕೆಗಳು, ಇತರ ದೈವ ಗ್ರಂಥಗಳು ಓದುತ್ತಾ, ಓದನ್ನು ಮುಂದುವರೆಸುತ್ತಾ, ಕೇಸು ಟ್ರೈಲ್ ನಡೆಸಿಕೊಳ್ಳುತ್ತಾ, ಭಗವದ್ಗೀತೆಯನ್ನು ಓದಿಕೊಳ್ಳುತ್ತಿದ್ದೇನೆ.

ಜೈಲಿಗೆ ಬಂದ ಒಂದು ವರ್ಷಕ್ಕೆ ಒಂದು ದಿನ ನಮ್ಮ ಜೈಲ್‌ನಲ್ಲಿ ನಮ್ಮ ರೂಮ್‌ಗೆ ಕ್ರೈಸ್ತವ ಬೋಧಕರು ಬಂದು ಬೈಬಲ್ ಕುರಿತು, ಏಸನ್ನು ಕುರಿತು ಬೋಧಿಸಿದ್ದಾರೆ. ನಾನು ಬೋಧನೆ ನಂತರ ಫಾದರ್‌ನನ್ನು ಭೇಟಿ ಮಾಡಬೇಕೆಂದು ಅನಿಸಿತು. ಏಕೆಂದರೇ ಅವರ ಬೋಧನೆಗಳಲ್ಲಿ ನಿಮ್ಮ ಪಾಪಗಳು ಹೋಗುತ್ತವೆ, ಬಾಧೆಗಳು, ಕಷ್ಟಗಳು ಹೋಗಿ ಕೇಸಿನಿಂದಲೂ ಸಹ ಹೊರ ಬರುತ್ತೀರಾ ಎಂದು ಹೇಳಿದ್ದಾರೆ. ಅದು ಕೇಳಿದ ನಾನು ಫಾದರ್‌ರವರಿಗೆ ನನ್ನ ಬಾಧೆಗಳನ್ನು ಹೇಳಿಕೊಂಡಿದ್ದೇನೆ. ಆಗ ಫಾದರ್‌ರವರು ಏಸು ಪ್ರಭುವನ್ನು ನಂಬಿಕೊಂಡು, ಬೈಬಲ್ ಓದಿಕೊಳ್ಳುತ್ತಾ, ಪ್ರತಿ ದಿನ ಪ್ರಾರ್ಥನೆ ಮಾಡಿಕೊಳ್ಳುತ್ತಾ ಇರಲು ಹೇಳಿ ಒಂದು ಬೈಬಲ್ ಕೊಟ್ಟು ಆಶೀರ್ವದಿಸಿದರು. ಅಂದಿನಿಂದ ಏಸು ಭಕ್ತನಾಗಿ ಬದಲಾಗಿ, ಹಿಂದೂ ಗ್ರಂಥಗಳನ್ನು, ದೇವತೆಗಳನ್ನು ಬಿಟ್ಟುಹಾಕಿ

ದ್ದೇನೆ. ನಾನು ಪೂರ್ತಿ ವಿಶ್ವಾಸಿಯಾಗಿ ಬದಲಾಗಿ, ಏಸು ಭಕ್ತನಾಗಿ ಇರುತ್ತಾ, ಬೈಬಲ್ ಓದುತ್ತಾ, ಪ್ರಾರ್ಥನೆಗಳು ಮಾಡುತ್ತಾ, ಚರ್ಚಿಗೆ ಹೋಗಿ ಕ್ರೈಸ್ತವ ಬೋಧನೆಗಳು ಕೇಳುತ್ತಾ, ಇತರರಿಗೂ ಕೂಡಾ ಬೋಧನೆಗಳು ಹೇಳುತ್ತಾ ನನ್ನ ಜೀವನ ಕಳೆಯುತ್ತಿದ್ದೇನೆ. ಆದರೂ ನನ್ನ ಬಾಧೆಗಳು, ಸಮಸ್ಯೆಗಳು ಹಾಗೇ ಇವೆ. ಕೇಸು ಕೂಡಾ ಪರಿಷ್ಕಾರ ಆಗುತ್ತಿಲ್ಲ. ಈ ವಿಷಯವನ್ನು ಕುರಿತು ಫಾದರ್‌ನನ್ನು ಕೇಳಿದಾಗ, ಎಷ್ಟೋ ವರ್ಷಗಳಿಂದ ಇರುವವರಿಗೇ ಸಮಸ್ಯೆಗಳು ಹೋಗಲಿಲ್ಲ. ನಿನಗೆ ಆಗಲೇ ಹೋಗುತ್ತವಾ? ಇನ್ನೂ ಸ್ವಲ್ಪ ದಿನ ವಿಶ್ವಾಸದಿಂದ ಪ್ರಾರ್ಥನೆ ಮಾಡುತ್ತಾ ಇರು ಎಂದು ಹೇಳಿದಾಗ ನಾನೂ ಹಾಗೇ ಮಾಡುತ್ತಾ ಇದ್ದೆನು. ನನ್ನ ಕೇಸು ಟ್ರೈಲ್ ಮುಗಿದು ಹೋಗಿ ನಾನು ಕ್ರೈಸ್ತನಾಗಿ ಬದಲಾದ ಒಂದೂವರೆ ವರ್ಷಕ್ಕೆ ಕೇಸು ಜಡ್ಜಿಮೆಂಟ್ ನಡೆದು, ನನಗೆ ಜೀವಾವಧಿ ಶಿಕ್ಷೆ ಬಿದ್ದಿದೆ. ಈ ವಿಷಯವನ್ನು ಕುರಿತು ಫಾದರ್‌ನನ್ನು ಕೇಳಿದಾಗ ಅವರು ಇಂತಹವರು ಏಸನ್ನು ವಿಶ್ವಾಸಿಸಿರುವುದರಿಂದ ನಂತರ ಬೆಯಿಲ್ ಸಿಕ್ಕಿದೆ ಎಂದು, ಒಬ್ಬ ವ್ಯಕ್ತಿ ಕೇಸು ಹೊಡೆದುಹಾಕಿದ್ದಾನೆಂದು ಅವರನ್ನು ಕುರಿತು ಹೇಳಿದ್ದಾರೆ. ನಾನು ಹಾಗೇ ಬೈಬಲ್ ಓದಿಕೊಳ್ಳುತ್ತಾ, ಪ್ರಾರ್ಥನೆಗಳು ಮಾಡಿಕೊಳ್ಳುತ್ತಾ, ಜ್ಞಾನ ಬೋಧನೆಗಳು ಆಲಿಸುತ್ತಾ ಕೆಲವು ಅರ್ಥವಾಗದ ವಾಕ್ಯಗಳನ್ನು ಕೇಳಿದರೇ ಯಾಕೋ ಅವರ ಸಮಾಧಾನ ತೃಪ್ತಿ ಎನಿಸದೇ ಹೋಗುತ್ತಿತ್ತು. ಈ ವಿಧವಾಗಿ ನನ್ನ ಜೀವನ ಸಾಗುತ್ತಿರುವಾಗ!

ಒಂದು ದಿನ ಸುಮಾರು 7 ಅಥವಾ 8 ತಿಂಗಳ ಕೆಳಗೆ ನಮ್ಮ ರೂಮ್ ಪಕ್ಕದಲ್ಲಿರುವ ರೂಮ್‌ನಲ್ಲಿ ಇದ್ದ ದಿಲೀಪ್ ಎನ್ನುವ ವ್ಯಕ್ತಿಯೊಂದಿಗೆ ಒಬ್ಬ ವ್ಯಕ್ತಿ ದೈವಜ್ಞಾನವನ್ನು ಕುರಿತು ತೆಲುಗಿನಲ್ಲಿ ಬೋಧಿಸುತ್ತಿರುವಾಗ, ನಾನು ಆಲಿಸಿ ಪಕ್ಕದಲ್ಲೇ ನಿಂತು ಆಲಿಸುತ್ತಾ, ಈತನು ಯಾರು ಗಡ್ಡ ಬೆಳೆಸಿಕೊಂಡು ಮುಸ್ಲೀಮ್‌ನಾಗಿ ಕಾಣಿಸುತ್ತಾ ತೆಲುಗಿನಲ್ಲಿ ದೈವಜ್ಞಾನ ಹೇಳುತ್ತಿದ್ದಾನೆಂದು ಸ್ವಲ್ಪ ಶ್ರದ್ಧೆ ಇಟ್ಟು ಆಲಿಸಿದ್ದೇನೆ. ಆತನ ಮಾತುಗಳಲ್ಲಿ ನಂಬಿಕೆ ಸತ್ಯ ಹೇಳಿದಂತೆ ಅನಿಸಿ, ಕುಳಿತುಕೊಂಡು ಬೋಧನೆ ಮುಗಿಯುವವರೆಗು ಶ್ರದ್ಧೆಯಿಂದ ಆಲಿಸಿದ್ದೇನೆ. ಆತನು ಹೇಳಿದ ಬೋಧನೆ ಇಲ್ಲಿಯವರೆಗು ಎಲ್ಲೂ ಕೇಳಲಿಲ್ಲ ಎನಿಸಿತು. ಬೋಧನೆ ಮುಗಿದು ಹೋದ ನಂತರ ಆತನೊಂದಿಗೆ ಪರಿಚಯ ಮಾಡಿ

ಕೊಂಡಾಗ, ಆತನ ಹೆಸರು ಅಮೀರ್‌ಅಲಿ ಎಂದು ಹೇಳಿದ್ದಾರೆ. ಆ ನಂತರ ಆತನು ನನ್ನೊಂದಿಗೆ ನಿಮಗೆ ದೇವರ ಮೇಲೆ ಭಕ್ತಿ, ಜ್ಞಾನದ ಮೇಲೆ ಶ್ರದ್ಧೆ ಇದ್ದರೇ, ದಿಲೀಪ್ ಹತ್ತಿರ ಜ್ಞಾನ ಗ್ರಂಥಗಳು ಇವೆ. ಅದರಲ್ಲಿ ನಿಮಗೆ ಇಷ್ಟವಾದ ಒಂದನ್ನು ತೆಗೆದುಕೊಂಡು ಓದಲು ಹೇಳಿದ್ದಾರೆ. ಆದರೂ ನನಗೆ ಗ್ರಂಥ ಓದುವುದು ಇಷ್ಟವಾಗಿ ಅನಿಸಲಿಲ್ಲ. ಏಕೆಂದರೇ ಬೈಬಲ್ ಓದುತ್ತಾ ಇರುತ್ತಿದ್ದೆನು, ಬೇರೇ ಗ್ರಂಥಗಳು ಓದಬೇಡವೆಂದು ನಮ್ಮ ಫಾದರ್ ಸಹ ಹೇಳಿದ್ದಾರೆ. ಆದರೇ ಅಮೀರ್ ಅಲಿ ಹೇಳಿದ ಬೋಧನೆ ನನಗೆ ಅದೇ ದಿನ ಪದೇ ಪದೇ ನೆನಪಿಗೆ ಬರುತ್ತಿದೆ. ಆತನು ಹೇಳಿದ ಬೋಧನೆ ಸತ್ಯ ಎನಿಸಿತು. ನನ್ನ ಮನಸ್ಸಿನಲ್ಲಿ ಅದೇ ದಿನ ಸಂಜೆ ಆತನು ಹೇಳಿದ ಗ್ರಂಥ ಓದಬೇಕೆಂದೆನಿಸಿತು, ದಿಲೀಪ್ ಹತ್ತಿರಕ್ಕೆ ಹೋಗಿ ಆ ಗ್ರಂಥಗಳು ನೋಡಿ ಅದರಲ್ಲಿ **"ದೇವಾಲಯ ರಹಸ್ಯಗಳು"** ಎನ್ನುವ ಗ್ರಂಥವನ್ನು ತೆಗೆದುಕೊಂಡು ಬಂದು ಓದಿದ್ದೇನೆ. ದೇವಾಲಯದಲ್ಲಿ ಇರುವ ರಹಸ್ಯಗಳು ಗ್ರಂಥದ ಮೂಲಕ ತಿಳಿದು ಅದ್ಭುತ ಎನಿಸಿತು. ಆಗ ದೇಹವೇ ದೇವಾಲಯವೆಂದು, ದೇವರು ದೇಹದಲ್ಲೇ ಇದ್ದಾನೆಂದು ತಿಳಿದು ನನ್ನ ಹೃದಯದಲ್ಲಿ ಎಷ್ಟೋ ಆನಂದ, ತೃಪ್ತಿ ಉಂಟಾಯಿತು. ನನ್ನ ಮನಸ್ಸಿನಲ್ಲಿ ಉಳಿದ ಗ್ರಂಥಗಳು ಸಹ ಓದಬೇಕೆನ್ನುವ ಪ್ರೇರಣೆ ಬೆಳೆಯಿತು. ನಂತರ ಅಮೀರ್ ಅಲೀಯೊಂದಿಗೆ ಎರಡನೆ ಬಾರಿ ಭೇಟಿಯಾದಾಗ ಜ್ಞಾನಪರವಾಗಿ ಚರ್ಚಿಸಿದ ನಂತರ ನನ್ನಲ್ಲಿ ಇರುವ ಕೆಲವು ಪ್ರಶ್ನೆಗಳಿಗೆ ಆತನ ಮೂಲಕ ತಿಳಿದ ಸಮಾಧಾನದಲ್ಲಿ ಸತ್ಯವಿದೆಯೆನ್ನುವ ನಂಬಿಕೆ, ವಿಶ್ವಾಸ ಉಂಟಾಯಿತು. ಆಗ ಆತನು ನನ್ನೊಂದಿಗೆ ಸ್ವಾಮಿಯವರ ಗ್ರಂಥಗಳು ಉಳಿದಿರುವವು ಸಹ ಓದಿರಿ, ಪ್ರಪಂಚದಲ್ಲಿ ಇಲ್ಲಿಯವರೆಗು ಯಾರಿಗೂ ತಿಳಿಯದ ಜ್ಞಾನ ರಹಸ್ಯಗಳು ಸ್ವಾಮಿಯವರ ಗ್ರಂಥಗಳ ಮೂಲಕ ತಿಳಿಯುತ್ತವೆ ಎಂದು ಹೇಳಿ ಪುನಃ ಭೇಟಿಯಾಗೋಣ, ಅಲ್ಲಿಯವರೆಗು ಗ್ರಂಥಗಳು ಓದುತ್ತಾ ಇರು ಎಂದು ಹೇಳಿ ಹೊರಟು ಹೋದನು. ಇಲ್ಲಿಯವರೆಗು ನಾನು ಓದಿದ ಗ್ರಂಥಗಳು 1. ದೇವಾಲಯ ರಹಸ್ಯಗಳು 2. ಪ್ರಬೋಧ 3. ಸುಬೋಧ 4. ಶಿಲುಬೆ ದೇವರಾ? 5. ಏಸು ಮರಣಿಸಿದ್ದಾನಾ ಹತವಾಗಿದ್ದಾನಾ? 6. ತಾಯಿ ತಂದೆ 7. ಸಮಾಧಿ 8. ತ್ರೈತಾಕಾರ ರಹಸ್ಯ 9. ಶ್ರೀಕೃಷ್ಣನು ದೇವರಾ ಭಗವಂತನಾ? 10. ದೆವ್ವಗಳ

ಭೂತಗಳ ಯಥಾರ್ಥ ಸಂಘಟನೆಗಳು 11. ಜನನ ಮರಣ ಸಿದ್ಧಾಂತ 12. ವಾರ್ತಕನು ವರ್ತಕನು 13. ಪ್ರತಿಮೆ X ವಿಗ್ರಹ 14. ಸತ್ಯಾನ್ವೇಷಿ ಕಥೆ 15. ಯಜ್ಞಗಳು 16. ನಮ್ಮ ಹಬ್ಬಗಳು 17. ಇಂದೂ ಸಂಪ್ರದಾಯಗಳು 18. ಭಗವದ್ಗೀತೆ 19. ದೇವರ ಗುರುತು 963, ಮಾಯೆ ಗುರುತು 666 20. ಪ್ರಸಿದ್ಧಿ ಬೋಧ 21. ನಾಸ್ತಿಕರು ಆಸ್ತಿಕರು 22. ಕರ್ಮಪತ್ರ 23. ದೇವರ ಚಿಹ್ನೆ 24. ದೇವರ ಮುದ್ರೆ 25. ಮತಾತೀತ ದೇವರ ಮಾರ್ಗ 26. ನಿಗೂಢ ತತ್ತ್ವಾರ್ಥ ಬೋಧಿನಿ 27. ಗಿಡ ಮೊದಲಾ? ಬೀಜ ಮೊದಲಾ? 28. ಒಬ್ಬನೇ ಇಬ್ಬರು. 29 ಕೃಷ್ಣ ಮೂಸ 30. ದ್ವಿತೀಯ ದೈವಗ್ರಂಥದಲ್ಲಿ ರತ್ನ ವಾಕ್ಯಗಳು 31. ಹಿಂದೂ ಧರ್ಮಕ್ಕೆ ರಕ್ಷಣೆ ಅವಶ್ಯವಾ? 32. ಆಧ್ಯಾತ್ಮಿಕ ಪ್ರಶ್ನೆಗಳು ಉತ್ತರಗಳು. 33. ಭಗವಾನ್ ರಾವಣ ಬ್ರಹ್ಮ.

ಈ ಗ್ರಂಥಗಳು ಎಲ್ಲವೂ ಅಮೀರ್ ಅಲಿ ಮುಖಾಂತರ ತೆಗೆದುಕೊಂಡು ಓದಿದ್ದೇನೆ. ಈಗ ವೇದಗಳು, ಉಪನಿಷತ್ತುಗಳನ್ನು ಕುರಿತಿರುವ ಗ್ರಂಥಗಳು ಕೊಟ್ಟಿದ್ದಾರೆ. ಓದುತ್ತಿದ್ದೇನೆ. ಇನ್ನೂ ಗ್ರಂಥಗಳು ಓದಬೇಕೆನ್ನುವ ಆಕಾಂಕ್ಷೆ ಬೆಳೆಯುತ್ತಲೇ ಇದೆ. ಈ ಗ್ರಂಥಗಳ ಮೂಲಕ ತಿಳಿದ ನಿಜವಾದ ಜ್ಞಾನ ಏನೆಂದರೇ ಜೀವಾತ್ಮ, ಆತ್ಮ, ಪರಮಾತ್ಮ ಎಂದು ಮೂರು ಆತ್ಮಗಳ ಜ್ಞಾನ ಇಲ್ಲಿಯವರೆಗು ಯಾರೂ ಹೇಳಲಿಲ್ಲ ಎಂದು ತಿಳಿದಿದೆ. ದೇವರಿಗೂ, ಭಗವಂತನಿಗೂ ವ್ಯತ್ಯಾಸ ತಿಳಿದಿದೆ. ಆತ್ಮ ಕೆಲಸ ತಿಳಿದಿದೆ. ಪರಮಾತ್ಮ ಅಂಶವೇ ಭಗವಂತನಾಗಿ ಕೃಷ್ಣನಾಗಿ ಬಂದಿದ್ದಾನೆಂದು ತಿಳಿದಿದೆ. ಧರ್ಮಗಳು, ಅಧರ್ಮಗಳು ತಿಳಿದಿವೆ. ನಿರಾಕಾರ, ಸಾಕಾರವನ್ನು ಕುರಿತು ತಿಳಿದಿದೆ. ಮುಖ್ಯವಾಗಿ ಶರೀರ 24 ಭಾಗಗಳು ಪ್ರಕೃತಿ ಎಂದು ಅದರಲ್ಲಿ ಮೂರು ಆತ್ಮಗಳು ಜೀವಾತ್ಮ, ಆತ್ಮ, ಪರಮಾತ್ಮರು ಇವೆಯೆಂದು ನಾನು ಜೀವಾತ್ಮ ಕರ್ಮಗಳು ಅನುಭವಿಸುವವನೆಂದು, ಆತ್ಮ ಅನುಭವಿಸುವಂತೆ ಮಾಡುವುದೆಂದು, ಪರಮಾತ್ಮ ಸಾಕ್ಷಿ ಭೂತನೆಂದು ತಿಳಿದಿದೆ ಬ್ರಹ್ಮಯೋಗ, ಕರ್ಮಯೋಗ, ಭಕ್ತಿಯೋಗ ಸಹ ತಿಳಿದಿದೆ.

ದ್ವಿತೀಯ ದೈವಗ್ರಂಥ ಬೈಬಲ್ ಮುಖಾಂತರ ಮುಂಬರುವ ಆದರಣ ಕರ್ತ ಸಾಕ್ಷಾತ್ತು ಯೋಗೀಶ್ವರರೇ, ಪರಿಶುದ್ಧಾತ್ಮ ಎಂದು ತಿಳಿದಿದೆ. ಭಗವದ್ಗೀತಾ

ಶ್ಲೋಕಗಳ ಸಾರಾಂಶ ಒಟ್ಟಾರೆ ಶರೀರದಲ್ಲಿ ಇರುವ ಜ್ಞಾನವನ್ನು ಕುರಿತೇ ಹೇಳಿದೆಯೆಂದು ತಿಳಿದಿದೆ. ಭಗವದ್ಗೀತೆಯಲ್ಲಿನ ಭಾಗವೇ ಬೈಬಲ್ ಜ್ಞಾನ ಎಂದು ತಿಳಿದಿದೆ. ಸಾಕಾರ ರೂಪದಲ್ಲಿ ಭಗವಂತನು ಹೇಳಿರುವುದೇ ನಿಜವಾದ ಜ್ಞಾನ ಎಂದು, ಅಧರ್ಮಗಳ ಆಚರಣೆ ಮೂಲಕ ಕರ್ಮಗಳು ಅಂಟಿಕೊಂಡು ಜನ್ಮಗಳು ಉಂಟಾಗುತ್ತವೆಯೆಂದು, ಧರ್ಮಗಳ ಆಚರಣೆ ಮೂಲಕ ಕರ್ಮಗಳನ್ನು ನಾಶ ಮಾಡಿ, ಮೋಕ್ಷ ಪ್ರಾಪ್ತಿಸುವಂತೆ ಮಾಡುತ್ತವೆಂದು ತಿಳಿಯಿತು. ದೇವರು ಒಬ್ಬನೇ, ದೇವರ ಜ್ಞಾನ ಒಂದೇ, ದೇವರ ಮೋಕ್ಷ ಒಂದೇ ಎನ್ನುವ ನಿಜ ತಿಳಿಯಿತು. ಮತಗಳು ಮಾನವರ ಸೃಷ್ಠಿ ಎಂದು ತಿಳಿಯಿತು. ಪ್ರಪಂಚದಲ್ಲಿ ಯಾವ ಮಾನವನೂ ಇಷ್ಟು ದೊಡ್ಡ ಜ್ಞಾನ ಹೇಳಲಾರನೆಂದು, ದೈವಶಕ್ತಿ ಹೊರತು ಮಾನವ ಶಕ್ತಿ ಹೇಳಿದ ಜ್ಞಾನ ಅಲ್ಲ ಎಂದು, ಈ ಜ್ಞಾನದ ಮೂಲಕ ಸಾಕ್ಷಾತ್ತು ಪರಮಾತ್ಮ ಅಂಶವಾದ ಭಗವಂತನೇ ಯೋಗೀಶ್ವರರು ಎಂದು, "ಭಗವಾನ್ ರಾವಣ ಬ್ರಹ್ಮ" ಮತ್ತು "ವೇದಗಳು ಮನುಷ್ಯನಿಗೆ ಅವಶ್ಯವಾ?" ಎನ್ನುವ ಗ್ರಂಥಗಳ ಮೇಲೆ ಇರುವ ನಾಲ್ಕು ದೈವಾಂಶಗಳು **1. ಭಗವಾನ್ ರಾವಣ ಬ್ರಹ್ಮ 2. ಶ್ರೀಕೃಷ್ಣನು 3. ಏಸು ಪ್ರಭುವು 4. ಯೋಗೀಶ್ವರರು** ಇವರು ನಾಲ್ವರು ಸಾಕ್ಷಾತ್ತು ಪರಮಾತ್ಮ ಅಂಶವಾದ ಭಗವಂತರೆಂದು ತಿಳಿದಿದೆ. ಪ್ರಪಂಚ ಮೂಢರನ್ನು ಜ್ಞಾನಿಗಳನ್ನಾಗಿ ಮಾಡಲು ಬಂದಿರುವ ಭಗವಂತರೆಂದು ಪೂರ್ತಿಯಾಗಿ ವಿಶ್ವಾಸಿಸುತ್ತಿದ್ದೇನೆ. ತ್ರಿಮತ ಏಕೈಕ ಗುರುವು, ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ ಎಂದು, ನಿಮ್ಮ ಗ್ರಂಥಗಳ ಮೇಲೆ ಇರುವ ವಿಷಯ 100% ನಿಜ. ತಮ್ಮ ದೈವಜ್ಞಾನ ಗ್ರಂಥಗಳ ಮೂಲಕ ನಮ್ಮ ಜೀವನ ಧನ್ಯವಾಯಿತು. ಉಳಿದ ಜೀವನವೂ ಸಹ ಜ್ಞಾನ ತಿಳಿದುಕೊಳ್ಳುತ್ತಾ, ಆಚರಿಸುತ್ತಾ ಧರ್ಮ ಪ್ರಚಾರ ಮಾಡುತ್ತಾ ಕಳೆಯಬೇಕೆಂದು ನಿಶ್ಚಯಿಸಿಕೊಂಡು ಸಂಪೂರ್ಣ ಜ್ಞಾನವನ್ನು ಆಚರಿಸುವ ಶಕ್ತಿಯನ್ನು ಅನುಗ್ರಹಿಸೆಂದು ನನ್ನ ಪೂರ್ಣ ಮನಸ್ಸಿನಿಂದ, ನನ್ನ ಪೂರ್ಣ ಹೃದಯದಿಂದ, ನನ್ನ ಪೂರ್ಣ ಆತ್ಮದಿಂದ ಸಾಕಾರ ರೂಪವಾದ ಯೋಗೀಶ್ವರರ ಪಾದ ಪದ್ಮಗಳ ಮೇಲೆ ಶಿರಸ್ಸನ್ನಿಟ್ಟು ಶರಣು ಕೋರುತ್ತಿದ್ದೇನೆ. ಭಗವದ್ಗೀತೆ ಶ್ಲೋಕಗಳು 3–9 ಮತ್ತು 17–66 ಪ್ರಕಾರ ಸಾಕಾರ ರೂಪ ಆದ ನೀವು ನಮಗೆ ಪಾಪವಿಮೋಚನೆ ಮಾಡಿ ಮುಕ್ತಿಯನ್ನು ಅನುಗ್ರಹಿಸಬೇಕೆಂದು

ಈ ಜನ್ಮದಲ್ಲಿ ನಿಮ್ಮ ದರ್ಶನ ಭಾಗ್ಯವನ್ನು ಕೊಟ್ಟು, ಧನ್ಯನನ್ನು ಮಾಡೆಂದು ಮತ್ತೊಮ್ಮೆ ಸಾಷ್ಟಾಂಗ ವಂದನೆ ನಿಮ್ಮ ಪಾದಪದ್ಮಗಳಿಗೆ ಮಾಡುತ್ತಾ...

ನಿಮ್ಮ ಸಂಪೂರ್ಣ ವಿಶ್ವಾಸಿ

**ಧನಂಜಯ್**

*****

## ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರ

### ಪಾದ ಪದ್ಮಗಳಿಗೆ ನನ್ನ ಸಾಷ್ಟಾಂಗ ವಂದನೆಗಳು.

ಸಾಕ್ಷ್ಯಾತ್ತೂ ಖುದಾಗೆ (ಸಜ್ದಾ ಕರ್ತಾಹು) ಸಾಷ್ಟಾಂಗ ವಂದನೆಗಳು ಸಮರ್ಪಿಸಿಕೊಳ್ಳುತ್ತಿದ್ದೇನೆ.

ನಾನು ಅಂದರೆ ಜೀವಾತ್ಮನಾಗಿ ಇರುವ ನನ್ನ ಶರೀರ ವೊಂದರ ಹೆಸರು ಸಯ್ಯದ್ ಸಲ್ಮಾನ್‌ಷಾ S/o ಸಯ್ಯದ್ ಮುಸ್ಲೀಮ್‌ಷಾ ನನ್ನ ವಯಸ್ಸು 34 ವರ್ಷಗಳು. ವೃತ್ತಿ ಅಕ್ವೇರಿಯಂ (ಷೋಕೇಸುಗಳಲ್ಲಿ ಮೀನುಗಳು ಬೆಳಸಿ ಮಾರುವುದು) ಮತ ಮುಸ್ಲೀಮ್, ಓದು 9 ನೇ ತರಗತಿ ಇಂಗ್ಲೀಷು ಮೀಡಿಯಂ, ನಿವಾಸ ಬೆಂಗಳೂರು (ವಿವೇಕ್‌ನಗರ್).

ಪ್ರಸ್ತುತ ಸೆಂಟ್ರಲ್ ಜೈಲ್ ಬೆಂಗಳೂರಿನಲ್ಲಿ ಅಂಡರ್ ಟ್ರೈಲ್ ಖೈದೀಯಾಗಿ (UTP) ಇದ್ದೇನೆ. ನನ್ನ ಖೈದೀ ನಂಬರ್:7579/14 ರೂಮ್ ನಂಬರ್ 10ರಲ್ಲಿ ಜೈಲು ಜೀವನವನ್ನು ಅನುಭವಿಸುತ್ತಾ ಇದ್ದೇನೆ. ನನ್ನ ಕುಟುಂಬದ ವಿವರಗಳು ಏನೆಂದರೇ ನಮ್ಮ ಕುಟುಂಬದವರು ಕಳೆದ ಏಳು ತಲೆಮಾರುಗಳಿಂದ ಮುಸ್ಲೀಮ್ ಪಂಡಿತರಾಗಿ (ಅಂದರೆ ಹಾಫಿಜೆ ಖುರಾನ್, ಆಲಿಮೆ ಖುರ್‌ಆನ್) ಇದ್ದಾರೆಂದು ತಿಳಿಸಿದ್ದಾರೆ. ಪ್ರಸ್ತುತ ನಾನು ಹೊರತು ನಮ್ಮ ಕುಟುಂಬದವರು ಎಲ್ಲರೂ ಮುಸ್ಲೀಮ್ ಪಾಂಡಿತ್ಯ ಹೊಂದಿದವರೇ. (ತಮ್ಮ ಗ್ರಂಥಗಳ ಮೂಲಕ ಜ್ಞಾನ ತಿಳಿದ ನಂತರ ಯಾರು ಪಂಡಿತರೋ ಎನ್ನುವ ವಿಷಯ ತಿಳಿದಿದೆ.)

ನಾನು ಸಾಧಾರಣ ಮುಸ್ಲೀಮ್ ಆಗಿ ಇದ್ದೂ, ನಮಾಜ್ ಮಾಡಿ ಕೊಳ್ಳುತ್ತಾ, ರೋಜಾ ಇರುತ್ತಾ ಜೀವನ ಕಳೆಯುತ್ತಾ ಇರುತ್ತಿದ್ದೆನು. ನನಗೆ

ಸಾಧಾರಣವಾಗಿ ಸಹನೆ ಬಹಳ ಕಡಿಮೆ, ಕೋಪ ಹೆಚ್ಚಾಗಿ ಇರುತ್ತಿತ್ತು. ಹೆಚ್ಚು ಅಸಹನೆಯಿಂದ, ಆವೇದನೆಯಿಂದ ಬಹಳ ಒತ್ತಡಕ್ಕೆ ಒಳಗಾಗುತ್ತಾ ಇರುತ್ತಿದ್ದೆನು. ಜ್ಞಾನಕ್ಕೆ ಸಂಬಂಧಿಸಿದ ಆಲೋಚನೆಗಳು ಬರುತ್ತಿದ್ದವು. ಆ ಕ್ರಮದಲ್ಲಿ ನಾನು ನಮ್ಮ ಮನೆಯಿಂದ ಯಾರಿಗೂ ಹೇಳದಂತೆ ಹೊರಟು ಹೋದೆನು. ಹಿಂದೂ ಪುಣ್ಯ ಸ್ಥಳಗಳಾದ ದ್ವಾರಕಾ (ಗುಜರಾತ್) ನಗರಕ್ಕೆ ಹೋಗಿದ್ದೇನೆ. ಆ ನಂತರ ಗೋಲ್ಡೆನ್ ಟೆಂಪುಲ್ (ಅಮೃತ್‌ಸರ್), ಹರಿದ್ವಾರ್, ಋಷಿಕೇಷ್, ಢಿಲ್ಲೀಯಲ್ಲಿ ಇರುವ ಆಶ್ರಮಗಳು, ಮಂದಿರಗಳು, ದರ್ಗಾಗಳನ್ನು ಸಂದರ್ಶಿ ಸಿಕೊಳ್ಳುತ್ತಾ, ಹಿಂದೂಗಳ ಜೀವನ ವಿಧಾನಗಳು, ಆಚರಣೆಗಳು, ಪೂಜಾ ವಿಧಾನಗಳು ಮತ್ತು ಮುಸ್ಲೀಮ್‌ರ ಜೀವನ ವಿಧಾನಗಳನ್ನು ಪರಿಶೀಲಿಸಿಕೊಳ್ಳುತ್ತಾ, ತಿಳಿದು ಕೊಳ್ಳುತ್ತಾ, 12 ವರ್ಷಗಳು ನಮ್ಮ ಕುಟುಂಬದವ ರೊಂದಿಗೆ ಸಂಬಂಧ ಇಲ್ಲದಂತೆ ಕಳೆದು, ಪುನಃ 2008 ನೇ ವರ್ಷದಲ್ಲಿ ಮನೆಗೆ ಬಂದಿದ್ದೇನೆ. ಮನೆಯಲ್ಲಿ ಇದ್ದೂ ಎರಡು ವರ್ಷಗಳು ಪ್ರೈವೇಟ್ ವರ್ಕ್ ಮಾಡಿಕೊಳ್ಳುತ್ತಾ ಇರುವಾಗ, ಒಬ್ಬ ಮುಸ್ಲೀಮ್ ಹುಡುಗಿಯನ್ನು ಪ್ರೀತಿಸಿ, ನಮ್ಮ ಕುಟುಂಬದವ ರೊಂದಿಗೆ ಆಕೆಯೊಂದಿಗೆ ಮದುವೆ ವಿಷಯವನ್ನು ಕುರಿತು ಚರ್ಚಿಸಿದರೇ ಅವರು ತಿರಸ್ಕರಿಸಿದ್ದಾರೆ. ಹುಡುಗಿಯವರ ತಾಯಿ ತಂದೆ ಸಹ ಒಪ್ಪಿಕೊಳ್ಳಲಿಲ್ಲ. ಆಗ ನಾನು ಹುಡುಗಿಯನ್ನು ಹೈದ್ರಾಬಾದ್‌ಗೆ ಕರೆದುಕೊಂಡು ಹೋಗಿ, ಅಲ್ಲಿ ಮದುವೆ ಮಾಡಿಕೊಂಡು, ಬಾಗ್ ಅಂಬರ್ ಪೇಟ್, ಹೈದ್ರಾಬಾದ್‌ನಲ್ಲಿ ನಾಲ್ಕು ತಿಂಗಳು ಇದ್ದು ಪುನಃ ಬೆಂಗಳೂರ್‌ಗೆ ಬಂದಿದ್ದೇನೆ. ನಾನು ನಮ್ಮ ಮನೆಗೆ ಹೋಗದಂತೆ ಬಾಡಿಗೆ ಮನೆಯಲ್ಲಿ ಇರುತ್ತಿದ್ದೆನು. ಅಲ್ಲಿಯವರೆಗು ನಾನು ಮುಸ್ಲೀಮ್ ಗ್ರಂಥಗಳು ಯಾವುವೂ ಓದಲಿಲ್ಲ. 2013 ನೇ ವರ್ಷದ ವರೆಗು ನಾನು ಸಾಧಾರಣ ಜೀವನ ಕಳೆಯುತ್ತಿರುವಾಗ ಕುಟುಂಬ ಕಲಹಗಳ ಕಾರಣದಿಂದ, ನಮ್ಮ ಚಿಕ್ಕಪ್ಪನನ್ನು ಹತ್ಯೆ ಮಾಡುವುದು ನಡೆದಿದೆ. ಅದು ನಾನು ಮಾಡಿದ್ದೇನೆಂದು ಯಾರಿಗೂ ತಿಳಿದಿಲ್ಲ. ಪುನಃ ಕುಟುಂಬ ಕಲಹಗಳ ಕಾರಣವಾಗಿ 2014 ರಲ್ಲಿ 7 ವರ್ಷಗಳು ಇರುವ ನನ್ನ ತಂಗಿಯ ಮಗಳನ್ನು ಸಹ ನನ್ನ ಹೆಂಡತಿ ಸಹಾಯದಿಂದ ಹತ್ಯೆ ಮಾಡುವುದು ನಡೆದಿದೆ. ಆಗ ಹಳೇ ಹತ್ಯೆ ವಿಷಯವೂ ಸಹ ತಿಳಿದುಹೋಗಿದೆ. ಈ ಎರಡು ಹತ್ಯೆಗಳ ಕಾರಣವಾಗಿ ನಾನು, ನನ್ನ ಹೆಂಡತಿ 2014 ನೇ ವರ್ಷ

ಜುಲೈ ತಿಂಗಳು 14ನೇ ತಾರೀಖಿನಂದು ಜೈಲಿಗೆ ಬರುವುದು ನಡೆದಿದೆ. ಅಂದಿನಿಂದ ಅಂದರೆ 14.07.2014 ರಿಂದ ಇಂದಿನವರೆಗು ಅಂದರೆ ನಾಲ್ಕು ವರ್ಷಗಳಿಂದ ಇಬ್ಬರೂ ಸಹ ಜೈಲಿನಲ್ಲೇ ಇದ್ದೇವೆ.

ನಾನು ಜೈಲಿಗೆ ಬಂದ ನಂತರ ಜೈಲಲ್ಲೇ ಇರುವ ಕೆಲವು ಮಂದಿ ಮುಸ್ಲೀವ್‌ರೊಂದಿಗೆ ಪರಿಚಯವಾಗಿ, 2014 ಜುಲೈ ನಿಂದ 2016 ಡಿಸೆಂಬರ್‌ವರೆಗು ಹದೀಸುಗಳು ಓದಿಕೊಳ್ಳುತ್ತಾ, ನಮಾಜ್ ಮಾಡುತ್ತಾ, ರೋಜಾ ಇದ್ದು ಕಳೆಯುತ್ತಿದ್ದೇನೆ. ನಾನು ಓದಿದ ಹದೀಸುಗಳು 1. ಸಹೀ ಬುಖಾರಿ (9 ವಾಲ್ಯೂಮ್‌ಗಳು), 2. ಅಬುದಾವೂದ್ 3. ತಿರ್ಮಿಜಿ 4. ಸಹಿ ಮುಸ್ಲೀಮ್ ಮತ್ತು ಮುಹಮ್ಮದ್ ಪ್ರವಕ್ತ ಜೀವನ ಚರಿತ್ರೆ (ಸರಾತುನ್ನಬಿ), ಅವರ ಶಿಷ್ಯರ ಖಲೀಫಾಗಳ ಚರಿತ್ರೆಗಳನ್ನು ಓದಿದ್ದೇನೆ. ಆದರೇ ಹದೀಸುಗಳು ಕೆಲವು ವಿಷಯಗಳಲ್ಲಿ ಒಂದರಲ್ಲಿ ಹೇಳಿರುವುದಕ್ಕೆ, ಮತ್ತೊಂದಕ್ಕೆ ವಿರುದ್ಧವಾಗಿ ಇರುತ್ತಿದ್ದವು. ನಮಾಜ್ ವಿಧಾನ ಒಂದು ಹದೀಸು ಮತ್ತೊಂದು ಹದೀಸು ಹೇಳುವ ವಿಧಾನಕ್ಕೆ ವಿರುದ್ಧವಾಗಿ ಇತ್ತು. ಜೈಲ್‌ನಲ್ಲಿ ಸಹ ನಾಲ್ಕು, ಐದು (ಫಿರ್ಕೇ) ವರ್ಗದವರು ಇದ್ದಾರೆ. ಒಟ್ಟಾರೆ ಮುಸ್ಲೀಮ್ ಸಮಾಜ 73 ವರ್ಗಗಳಾಗಿ ಇದ್ದಾರೆಂದು, 73ನೇ ವರ್ಗ ಒಂದು ಮಾತ್ರವೇ ಜನ್ನತ್ (ಸ್ವರ್ಗ) ದೊಳಗೆ ಹೋಗುತ್ತದೆಂದು ಹೇಳುತ್ತಿದ್ದರು. 73 ವರ್ಗಗಳಲ್ಲಿ ಆ ಒಂದು ಯಾವುದು ಎಂದರೆ ಎಲ್ಲರೂ ನಮ್ಮದು ನಮ್ಮದು ಮಾತ್ರವೇ ಜನ್ನತ್ ಒಳಗೆ ಹೋಗುತ್ತದೆ. ಉಳಿದ ವರ್ಗದವರು ಹೋಗುವುದಿಲ್ಲ ಎನ್ನುತ್ತಿದ್ದರು. ಯಾವ ವರ್ಗ ಜನ್ನತ್‌ನೊಳಗೆ ಹೋಗುವುದಿಲ್ಲವೆಂದು ನಂಬಿಕೆ, ರುಜು ಏನು ಎಂದರೇ ಪ್ರಳಯ ದಿನ ಅಲ್ಲಾಹ್ ಹತ್ತಿರಕ್ಕೆ ಹೋದ ನಂತರ ತಿಳಿಯುತ್ತದೆ ಆದರೆ ಈಗ ಹೇಳಲಾರೆವು, ಯಾರಿಗೂ ತಿಳಿದಿಲ್ಲ ಎಂದು ಹೇಳುತ್ತಿದ್ದಾರೆ. ನಮಾಜ್ ಮಾಡಿಕೊಳ್ಳುತ್ತಾ, ರೋಜಾ ಇದ್ದೂ, ಬೋಧನೆಗಳು ಕೇಳುತ್ತಾ ಇದ್ದರೇ, ಪಾಪಗಳೆಲ್ಲವೂ ಕ್ಷಮಿಸಲ್ಪಟ್ಟು ಸ್ವರ್ಗದೊಳಗೆ ಹೋಗುತ್ತೇವೆ ಎಂದು ಹೇಳುತ್ತಿದ್ದರು. ಜ್ಞಾನವನ್ನು ಕುರಿತು ಎಷ್ಟು ತಿಳಿದುಕೊಳ್ಳುತ್ತಿದ್ದರೇ, ಹದೀಸುಗಳು ಓದುತ್ತಿರುವಾಗ ಪ್ರಶ್ನೆಗಳು, ಸಂದೇಹಗಳು ಇರುತ್ತಿದ್ದರೇ ಬೆಳೆಯುತ್ತಾ ಇವೆ ಆದರೇ ಸ್ಪಷ್ಟವಾದ ಸಮಾಧಾನ ದೊರಕುತ್ತಿಲ್ಲ. ತಿಳಿದವರೆಂದು ಹಿರಿಯರೆಂದು ಕೇಳಿದರೇ ಅವರು

ಹೇಳುವ ಸಮಾಧಾನ ಅಸಂಪೂರ್ತಿಯಾಗಿ ಇರುತ್ತಿತ್ತು. ಒಬ್ಬರು ಹೇಳುವುದಕ್ಕೂ ಮತ್ತೊಬ್ಬರು ಹೇಳುವುದಕ್ಕೂ ಹೊಂದಾಣಿಕೆ ಇಲ್ಲದಂತೆ ಇರುತ್ತಿತ್ತು.

ಹೀಗೆ ನನ್ನ ಜೀವನ ಸಾಗುತ್ತಿರುವಾಗ 2016 ನೇ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ನಾನಿರುವ ರೂಮ್ (ಬ್ಯಾರಕ್) ಗೆ ಅಮೀರ್ ಅಲಿ ಎನ್ನುವ ವ್ಯಕ್ತಿ ಬಂದನು. ಆತನು ಯಾವಾಗಲೂ ಏನೋ ಓದುತ್ತಾ, ಬರೆದುಕೊಳ್ಳುತ್ತಾ ಇರುತ್ತಿದ್ದನು, ಯಾರೊಂದಿಗೂ ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ನನಗೆ 2016 ನೇ ವರ್ಷ ನವಂಬರ್ ತಿಂಗಳಲ್ಲಿ ವಿಪರೀತವಾದ ಬ್ಯಾಕ್‌ಪೆಯಿನ್ ಬಂದು ಬಹಳ ಬಾಧೆ ಬೀಳುತ್ತಿದ್ದೆ. ಆಗ ನನಗೆ ಬೇರೆಯವರಿಂದ ಅಮೀರ್ ಅಲಿಗೆ ತೋರಿಸು, ಆತನು ಯಾವುದೋ ಟ್ರೀಟ್‌ಮೆಂಟ್ ಮಾಡುತ್ತಾನಂತೆ ಎಂದು ತಿಳಿದು ಆತನಿಗೆ ನನ್ನ ಪ್ರಾಬ್ಲಮ್ ಕುರಿತು ಹೇಳಿದ್ದೇನೆ. ಆಗ ಆತನು ನನ್ನನ್ನು ಚೆಕ್ ಮಾಡಿ ಯಾವುದೋ ಪಾಯಿಂಟ್‌ಗಳ ಮೇಲೆ ಒತ್ತಿ ಟ್ರೀಟ್‌ಮೆಂಟ್ ಮಾಡಿದ್ದಾನೆ. ಆಗ ಕೂಡಲೇ ನೋವು ಕಡಿಮೆಯಾಗಿ ರಿಲೀಫ್ ಆಯಿತು. ಅದರಿಂದ ಅವರೊಂದಿಗೆ ಪರಿಚಯ ಬೆಳೆದು ಜ್ಞಾನವನ್ನು ಕುರಿತು ಕೇಳುವುದು ನಡೆದಿದೆ. ಆಗ ಆತನು ಜ್ಞಾನವನ್ನು ಕುರಿತು ತಿಳಿದುಕೊಳ್ಳಬೇಕೆಂದು ಇದ್ದರೇ ಬಂದು ಕುಳಿತುಕೊಳ್ಳಿ ಚರ್ಚಿಸಿಕೊಳ್ಳೋಣ ಎಂದು ಹೇಳಿದನು. ಅಂದಿನಿಂದ (2016 ಡಿಸೆಂಬರ್‌ನಿಂದ) ಪ್ರತಿ ದಿನ ಸಂಜೆ ಲಾಕಪ್ ನಂತರ 7 ಗಂಟೆಯಿಂದ 9 ಗಂಟೆಯವರೆಗು, ನನಗಿರುವ ಸಂಶಯಗಳಿಗೆ ಖುರ್‌ಆನ್ ಆಯತ್‌ಗಳ ಮೂಲಕ ತೋರಿಸಿ ವಿವರಿಸುತ್ತಿದ್ದರು. ಒಂದು ತಿಂಗಳಲ್ಲಿ ನನ್ನ ಸಂದೇಹಗಳಿಗೆ ಬಹಳ ಉತ್ತರಗಳು ಸಿಗುತ್ತಿದ್ದವು. ಅಷ್ಟೇ ಅಲ್ಲದೆ ಎಷ್ಟೋ ತಿಳಿಯದ ರಹಸ್ಯಗಳು ಸಹ ತಿಳಿಸುತ್ತಿದ್ದರು. ಖುರ್‌ಆನ್‌ನಲ್ಲಿ ಶರೀರವನ್ನು ಕುರಿತಾದ ಆಯತ್‌ಗಳು ಹೀಗೆ ಇವೆಯೆಂದು, ಅಲ್ಲಾಹ್ ವಿಧಾನ ಹೀಗೆ ಇದೆಯೆಂದು ವಿವರಿಸುತ್ತಿದ್ದರು. ಇಲ್ಲಿಯವರೆಗು ಯಾರೂ ಹೇಳದಿರುವವು, ಯಾರಿಗೂ ತಿಳಿಯದಿರುವವು ಹೇಳುತ್ತಿದ್ದರೇ ಪೂರ್ತಿ ಸತ್ಯ, ನಿಜವಾದುದೆಂದು ಅನಿಸಿತು. ಆಗ ಇನ್ನೂ ಹೆಚ್ಚಿನ ಜ್ಞಾನ ವಿಷಯಗಳು ತಿಳಿದುಕೊಳ್ಳಬೇಕೆಂದು ಹಗಲು ಕೂಡಾ ಜ್ಞಾನವನ್ನು ಕುರಿತು ಹೇಳೆಂದು ಕೇಳಿದ್ದೇನೆ.

ಆಗ ಆತನು ಸುರಾ 3–7 ಆಯತ್‌ನ್ನು ತೋರಿಸಿ ಖುರ್‌ಆನ್‌ನಲ್ಲಿ ಮುಹ್ಕಮಾತ್ ಮತ್ತು ಮುತಷಾಬಿಹಾತ್ (ಸ್ಥೂಲ,ಸೂಕ್ಷ್ಮ) ಆಯತ್‌ಗಳು ಇವೆ, ಇವು ಇಲ್ಲಿಯವರೆಗು ಮುಸ್ಲೀಮ್‌ರಿಗೆ ತಿಳಿಯದೆ ಖುರ್‌ಆನ್ ಪೂರ್ತಿ ಆಯತ್‌ಗಳನ್ನು ಸ್ಥೂಲವಾಗಿ ಬರೆದುಕೊಂಡಿದ್ದಾರೆ. ಅದಕ್ಕೇ ಖುರ್‌ಆನ್ ಯಾರಿಗೂ ಸರಿಯಾಗಿ ಅರ್ಥವಾಗದೆ, ಯಾರಿಗೆ ಅರ್ಥವಾಗಿರುವುದು ಅವರು ಹದೀಸುಗಳ ರೂಪದಲ್ಲಿ ಬರೆದುಕೊಂಡು, 72 ವರ್ಗಗಳಾಗಿ ಸೀಳಿಹೋಗಿದ್ದಾರೆ. ಈ ಸೂಕ್ಷ್ಮ ಖುರ್‌ಆನ್ ಆಯತ್‌ಗಳನ್ನು ಪ್ರಬೋಧಾನಂದ ಯೋಗೀಶ್ವರರು ಎನ್ನುವ ಒಬ್ಬ ಸ್ವಾಮಿಯವರು ಇವುಗಳ ವಿವರಣೆಯನ್ನು ಕುರಿತು ಗ್ರಂಥದಲ್ಲಿ ಬರೆದಿದ್ದಾರೆ. ಅವರ ಮೂಲಕವೇ ನನಗೆ ಈ ಜ್ಞಾನ ಸಿಕ್ಕಿದೆಯೆಂದು, ಅವರು ಮೂರು ಮತಗಳ ಜ್ಞಾನ ಹೇಳುತ್ತಾರೆ, ಬಹಳ ಗ್ರಂಥಗಳನ್ನು ಬರೆದಿದ್ದಾರೆ. ನಿನಗೆ ಶ್ರದ್ಧೆ ಇದ್ದರೇ ಜ್ಞಾನ ತಿಳಿದುಕೊಳ್ಳಬೇಕೆಂದು ಅನಿಸಿದರೇ, ನಿನಗೆ ಸ್ವಾಮಿಯವರು ಬರೆದ ಗ್ರಂಥಗಳು ನನ್ನ ಹತ್ತಿರ ಇವೆ. ಓದುತ್ತೇನೆಂದರೆ ಕೊಡುತ್ತೇನೆ ಅವು ತೆಲುಗು ಮತ್ತು ಕನ್ನಡ ಭಾಷಗಳಲ್ಲಿಯೇ ಇವೆ. ಕೆಲವು ಉರ್ದೂ ಭಾಷೆಯಲ್ಲೂ ಇವೆ ಎಂದು ಹೇಳಿದ್ದಾರೆ. ಆಗ ನಾನು ನನಗೆ ಕನ್ನಡ ಭಾಷೆ ಬರುತ್ತದೆಂದು ಹೇಳಿದ್ದೇನೆ. ಆಗ ನನಗೆ ಮೊದಲ ಬಾರಿ 2017 ನೇ ವರ್ಷ ಜನವರಿಯಲ್ಲಿ **"ಧರ್ಮಶಾಸ್ತ್ರ ಯಾವುದು"** ಎನ್ನುವ ಗ್ರಂಥವನ್ನು ಕೊಟ್ಟಿದ್ದಾರೆ. ಅಲ್ಲಿಯವರೆಗು ನನಗೆ ಧರ್ಮ ಎಂದರೇ, ಶಾಸ್ತ್ರ ಎಂದರೇ ಕೂಡಾ ಏನೂ ತಿಳಿದಿಲ್ಲ. ಆದರೇ ಈ ಗ್ರಂಥ ಓದಿದ ನಂತರ ಧರ್ಮ, ಶಾಸ್ತ್ರ ಎಂದರೆ ಏನೋ ತಿಳಿದಿದೆ. ಅಷ್ಟೇ ಅಲ್ಲದೆ ಬಹಳ ಜ್ಞಾನ ವಿಷಯಗಳು ತಿಳಿದಿವೆ. ಎಲ್ಲಾ ವಾಸ್ತವಗಳಾಗಿ ಅರ್ಥವಾಗಿವೆ. ಉಳಿದ ಗ್ರಂಥಗಳು ಕೂಡಾ ಓದಬೇಕೆನ್ನುವ ಶ್ರದ್ಧೆ ಬೆಳಿಯಿತು. ನಾನು 2017 ನೇ ವರ್ಷ ಜನವರಿ ಯಿಂದ 2018 ನೇ ವರ್ಷ ಏಪ್ರಿಲ್ ವರೆಗು ಓದಿದ ಒಟ್ಟಾರೆ ಗ್ರಂಥಗಳು 1. ಧರ್ಮಶಾಸ್ತ್ರ ಯಾವುದು? 2. ಪ್ರವಕ್ತರು ಯಾರು? 3. ಕರ್ಮಪತ್ರ 4. ಒಂದು ಮಾತು ಮೂರು ಗ್ರಂಥಗಳು  5. ದೇವರ ತೀರ್ಪು (ಜಡ್ಜಿಮೆಂಟ್ ಆಫ್ ಗಾಡ್) 6. ಮೂರು ಗ್ರಂಥಗಳು ಇಬ್ಬರು ಗುರುಗಳು ಒಬ್ಬ ಬೋಧಕನು 7. ಒಬ್ಬನೇ ಇಬ್ಬರು 8. ದೇವರ ಆಗಮನಕ್ಕೆ ಇದು ಸಮಯವಲ್ಲವೆ? 9. ಏಸು

ಮರಣಿಸಿದ್ದಾನಾ ? ಹತವಾಗಿದ್ದಾನಾ? 10. ತ್ರೈತಾಕಾರ ರಹಸ್ಯ 11. ನಿನಗೆ ನನ್ನ ಲೇಖೆ 12. ಗೀತಾ ಪರಿಚಯ 13. ಸಾಯಿಬಾಬಾ ದೇವರಾ ಅಲ್ಲವಾ? 14. ಮಂತ್ರ–ಮಹಿಮೆ 15. ದೇವಾಲಯ ರಹಸ್ಯಗಳು 16. ಇಂದೂ ಸಂಪ್ರದಾಯಗಳು 17. ದೆವ್ವಗಳ–ಭೂತಗಳ ಯದಾರ್ಥ ಸಂಘಟನೆಗಳು 18. 1058 ಆಧ್ಯಾತ್ಮಿಕ ಪ್ರಶ್ನೆ–ಉತ್ತರಗಳು 19. ಭಗವದ್ಗೀತೆ 20. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ? 21. ದೇವರ ಚಿಹ್ನೆ 22. ಯಾವುದು ನಿಜವಾದ ಜ್ಞಾನ 23. ಮರಣದ ನಂತರ ಜೀವನ 24. ಜನನ ಮರಣ ಸಿದ್ಧಾಂತ 25. ಪುನರ್ಜನ್ಮ ರಹಸ್ಯ 26. ಸಮಾಧಿ 27. ವಿಶ್ವವಿದ್ಯಾಲಯ 28. ಸುಬೋಧ 29. ಶ್ರೀ ಕೃಷ್ಣನು ದೇವರಾ ಭಗವಂತನಾ? 30. ಹಿಂದೂ ಮತದಲ್ಲಿ ಸಿದ್ಧಾಂತ ಕರ್ತರು 31. ಧ್ಯಾನ–ಪ್ರಾರ್ಥನೆ–ನಮಾಜ್ 32. ಒಗಟುಗಳ ಜ್ಞಾನ 33. ಹೇತುವಾದ ಪ್ರಶ್ನೆಗಳು–ಸತ್ಯವಾದ ಉತ್ತರಗಳು 34. ಹಿಂದೂ ಮತದಲ್ಲಿ ಕುಲವಿವಕ್ಷ 35. ಶಿಲುಬೆ ದೇವರಾ? 36. ವಾರ್ತಕನು – ವರ್ತಕನು 37. ಪ್ರಬೋಧ 38. ನಮ್ಮ ಹಬ್ಬಗಳು 39. ತಾಯಿ ತಂದೆ 40. ತ್ರೈತಾರಾಧನೆ 41. ಭಗವಾನ್ ರಾವಣ ಬ್ರಹ್ಮ 42. ಒಬ್ಬ ವ್ಯಕ್ತಿ ಎರಡು ಕೋನಗಳು 43. ಪ್ರಥಮ ದೈವ ಗ್ರಂಥ ಭಗವದ್ಗೀತೆ 44. ಮತ ಪಥ 45. ಅಂತಿಮ ದೈವ ಗ್ರಂಥದಲ್ಲಿ ಜ್ಞಾನ ವಾಕ್ಯಗಳು, ಎರಡನೆಯದು ವಜ್ರ ವಾಕ್ಯಗಳು ಮತ್ತು 46. ದ್ವಿತೀಯ ಗ್ರಂಥ ಬೈಬಲ್ ಕೂಡಾ ತೆಲುಗು ಭಾಷೆಯಿಂದ ಉರ್ದೂದಲ್ಲಿ ಟ್ರಾನ್ಸ್‌ಲೇಷನ್ ಮಾಡಿ ಪ್ರತಿ ದಿನ ಎರಡು ಗಂಟೆಗಳು ಹೇಳುತ್ತಿದ್ದರು. ಉಳಿದ ಗ್ರಂಥಗಳಲ್ಲಿ ಇರುವ ಡೌಟ್ಸ್ ಸಹ ಅಮೀರ್ ಅಲಿದಿವರನ್ನು ಕೇಳಿ ತಿಳಿದು ಕೊಳ್ಳುತ್ತಿದ್ದೆನು.

ಮೇಲೆ ತಿಳಿಸಿದ ಗ್ರಂಥಗಳು ಒಂದೊಂದು ಗ್ರಂಥ ಓದುತ್ತಾ ಇದ್ದರೇ ನನಗೆ ಪ್ರತಿ ಒಂದು ಗ್ರಂಥದಲ್ಲಿ ತಿಳಿಯುವ ಜ್ಞಾನದೊಂದಿಗೆ ಆನಂದದಿಂದ ಹೊಸ ಅನುಭೂತಿಗಳು ಹೊಂದುತ್ತಾ, ನನ್ನ ಹೃದಯ ರೋಮಾಂಚನವಾಗುತ್ತಿತ್ತು. ನನ್ನ ಗತ ಜೀವನದಲ್ಲಿ ಇದ್ದ ಕೋಪ ಕಡಿಮೆಯಾಗಿದೆ, ಸಹನೆ ಬೆಳೆದಿದೆ. ನನ್ನಲ್ಲಿ ಊಹಿಸದ ಬದಲಾವಣೆ ಬಂದಿತು. ನನಗೆ ತಮ್ಮ ಜ್ಞಾನದ ಮೂಲಕ ಹೊಸ ಜನ್ಮ (ಅಂದರೇ ಬಿಂದು ಪುತ್ರನಿಂದ ನಾದ ಪುತ್ರನ ಜನ್ಮ) ಪ್ರಸಾದಿಸಲ್ಪಟ್ಟಿದೆ ಯೆಂದು ಆನಂದವಾಗಿ ಇದ್ದೇನೆ.

ಸಾಕ್ಷಾತ್ತೂ ಖುದಾ ಹೇಳಿದ ಜ್ಞಾನದ ಮೂಲಕ ತಿಳಿದ ನಿಗೂಢ ರಹಸ್ಯ ನಿಜಗಳು ಏನೆಂದರೆ ಮೂರು ಆತ್ಮಗಳ ಜ್ಞಾನ (ಜೀವಾತ್ಮ, ಆತ್ಮ, ಪರಮಾತ್ಮ) ಮೂರು ಗ್ರಂಥಗಳಲ್ಲಿ ಇದೆಯೆಂದು ಭಗವದ್ಗೀತೆ 14–16, 17 ಶ್ಲೋಕಗಳು ಬೈಬಲ್ ಮತ್ತಾಯ ಸುವಾರ್ತೆ 28–19 ವಾಕ್ಯ, ಖುರ್‌ಆನ್‌ನಲ್ಲಿ 50–21 ಆಯತ್‌ಗಳ ಮೂಲಕ ತಿಳಿದಿದೆ. ಮೂರು ದೈವ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ಜ್ಞಾನ ದೇವರು ಒಬ್ಬನೇ, ದೇವರ ಜ್ಞಾನ ಒಂದೇ, ದೇವರನ್ನು ಸೇರಬೇಕಾದ ಗಮ್ಯ ಕೂಡಾ ಒಂದೇ ಎನ್ನುವ ವಿಷಯ ತಿಳಿದುಹೋಗಿದೆ. ಮತಗಳನ್ನು ಮಾನವರು ತಯಾರು ಮಾಡಿಕೊಂಡಿದ್ದಾರೆಂದು ಅರ್ಥವಾಗಿದೆ.

ನಾನು ಮುಸ್ಲೀಮ್ ಆಗಿ ನನ್ನ ಜವಾಬ್ದಾರಿ ನಮಾಜ್, ರೋಜಾ, ಜಕಾತ್, ಹಜ್ ಮಾಡಿ, ಹದೀಸುಗಳಲ್ಲಿ ತಿಳಿಸಿದ ಪ್ರವಕ್ತ ಆದೇಶಗಳನ್ನು (ಸುನ್ನತ್‌ಗಳನ್ನು) ಆಚರಿಸಿದರೇ ನಾನು ನಿಜವಾದ ಮುಸ್ಲೀಮ್‌ನಂತೆ ಬದಲಾಗಿ ಜನ್ನತ್ (ಸ್ವರ್ಗ) ದಲ್ಲಿ ಸೇರಿ ಹೋಗುತ್ತೇನೆಂದು ನಂಬಿದ್ದೆ. ಆದರೇ ಖುದಾ ಬರೆದ ಗ್ರಂಥಗಳು ಓದಿದ ನಂತರ ನಿಜವಾದ ಜ್ಞಾನ ತಿಳಿದ ನಂತರ, ಅಸಲು ನಿಜವಾದ ಮುಸ್ಲೀಮ್ ಯಾರೋ ತಿಳಿದುಹೋಗಿದೆ. ನಿಜವಾದ ನಮಾಜ್, ಜಕಾತ್, ರೋಜಾ, ಹಜ್, ಅಲ್ಲಾಹ್ ಸೃಷ್ಠಿ ಆದಿಯಲ್ಲಿ ಇದ್ದ ಹೆಸರುಗಳು ಎಂದು, ಅವುಗಳನ್ನು ಕುರಿತು ವಿವರಣೆ ಓದಿದ ನನಗೆ ಯಾವುದೋ ರಹಸ್ಯ ನಿಧಿ (ದೈವನಿಧಿ) ಸಿಕ್ಕಿದಷ್ಟು ಆನಂದ ಉಂಟಾಗಿದೆ. ಜನ್ನತ್ ದೋಜಖ್ (ಸ್ವರ್ಗ, ನರಕ) ಅಂದರೆ ಏನು? ಮೋಕ್ಷ (ಆಖಿರತ್) ಅಂದರೆ ಏನು? ಅವು ಎಲ್ಲಿ ಇವೆ? ಹೇಗೆ ಇವೆ? ಎನ್ನುವ ವಿಷಯ ತಿಳಿದಿದೆ. ನಮ್ಮ ಮುಸ್ಲೀಮ್‌ರಿಗೆ ತಿಳಿಯದ ಮೋಕ್ಷ (ಆಖಿರತ್, ನಜಾತ್) ಕೂಡ ಇದೆಯೆಂದು ಸ್ವಾಮಿಯವರ ಗ್ರಂಥಗಳ ಜ್ಞಾನದ ಮೂಲಕ ತಿಳಿದು ಆನಂದಭರಿತನಾಗಿದ್ದೇನೆ.

ತೌರಾತ್ ಎಂದರೇ ಭಗವದ್ಗೀತೆ ಎಂದು ಪ್ರಪಂಚಕ್ಕೇ ತಿಳಿಯದ ದೊಡ್ಡ ರಹಸ್ಯ ಜ್ಞಾನವನ್ನು ಹೇಳಿದ ಪ್ರಪಂಚದಲ್ಲೇ ಮೊದಲ ವ್ಯಕ್ತಿಯಾಗಿ ಕೀರ್ತಿ ಗಳಿಸಿದ್ದಾರೆ. ಖುರ್‌ಆನ್‌ನಲ್ಲಿ ತೌರಾತ್ ಎಂದರೆ ಏನೋ 5–44, 46, 48, 68 ಮತ್ತು 62–5 ಆಯತ್‌ಗಳ ಮೂಲಕ ರುಜು ಮಾಡಿದ್ದಾರೆ.

ಖುರ್ಆನ್‌ನಲ್ಲಿ 25–1, 2–53, 8–8 ಪ್ರಕಾರ ಫುರ್ಖಾನ್ (ಒರೆ ಕಲ್ಲು) ಮುಹಮ್ಮದ್ ಪ್ರವಕ್ತರಿಗೆ ಕೊಟ್ಟಿರುವ ಒರೆ ಕಲ್ಲು, ಮೂಸಾಗೆ ಕೊಟ್ಟಿರುವ ಒರೆಕಲ್ಲು (ಫುರ್ಖಾನ್) ಒಂದೇ ಎಂದು, ಆ ಆಯತ್‌ಗಳ ಮೂಲಕ ತೌರಾತ್ (ಭಗವದ್ಗೀತೆ) ನಲ್ಲಿ ಇರುವ ಜ್ಞಾನ, ಖುರ್ಆನ್‌ನಲ್ಲಿ ಇರುವ ಜ್ಞಾನ ಒಂದೇ ಯೆಂದು ಮತ್ತು ತೌರಾತ್ ಖುರ್ಆನ್‌ಗೆ ಮಾತೃ ಗ್ರಂಥ (ಉಮ್ಮುಲ್ ಕಿತಾಬ್) ಎಂದು, ಬೈಬಲ್ ಕೂಡಾ ಭಗವದ್ಗೀತೆಯಲ್ಲಿನ ಭಾಗವೇಯೆಂದು ಪರಮ ರಹಸ್ಯ ತಿಳಿದಿದೆ. ಮೂರು ಗ್ರಂಥಗಳು ಒಂದೇ ದೈವವನ್ನು ಕುರಿತು, ಮೂರು ಆತ್ಮಗಳ ಕುರಿತು ಹೇಳಿರುವವೆಂದು ಜೀವಾತ್ಮಗಳಾದ ನಮಗೆ ಮುಕ್ತಿಯನ್ನು ಪ್ರಸಾದಿಸುವವೇ ಮೂರು ಗ್ರಂಥಗಳು ಎಂದು ಸ್ವಾಮಿ ಅವರ ಜ್ಞಾನದ ಮೂಲಕ ತಿಳಿದಿದೆ.

ತೌರಾತ್ (ಭಗವದ್ಗೀತೆ) ನಲ್ಲಿ ಹೇಳಿದ ಪ್ರಕಾರ ಧರ್ಮಗಳು, ಅಧರ್ಮಗಳು ಅಂದರೇ ಏನು, ಧರ್ಮಗಳು (ಬ್ರಹ್ಮ, ಕರ್ಮ, ಭಕ್ತಿ ಯೋಗಗಳು) ಆಚರಿಸಿದರೇ ಮೋಕ್ಷ ಬರುತ್ತದೆಂದು, ಅಧರ್ಮಗಳು (ದಾನ, ವೇದಗಳು, ಯಜ್ಞಗಳು, ತಪಸ್ಸುಗಳು) ಆಚರಿಸಿದರೇ ಪಾಪ, ಪುಣ್ಯ ಕರ್ಮಗಳು ಅಂಟಿಕೊಂಡು ಜನ್ಮಗಳು ಉಂಟಾಗುತ್ತವೆಂದು ತಿಳಿದಿದೆ. ಧರ್ಮಗಳು ತಿಳಿದು ಆಚರಿಸಿದರೇ ಮೋಕ್ಷ ಪ್ರಾಪ್ತಿಸುತ್ತದೆಂದು, ಈ ವಿಷಯವೇ ಖುರಾನ್‌ನಲ್ಲಿ ಇದೆಯೆಂದು ತಿಳಿದಿದೆ.

ಭಗವದ್ಗೀತೆಯೇ ತೌರಾತ್ ಗ್ರಂಥ ಎಂದು, ತೌರಾತ್ ಹೆಸರಿನೊಂದಿಗೆ ಗ್ರಂಥ ಎಲ್ಲೂ ಇಲ್ಲವೆಂದು ಬೈಬಲ್‌ನಲ್ಲಿ ಮೋಷೇಗೆ, ಖುರ್ಆನ್‌ನಲ್ಲಿ ಮೂಸಾಗೆ ಕೊಡಲಾಗಿರುವುದೇ ಭಗವದ್ಗೀತೆ ಗ್ರಂಥ ಎಂದು ಖುರಾನ್ 6–91 ಆಯತ್ ಮೂಲಕ ತಿಳಿದಿದೆ. ಸೃಷ್ಠಿ ಆದಿಯಲ್ಲಿ ದೇವರ ಜ್ಞಾನ ಭಗವದ್ಗೀತೆ ಶ್ಲೋಕ 4–1 ಮೂಲಕ ಪರಮಾತ್ಮ ಮೊದಲು ಸೂರ್ಯನಿಗೆ ಹೇಳಿದ್ದಾನೆ ಎಂದು, ಸೂರ್ಯನು ಮನುವಿಗೆ ಹೇಳಿದ್ದಾನೆಂದು, ಮನುವಿನಿಂದ ಇಕ್ಷ್ವಾಕನೆಂಬ ರಾಜನಿಗೆ ತಿಳಿದಿದೆಯೆಂದು, ಅದೇ ಜ್ಞಾನ (ಜಪರ ಜ್ಞಾನ) 5000 ವರ್ಷಗಳ ಕೆಳಗೆ ಅರ್ಜುನನಿಗೆ ಶ್ರೀಕೃಷ್ಣ ಭಗವಾನ್ ಹೇಳಿದ್ದಾರೆಂದು, ಶ್ರೀ ಕೃಷ್ಣ ಭಗವಾನೇ

ಮೋಷೇ (ಮೂಸಾ) ಗೆ ಸ್ವಪ್ನದಲ್ಲಿ ಭಗವದ್ಗೀತೆ ಗ್ರಂಥವನ್ನು ತೌರಾತ್ ಹೆಸರಿನಿಂದ ಕೊಟ್ಟಿದ್ದಾರೆಂದು ನಂತರ ಶ್ರೀಕೃಷ್ಣ ಭಗವಾನೇ ಏಸುಪ್ರಭುವಾಗಿ ಬಂದು ಬೈಬಲ್ (ಇಂಜೀಲ್) ಜ್ಞಾನ ಹೇಳಿದ್ದಾರೆಂದು ನಂತರ ಸೂರ್ಯನೇ ಹೆಸರು ಬದಲಾಯಿಸಿ ಕೊಂಡು ಜಿಬ್ರಯೇಲ್ ಆಗಿ ತೆರೆ ಹಿಂಬದಿಯಿಂದ ಮಹಮ್ಮದ್ ಪ್ರವಕ್ತಗೆ ಹೇಳಿದ್ದಾರೆ ಎಂದು ತಮ್ಮ ಗ್ರಂಥಗಳ ಮೂಲಕ ತಿಳಿದಿದೆ. ಯಾರಿಗೂ ತಿಳಿಯದ ಪರಮ ರಹಸ್ಯಗಳು ತಿಳಿದು ಆನಂದಭರಿತನಾಗಿದ್ದೇನೆ.

ತೌರಾತ್ (ಭಗವದ್ಗೀತೆ) ಪ್ರಕಾರ ನನಗೆ ತಿಳಿದ ನಿಗೂಢ ಜ್ಞಾನ ಸೃಷ್ಠಿ ಆದಿಯಲ್ಲಿ ಪರಮಾತ್ಮ ನಾಲ್ಕು ಭಾಗಗಳು (ಪ್ರಕೃತಿ, ಜೀವಾತ್ಮ, ಆತ್ಮ, ಪರಮಾತ್ಮ) ಆಗಿ ವಿಭಜಿಸಲ್ಪಟ್ಟಿದ್ದಾನೆ ಎಂದು, ಪ್ರಕೃತಿ ಎನ್ನುವುದು ಚರ, ಅಚರ ಪ್ರಕೃತಿಯಾಗಿ ಎರಡು ಭಾಗಗಳಾಗಿ ಬದಲಾಗಿದೆಯೆಂದು, ಚರ ಪ್ರಕೃತಿಯಾಗಿ 24 ಭಾಗಗಳ ಶರೀರ, ಅದರಲ್ಲಿ ಜೀವಾತ್ಮ, ಆತ್ಮ, ಪರಮಾತ್ಮಗಳು ಸೇರಿ 27 ಭಾಗಗಳು ಎಂದು, ಪ್ರಕೃತಿಯೇ ಮಾಯೆಯಾಗಿ ಗುಣಗಳ ರೂಪದಲ್ಲಿ (ಸೈತಾನ್) ತಲೆಯಲ್ಲಿ ಇದೆಯೆಂದು, ಬ್ರಹ್ಮ, ಕಾಲ, ಕರ್ಮ, ಗುಣ ಚಕ್ರಗಳು ಮನುಷ್ಯ ಕರ್ಮಗಳನ್ನು ಅನುಭವಿಸುವುದಕ್ಕೆ ಮೂಲ ಎಂದು, ಜೀವಾತ್ಮನಾದ ನಾನು ಗುಣಚಕ್ರದಲ್ಲಿ ರವೆಯಷ್ಟಾಗಿ ಇದ್ದೇನೆಂದು, ಆತ್ಮ ಶರೀರವೆಲ್ಲಾ ವ್ಯಾಪಿಸಿ ಇದೆಯೆಂದು, ಪರಮಾತ್ಮ ಶರೀರದ ಒಳಗೆ, ಹೊರಗೆ ಅಣುವಣುವು ವ್ಯಾಪಿಸಿ ಇದೆಯೆಂದು ಖುರಾನ್ 6–95 ಆಯತ್ ಪ್ರಕಾರ ಜೀವಾತ್ಮಗಳ ಜನ್ಮಗಳು ಮೂರು ವಿಧಗಳು ಅಂಡಜ, ಪಿಂಡಜ, ಉದ್ಭಿಜಗಳಾಗಿ ಇವೆಯೆಂದು, ಕರ್ಮಗಳು ಮೂರು ವಿಧಗಳು ಪ್ರಾರಬ್ಧ, ಆಗಾಮಿಕ, ಸಂಚಿತ ಕರ್ಮಗಳೆಂದು, ಮರಣಗಳು ಕೂಡಾ (ಮೂರು+ಒಂದು) ನಾಲ್ಕು ಎಂದು ಕಾಲ, ಅಕಾಲ, ತಾತ್ಕಾಲಿಕ, ಕೊನೆಯ ಮರಣಗಳು ಎಂದು ಅದ್ಭುತವಾದ ಅಗೋಚರ ಜ್ಞಾನ ತಿಳಿದಿದೆ.

ನಾನು ಜೀವಾತ್ಮನೆಂದು, ಪರಮಾತ್ಮ ಅಂಶನೆಂದು, ಕರ್ಮ ಬಂಧದಲ್ಲಿ ಸಿಲುಕಿಕೊಂಡು ಪ್ರಕೃತಿ ಕೈಯ್ಯಲ್ಲಿ ಇದ್ದೇನೆಂದು, ಕರ್ಮಗಳನ್ನು ನಾಶ ಮಾಡಿ ಕೊಂಡರೇನೇ ಜನ್ಮ, ಕರ್ಮ ಬಂಧನಗಳಿಂದ ಮುಕ್ತಿ ಉಂಟಾಗುತ್ತದೆಂದು, ಮುಕ್ತಿ ಉಂಟಾಗಬೇಕೆಂದರೇ ಭಗವದ್ಗೀತೆಯಲ್ಲಿ ಭಗವಾನನು ಹೇಳಿದ

ಧರ್ಮಗಳು ಬ್ರಹ್ಮ, ಕರ್ಮ, ಭಕ್ತಿ ಯೋಗಗಳ ಮೂಲಕವೇ ಮೋಕ್ಷ ಪ್ರಾಪ್ತಿಸುತ್ತದೆ ಎಂದು ತಿಳಿದಿದೆ. 1. ಬ್ರಹ್ಮಯೋಗ ಮನಸ್ಸನ್ನು ನಿಯಂತ್ರಿಸುವುದು ಎಂದು 2. ಕರ್ಮಯೋಗ ಅಹಂ (ಅಹಂಭಾವ) ಇಲ್ಲದಂತೆ, ನಾನೇ ಕಾರ್ಯಗಳನ್ನು ಮಾಡುತ್ತಿದ್ದೇನೆನ್ನುವ ಭಾವ ಇಲ್ಲದಂತೆ ಕಾರ್ಯಗಳು ಮಾಡುವುದು ಎಂದು 3. ಭಕ್ತಿಯೋಗ ಧರ್ಮಗಳ ಪ್ರಚಾರ, ದೈವಸೇವೆ ಎಂದು ಈ ಮೂರರ ಮೂಲಕವೇ ಕರ್ಮಗಳು ನಾಶ ಮಾಡಿಕೊಂಡು, ಜನ್ಮಗಳು ಇಲ್ಲದಂತೆ ಮಾಡಿಕೊಂಡು ಮೋಕ್ಷ ಹೊಂದಬೇಕೆಂದು ತಿಳಿದಿದೆ.

ಸೂಕ್ಷ್ಮದಲ್ಲಿ ಮೋಕ್ಷ ಎಂದರೇ ಭಗವಂತನನ್ನು ತಿಳಿದು ಸಾಕಾರವನ್ನು ಆರಾಧಿಸುವುದು ಭಗವದ್ಗೀತೆ ಶ್ಲೋಕಗಳು, 4–9, ಮತ್ತು 18–66 ಮೂಲಕ ತಿಳಿದಿವೆ. ಶಿಶು ಜನ್ಮಿಸಿದ ನಂತರ ಮೊದಲ ಶ್ವಾಸದಲ್ಲಿ ಜೀವಾತ್ಮ ಪ್ರವೇಶಿಸಿದ ನಂತರವೇ ಪ್ರಾಣ ಬರುತ್ತದೆಂದು, ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ ಎರಡು ಶರೀರಗಳು ಇವೆಯೆಂದು ಹಾಗೇ ಸ್ಥೂಲ, ಸೂಕ್ಷ್ಮ ಕರ್ಮಗಳು ಕೂಡಾ ಎರಡು ವಿಧಗಳು ಎಂದು, ದೆವ್ವಗಳು, ಭೂತಗಳ ಕುರಿತು ರಹಸ್ಯಗಳು ತಿಳಿದಿವೆ. ಬ್ರಹ್ಮವಿದ್ಯೆ ಶಾಸ್ತ್ರ ಆಧ್ಯಾತ್ಮಿಕ ಜ್ಞಾನನಿಧಿ ಎಂದು ತಿಳಿದುಹೋಗಿದೆ. ಮನುಷ್ಯನ ಶರೀರದಲ್ಲಿನ ಬ್ರಹ್ಮನಾಡಿಯಲ್ಲಿಯೇ, ವಿಶ್ವ ಅಡಗಿದೆಯೆಂದು, ಷಟ್ ಶಾಸ್ತ್ರಗಳು, ಸರ್ವ ವಿದ್ಯೆಗಳು, ಹೊರಗೆ ಸಮಸ್ತ ಪ್ರಪಂಚ, ಪ್ರಪಂಚವನ್ನು ಸೃಷ್ಠಿಸಿದ ದೇವರು, ಮೋಕ್ಷಪ್ರಾಪ್ತಿ ಕೂಡಾ, ಸರ್ವವು ಬ್ರಹ್ಮನಾಡಿಯಲ್ಲಿ ಅಡಗಿವೆಯೆನ್ನುವ ನಿಜ ತಿಳಿದಿದೆ.

ಖುರ್‌ಆನ್ ಮತ್ತು ಮುಸ್ಲೀಮ್‌ರ ವಿಷಯದಲ್ಲಿ ಅವರು ಅಜ್ಞಾನದಿಂದ, ಅಪೋಹಗಳಿಂದ, ಭ್ರಮೆಗಳಿಂದ ಖುರ್‌ಆನ್ ಗ್ರಂಥದಲ್ಲಿನ ಜ್ಞಾನವನ್ನು ಹೇಗೆ ತಪ್ಪು ಭಾವವನ್ನು ಹೇಳಿಕೊಳ್ಳುತ್ತಿದ್ದಾರೋ, ತಮ್ಮ ಜ್ಞಾನ ಗ್ರಂಥಗಳ ಮೂಲಕ ನಿಜಗಳು ತಿಳಿದು ವಿಸ್ಮಯ, ಆಶ್ಚರ್ಯ ಉಂಟಾಯಿತು. ಖುರಾನ್‌ನಲ್ಲಿ ಅಡಗಿರುವ ರತ್ನಗಳು, ಮುತ್ತುಗಳನ್ನು ಸಾಧಾರಣ ಕಲ್ಲುಗಳಾಗಿ ಭಾವಿಸಿದ ನಮ್ಮ ಮುಸ್ಲೀಮ್‌ರಿಗೆ ಹಂಚಿಕೊಟ್ಟಿರುವ ಜ್ಞಾನ ಪ್ರದಾತನಾಗಿ ನಿಮಗೆ ನನ್ನ ಸಾಷ್ಟಾಂಗ ಸುಮಾಂಜಲಿಯನ್ನು ತಿಳಿಸುತ್ತಿದ್ದೇನೆ.

ಸೂರಾ 3 ಆಯತ್ 7 ರ ಮುಖಾಂತರ ಖುರಾನ್‌ನಲ್ಲಿ ಮುಹ್ಕಮಾತ್ (ಸ್ಥೂಲ), ಮುತಷಾಬಿಹಾತ್ (ಸೂಕ್ಷ್ಮ) ಆಯತ್‌ಗಳು ಇವೆಯೆಂದು, ಶರೀರದಲ್ಲಿ ಅಡಗಿರುವ ಸೂಕ್ಷ್ಮ ಜ್ಞಾನವನ್ನು ಕುರಿತು ತಿಳಿಯದ ಜ್ಞಾನವನ್ನು **ಅಂತಿಮ ಗ್ರಂಥದಲ್ಲಿ, ಜ್ಞಾನ ವಾಕ್ಯಗಳು, ವಜ್ರ ವಾಕ್ಯಗಳು** ಎನ್ನುವ ಎರಡು ಜ್ಞಾನ ಗಣಿಗಳನ್ನು ನಮ್ಮ ಮುಸ್ಲೀಮ್ ಸಮಾಜಕ್ಕೆ ಕೊಟ್ಟಿರುವ ತಮ್ಮ ಋಣ ತೀರಿಸಲು ಸಾಧ್ಯವಿಲ್ಲ. ಒಟ್ಟಾರೆ ಮುಸ್ಲೀಮ್ ಸಮಾಜಕ್ಕೇ ತಿಳಿಯದ ಅಗೋಚರ ಜ್ಞಾನವನ್ನು ತಿಳಿಸಿದ ಖುದಾಗೆ (ಅಲ್ಲಾಹ್ ಜ್ಞಾನ ಅಲ್ಲಾಹ್‌ಗೆ ಹೊರತು ಯಾರಿಗೂ ತಿಳಿದಿಲ್ಲ) ಭಗವಂತನಿಗು, ಆದರಣಕರ್ತಗೂ ನನ್ನ ಸಜ್‌ದಾ ಮಾಡುತ್ತಿದ್ದೇನೆ.

ಏಳು ಆಕಾಶಗಳು, ಭೂಮಿ ಅವುಗಳ ಮಧ್ಯದಲ್ಲಿರುವ ಸಮಸ್ತ ಅಂದರೇ ಶರೀರ ಎಂದು 30–8, 11–123, 74–30,31 ಆಯತ್‌ಗಳ ಮೂಲಕ, ಮುಸ್ಲೀಮ್‌ರಿಗೆ ಇಲ್ಲಿಯವರೆಗು ತಿಳಿಯದ ದೊಡ್ಡ ರಹಸ್ಯ ತಿಳಿಸಿದ್ದೀರ. ಶರೀರದಲ್ಲೇ ಮೂರು ಆತ್ಮಗಳು ಇವೆಯೆಂದು ಖುರಾನ್ ಆಯತ್ 50–21 ಮೂಲಕ **"ನಡೆಸಲ್ಪಡುವವನು ಜೀವಾತ್ಮ, ನಡೆಸುವವನು ಆತ್ಮ, ಸಾಕ್ಷಿಯಾಗಿ ನೋಡುವವನು ಪರಮಾತ್ಮ"** ಎಂದು, ಇವು ಭಗವದ್ಗೀತೆಯಲ್ಲಿ 14–16,17 ಮತ್ತು ಬೈಬಲ್‌ನಲ್ಲಿ ಮತ್ತಾಯ ಸುವಾರ್ತೆಯಲ್ಲಿ 28–19 ರಲ್ಲಿ ಮೂರು ದೈವಗ್ರಂಥಗಳಲ್ಲಿ ಇರುವ ವಿಷಯ ಮುಸ್ಲೀಮ್ ಸಮಾಜಕ್ಕೆ ಒಂದು ಕಣ್ತೆರೆಸುವಂತೆ ಇದೆ. ಮುಸ್ಲೀಮ್‌ರು ಆಚರಿಸುವ ನಮಾಜ್ ತಪಸ್ಸು ಎಂದು, ನಿಜವಾದ ನಮಾಜ್ ಶರೀರದಲ್ಲೇ ಇದೆಯೆಂದು 4–103, 3–191 ಆಯತ್‌ಗಳ ಮೂಲಕ ತಿಳಿದಿದೆ. ಜಕಾತ್ ಎಂದರೇ ನೂರು ರೂಪಾಯಿಗಳಿಗೆ 2.50 ರೂಪಾಯಿಗಳನ್ನು ಬಡವರಿಗೆ ಹಂಚುವುದು ಅಲ್ಲವೆಂದು ದೈವ ಸೇವೆ, ಧರ್ಮಪ್ರಚಾರವೆಂದು (ಭಗವದ್ಗೀತೆಯಲ್ಲಿ ಹೇಳಿದ ಬ್ರಹ್ಮ, ಕರ್ಮ, ಭಕ್ತಿ ಯೋಗಗಳು ಎಂದು) ಖುರಾನ್ 48–15,16,17 ಆಯತ್‌ಗಳೆಂದು, ರೋಜಾ ಎಂದರೇ ಅನ್ನ ತಿನ್ನದೇ ಇರುವುದಲ್ಲವೆಂದು, ಖುರ್‌ಆನ್ 2–187 ಆಯತ್ ಮೂಲಕ ಆತ್ಮನನ್ನು ಹೊಂದುವುದು ಉಪವಾಸವೆಂದು ತಿಳಿದಿದೆ. ಹಜ್‌ನಲ್ಲಿ ಮಾಡುವ ಆಚರಣೆ ಸಫಾ, ಮರ್ವಾ, ಚರ, ಅಚರ ಪ್ರಕೃತಿಗೆ ಗುರುತುಗಳೆಂದು ತಿಳಿಯದ ರಹಸ್ಯ ತಿಳಿದಿದೆ.

ಮುಸ್ಲೀಮ್‌ರಿಗೆ ಖುರ್‌ಆನ್‌ನಲ್ಲಿ ಸೂಕ್ಷ್ಮ ಆಯತ್‌ಗಳು ಅರ್ಥವಾಗದೇ ಸ್ಥೂಲವಾಗಿ ಹೇಳಿಕೊಂಡು ಒಟ್ಟಾರೆ ಮುಸ್ಲೀಮ್ ಸಮಾಜಕ್ಕೆ ಖುರ್‌ಆನ್ ದೂರ ಮಾಡಿ ಆಯತ್ 2–79 ಪ್ರಕಾರ ಮನುಷ್ಯರು ಹದೀಸುಗಳನ್ನು ಬರೆದುಕೊಂಡು ಅವು ಮಾತ್ರವೇ ಬೋಧಿಸುತ್ತಾ ಒಟ್ಟಾರೆ ಮುಸ್ಲೀಮ್ ಸಮಾಜ ವನ್ನು 72 ವರ್ಗಗಳಾಗಿ ಸೀಳಿಸಿ, ಖುರ್‌ಆನ್‌ಗು, ಅಲ್ಲಾಹ್ ಗು ದೂರ ಮಾಡಿ ಖುರ್‌ಆನ್ ಆಯತ್‌ಗಳು 2–159, 41–40 ಪ್ರಕಾರ ಅಲ್ಲಾಹ್ ಶಾಪಕ್ಕೆ ಗುರಿಯಾಗಿದ್ದಾರೆ. ಸ್ವರ್ಗವೇ ಜೀವಿತ ಲಕ್ಷ್ಯವಾಗಿ ಇಟ್ಟುಕೊಂಡಿದ್ದಾರೆ. ಮುಸ್ಲೀಮ್‌ರಿಗೆ ಸ್ವರ್ಗ, ನರಕ ಹೊರತು, ಪರಲೋಕ (ಮೋಕ್ಷ) ಅಂದರೆ ಏನೋ? ಅವು ಎಲ್ಲಿ ಇರುತ್ತವೋ ತಿಳಿಯದಂತಿದ್ದಾರೆ. ಆಯತ್‌ಗಳು 10–106, 107, 108 ಸ್ವರ್ಗ, ನರಕವನ್ನು ಕುರಿತು, 3–14, 6–127, 13–24, 30–7,8, 40–39, 40 ಪರಲೋಕವನ್ನು ಕುರಿತು ಖುರ್‌ಆನ್‌ನಲ್ಲಿ ಇದ್ದರೂ, ಮುಸ್ಲೀಮ್ ಹಿರಿಯರಿಗೆ ತಿಳಿಯದೆ ಹೋಗಿರುವುದು ದುರದೃಷ್ಟಕರ.

ಮುಸ್ಲೀಮ್‌ರಿಗೆ ಪುನರ್ಜನ್ಮಗಳು ಇವೆಯೆಂದು ಖುರ್‌ಆನ್ ಆಯತ್ ಗಳು 7–29, 22–66, 36–68, 40–11 ಹೇಳುತ್ತಿವೆ. ಗತ ಜನ್ಮದಲ್ಲಿ ಮಾಡಿಕೊಂಡ ಕರ್ಮಗಳು ಅನುಭವಿಸುವುದಕ್ಕೇ ಜನ್ಮಗಳು ಇವೆಯೆಂದು ಆಯತ್ 10–4 ಹೇಳುತ್ತಿದೆ. ಮುಸ್ಲೀಮ್‌ರಿಗೆ ತಬ್ದೀರ್ (ಕರ್ಮ) ಅಂದರೇ ಪೂರ್ತಿಯಾಗಿ ತಿಳಿದಿಲ್ಲ. ಆಯತ್ 9–51, 57–22 ಹುಟ್ಟುವುದಕ್ಕಿಂತ ಮೊದಲೇ ಎಲ್ಲಾ ಬರೆಯಲ್ಪಟ್ಟಿವೆಯೆಂದರೇ ಏನು ಬರೆಯಲ್ಪಟ್ಟಿವೆಯೋ ತಿಳಿಯದೆ ಅಯೋಮಯದಲ್ಲಿ ಇದ್ದಾರೆ. 7–187, 30–56 ಪ್ರಳಯವನ್ನು ಕುರಿತು, 9–5, 5–32 ಜೀಹಾದ್ ಕುರಿತು, 72–6, 3–41 ಜಿನ್ನಾತರನ್ನು ಕುರಿತು, 40–40, 48–5 ಸ್ತ್ರೀಯರಿಗೆ ಸ್ವರ್ಗವನ್ನು ಕುರಿತು ಖುರಾನ್‌ನಲ್ಲಿ ಸ್ಪಷ್ಟವಾಗಿ ಇದ್ದರೂ ತಿಳಿಯದಂತಿದ್ದಾರೆ.

97–1,2,3,4,5 ಖುರ್‌ಆನ್ ಆಯತ್‌ಗಳ ಮೂಲಕ ಸೃಷ್ಠಿ ರಹಸ್ಯ ತಿಳಿದಿದೆ. ಅದಕ್ಕೆ ಭಿನ್ನವಾಗಿ ಮುಸ್ಲೀಮ್‌ರು ಲೈಲ ತುಲ್ ಖದ್ರಿ ಅಂದರೇ ರಂಜಾನ್ ಅವತರಿಸಿದ ದಿನ ಎಂದು ಹೇಳಿಕೊಳ್ಳುತ್ತಾ ಅಧರ್ಮ ಆಚರಣೆ ಮಾಡುತ್ತಿದ್ದಾರೆ. ತಮ್ಮ ಗ್ರಂಥಗಳ ಜ್ಞಾನದ ಮೂಲಕ ನಿಜವಾದ ಮುಸ್ಲೀಮ್‌ಗಿ ಬದಲಾಗಿದ್ದೇನೆ. ತಮಗೆ ಸಾಷ್ಟಾಂಗ ನಮಸ್ಕಾರಗಳು.

# ಮುಸ್ಲೀಮ್ ಸಮಾಜಕ್ಕೆ ನನ್ನ ವಿಜ್ಞಪ್ತಿ ಏನೆಂದರೆ!

ಒಟ್ಟಾರೆ ಮುಸ್ಲೀಮ್ ಸಮಾಜವು ಖುರ್‌ಆನ್‌ನಲ್ಲಿ ಅಲ್ಲಾಹ್ ಹೇಳಿದ ಖುರ್‌ಆನ್‌ನಲ್ಲಿ ಇರುವ ಸುರಾ 3 ಆಯತ್ 7 ರ ಪ್ರಕಾರ ಮುಹ್ಕಮಾತ್, ಮುತಷಾಬಿಹಾತ್ ಅಂದರೇ ಸ್ಥೂಲವಾಕ್ಯಗಳು, ಸೂಕ್ಷ್ಮವಾಕ್ಯಗಳು ಅಂದರೆ ಏನೋ ತಿಳಿಯದೆ ಅಜ್ಞಾನದಿಂದ, ಖುರ್‌ಆನ್ ಪ್ರವಕ್ತರಿಗೇ ಅರ್ಥವಾಗುತ್ತದೆ, ನಮಗೆ ಅರ್ಥವಾಗುವುದಿಲ್ಲವೆಂದು, ಪ್ರವಕ್ತ ಜೀವಿತ ವಿಧಾನವೇ ನಾವು ಆಚರಿಸಬೇಕೆಂದು ಮುಸ್ಲೀಮ್ ಹಿರಿಯರು, ಹದೀಸುಗಳು ಬರೆದು ಅವುಗಳನ್ನು ಮಾತ್ರವೇ ಬೋಧಿಸುತ್ತಾ ಖುರ್‌ಆನ್ ಜ್ಞಾನಕ್ಕೆ, ಅಲ್ಲಾಹ್‌ಗೆ ಒಟ್ಟು ಮುಸ್ಲೀಮ್ ಸಮಾಜವನ್ನು ದೂರ ಮಾಡಿ, ತೀರದ ಅನ್ಯಾಯ ಮಾಡಿ ಅಲ್ಲಾಹ್ ಶಾಪಕ್ಕೆ ಗುರಿಯಾಗಿದ್ದಾರೆ (ಆಯತ್‌ಗಳು 2–159, 41–40). ಖುರ್‌ಆನ್ ಆಯತ್ 6–91 ರಲ್ಲಿ "ನಿಮ್ಮ ಹಿರಿಯರಿಗೆ ತಿಳಿಯದ ವಿಷಯಗಳು ಎಷ್ಟೋ ತೌರಾತ್‌ನಲ್ಲಿ ತಿಳಿಯಲ್ಪಟ್ಟಿವೆಯೆಂದು" ಇದೆ. ಖುರ್‌ಆನ್ ಆಯತ್ 2–79 ಪ್ರಕಾರ ಮನುಷ್ಯರು ಬರೆದ ಹದೀಸುಗಳನ್ನು ಬಿಟ್ಟು, ನಿಜವಾದ ಅಲ್ಲಾಹ್ ಭಕ್ತರಾಗಿ, ಖುರ್‌ಆನ್ ಆಯತ್ 51–56 ಪ್ರಕಾರ ಅಲ್ಲಾಹ್‌ನನ್ನು, ನಿಜಜ್ಞಾನ ತಿಳಿದು ಆರಾಧಿಸೋಣ. ಮುಸ್ಲೀಮ್ ಹಿರಿಯರು ಅವರಿಗೇ ಖುರ್‌ಆನ್ ಪ್ರಕಾರ ನಿಜ ಜ್ಞಾನ ತಿಳಿಯದೆ ತಬ್ದೀರ್ ಕುರಿತು, ಪುನರ್ಜನ್ಮಗಳ ಕುರಿತು, ಪ್ರಳಯ ಕುರಿತು, ಜೀಹಾದ್ ಕುರಿತು ಸ್ವರ್ಗ, ನರಕ, ಮೋಕ್ಷ ಕುರಿತು, ಮುಖ್ಯವಾಗಿ ನಮಾಜ್, ಜಕಾತ್, ರೋಜಾ, ಹಜ್ ಕುರಿತು ಅರ್ಥವಾಗದೆ ತಪ್ಪು ಭಾವದೊಂದಿಗೆ ಹದೀಸುಗಳನ್ನು ಬರೆದು, ಖುರ್‌ಆನ್ ಜ್ಞಾನ ತಪ್ಪು ಭಾವವನ್ನು ಹೇಳಿ, ಮುಸ್ಲೀಮ್ ಸಮಾಜವನ್ನು 72 ವರ್ಗಗಳಾಗಿ ಸೀಳಿಸಿದ್ದಾರೆ. ಸ್ವರ್ಗವನ್ನು ಹೊಂದುವುದೇ ಜೀವಿತ ಲಕ್ಷ್ಯವಾಗಿ ಹದೀಸುಗಳನ್ನು ಬೋಧಿಸುತ್ತಿದ್ದಾರೆ.

ಮುಸ್ಲೀಮ್‌ರೇ! ಇಂದಿಗಾದರೂ ಎಚ್ಚರಗೊಳ್ಳಿರಿ. ಅಲ್ಲಾಹ್ ನಮ ಗೋಸ್ಕರ ಖುರ್‌ಆನ್ ಆಯತ್ 2–186 ಪ್ರಕಾರ ಒಬ್ಬ ವ್ಯಕ್ತಿಯಲ್ಲಿ ದೈವಶಕ್ತಿ ಮೂಲಕ ನಿಜವಾದ ಜ್ಞಾನವನ್ನು ತಿಳಿಸುವುದಕ್ಕೆ ಕಳುಹಿಸಿ ನಮ್ಮನ್ನು ನಿಜವಾದ ಮುಸ್ಲೀಮ್‌ರಾಗಿ, ಸಂಪೂರ್ಣ ಮುಸ್ಲೀಮ್‌ರನ್ನಾಗಿ ಮಾಡುವುದಕ್ಕೆ ಕಳುಹಿಸಿ, ಯೋಗೀಶ್ವರರ ಮೂಲಕ **“ಅಂತಿಮ ದೈವ ಗ್ರಂಥದಲ್ಲಿ ಜ್ಞಾನ ವಾಕ್ಯಗಳು, ವಜ್ರ**

**ವಾಕ್ಯಗಳು"** ಎಂದು ಮುಸ್ಲೀಮ್ ಸಮಾಜಕ್ಕೆ ತಿಳಿಯದ ಖುರ್‌ಆನ್ ಸೂಕ್ಷ್ಮ ಆಯತ್‌ಗಳ ಜ್ಞಾನವನ್ನು ಅಲ್ಲಾಹ್ ಪ್ರೇರಣೆಯಿಂದ (ಸಂಕಲ್ಪದಿಂದ) ನಮಗೆ ಎರಡು ಗ್ರಂಥಗಳನ್ನು ಅವುಗಳಿಗೆ ಅನುಬಂಧ ಗ್ರಂಥಗಳನ್ನು ಬರೆದು ಕೊಟ್ಟಿದ್ದಾರೆ. ಆದ್ದರಿಂದ ಸ್ವರ್ಗಕ್ಕೆ ತೆಗೆದುಕೊಂಡು ಹೋಗುವ ಹದೀಸುಗಳನ್ನು ಬಿಟ್ಟು, ಮೋಕ್ಷಕ್ಕೆ ತೆಗೆದುಕೊಂಡು ಹೋಗುವ ಖುರ್‌ಆನ್ ಆಯತ್ 40–39, 41 ನ್ನು ತೆಗೆದುಕೊಂಡು ಆಚರಿಸಿ, 72 ವರ್ಗಗಳನ್ನು ಬಿಟ್ಟು ನಿಜವಾದ ಅಲ್ಲಾಹ್ ಮಾರ್ಗದೊಳಗೆ ಬರಬೇಕೆಂದು ಅದಕ್ಕಾಗಿ ಯೋಗೀಶ್ವರರ ಗ್ರಂಥಗಳನ್ನು ಅಸೂಯೆ ಇಲ್ಲದೆ ಓದಿ, ಅರ್ಥ ಮಾಡಿಕೊಂಡು ಆಚರಿಸಿ ನಿಜವಾದ 73 ನೇ ಅಲ್ಲಾಹ್ ವರ್ಗದೊಳಗೆ ಬಂದು ಮೋಕ್ಷ ಹೊಂದೋಣ (ಖುದಾ ಹಫಿಜ್). ಖುದಾಗೆ ನಿಮ್ಮ ಪ್ರಿಯ ಭಕ್ತನ ವಿಜ್ಞಪ್ತಿ. ನನಗೆ ಸಂಪೂರ್ಣ ಜ್ಞಾನ ಪ್ರಸಾದಿಸೆಂದು, ಭಗವದ್ಗೀತೆ ಶ್ಲೋಕ 17–66 ರ ಪ್ರಕಾರ ಶರಣು ಬೇಡಿಕೊಳ್ಳುತ್ತಿದ್ದೇನೆ. ನನ್ನ ಜೀವನ ಧ್ಯೇಯ ದೈವ ಜ್ಞಾನ ತಿಳಿದುಕೊಳ್ಳುತ್ತಾ ದೈವಸೇವೆಯಾಗಿ ಧರ್ಮಪ್ರಚಾರ ಮಾಡಿಕೊಳ್ಳಬೇಕೆಂದು ನಿರ್ಣಯಿಸಿಕೊಂಡಿದ್ದೇನೆ. ಅದಕ್ಕೆ ಬೇಕಾದ ಶಕ್ತಿ ಸಾಮರ್ಥ್ಯಗಳನ್ನು ಅನುಗ್ರಹಿಸಿರೆಂದು, ನಿಮ್ಮ ದರ್ಶನ ಭಾಗ್ಯವನ್ನು ಕಲ್ಪಿಸಬೇಕೆಂದು, ಈ ಜ್ಞಾನ ಹೇಳಿರುವುದು ಸಾಕ್ಷ್ಯಾತ್ತೂ ಖುದಾ, ಭಗವಂತನೇ, ಆದರಣ ಕರ್ತನೇ ಎಂದು ಸಂಪೂರ್ಣವಾಗಿ ವಿಶ್ವಾಸಿಸುತ್ತಾ.... ಸಾಷ್ಟಾಂಗ ನಮಸ್ಕಾರಗಳನ್ನು ಮಾಡುತ್ತಿದ್ದೇನೆ.

ಇಂತಿ ನಿಮ್ಮ ಪ್ರಿಯ ಭಕ್ತನು

**ಸಯ್ಯದ್ ಸಲ್ಮಾನ್‌ಷಾ**

*****

**ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರ ಎಷ್ಟು ಅವಶ್ಯವೋ, ಹಾಗೇ ಒಂದು ವಿಷಯವನ್ನು ಖಂಡಿಸುವುದಕ್ಕೂ ಶಾಸ್ತ್ರ ಅಷ್ಟೇ ಅವಶ್ಯವಾಗುತ್ತದೆ.**

***

**ಅಸತ್ಯವನ್ನು ಸಾವಿರ ಮಂದಿ ಹೇಳಿದರೂ, ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರ ಮಂದಿ ಅಲ್ಲಗಳೆದರೂ, ಅದು ಅಸತ್ಯವಲ್ಲ.**